
# ಅಪರಂಜಿ

ತಿಳಿನಗೆಯ ಕಾರಂಜಿ

ಆಗಸ್ಟ್ 2019




ಬಿಡಿ ಪ್ರತಿ: ರೂ.10.00

## ಸಂಪಾದಕ ಮಂಡಳಿ

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್



**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ




# ಅಪರಂಜಿ

ತಿಳಿನಗೆಯ ಕಾರಂಜಿ


**ಸಂಪುಟ 36**

**ಸಂಚಿಕೆ - 11**

**ಆಗಸ್ಟ್ - 2019**


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಅಗ್ನಿ ರಥಗಳು | ಭಕ್ತ | 7 |
| ಮರವೆ | ಸಿ.ಆರ್. ಸತ್ಯ | 12 |
| ಓಲ್ಡ್ ಮಾಡೆಲ್ಸ್ | ಡಾ. ಶ್ಯಾಮಲಾ ರವಿಶಂಕರ್ | 15 |
| ಡ್ರೀಂ ದೇಖ್ತಾ ..... | ವೀಣಾ ರಂಗನಾಥ್ | 18 |
| ಔಟ್ ಸೋರ್ಸ್ | ನಂ ನಾಗ್ರಾಜ್ | 20 |
| ಜಿರಳೆ ರಗಳೆ | ಅನುಪಮಾ | 23 |
| ತುಂತುರು | ದಂನಆ | 28 |
| ದೇವರ ಅತಿಥಿ | ಪಾಲಹಳ್ಳಿ ವಿಶ್ವನಾಥ್ | 29 |
| ಗಡಿಬಿಡಿ ಗುಂಡಿ | ಸಹನಾ ಪ್ರಸಾದ್ | 33 |
| ಎಚ್ಚೆನ್ ನೆನಪುಗಳು | ಸುಕೇಶವ | 35 |
| ಸೋಮು ಎನ್ನುವ ನದಿ | ಬೇಲೂರು ರಾಮಮೂರ್ತಿ | 38 |


**ಮುಖಪುಟ ವ್ಯಂಗ್ಯಚಿತ್ರ : ಜನಾರ್ಧನ ಸ್ವಾಮಿ**


*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. *ಸಂಪರ್ಕ* : email: koravanjiaparanji@gmail.com ದೂ: 9845264304



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: beluruRamamurthy@gmail.com



*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

## ಅಪರಂಜಿ ಕಿಡಿ

● **ಪ್ರಕಾಶ್**



ಕುಸ್ತಿಯ ಕಣವಾದ ವಿಧಾನಸೌಧ -ಶೀರ್ಷಿಕೆ

**ಮಹಾತ್ಮರ ಆತ್ಮ ಮರುಗಿತಂತೆ!!**

★★★★★

ಗೋವಾ : ಕಾಂಗ್ರೆಸ್‌ನ ಹತ್ತು ಶಾಸಕರು ಬಿ.ಜೆ.ಪಿ. ತೆಕ್ಕೆಗೆ -ಸುದ್ದಿ

**'ಗೋ', 'ವಾ' ಎರಡೂ ಆದಂತಾಯಿತಲ್ಲಾ!!**

★★★★★

ವಿಧಾನಸೌಧ ಸುತ್ತ ನಿಷೇಧಾಜ್ಞೆ -ಪತ್ರಿಕೆ

**ಕಲಿಗಾಲ ಎಂದರೆ ಇದೇ!!**

★★★★★

ಅರಣ್ಯ ಇಲಾಖೆ : ಅಕ್ರಮ ಬಡ್ತಿ ಪಡೆದವರಿಗೇ
ಪ್ರಮುಖ ಸ್ಥಾನ -ಸುದ್ದಿ

**ಅರಣ್ಯರೋದನ!!**

★★★★★

ಚಿತ್ರಕಲಾ ಪರಿಷತ್ತಿಗೆ ಆರ್ಥಿಕ ನಷ್ಟ: ದೂರು -ಪತ್ರಿಕೆ

**ಕಲೋಪಾಸಕರಿಗೂ ಧನದಾಸೆ!!**

★★★

ಮಗುವಿಗೆ ಬೇಕು ಬಹು ಭಾಷಾ ಜ್ಞಾನ -ಪತ್ರಿಕೆ

**ಪಾಪ! ಅವುಗಳ ಪಾಡು?**

★★★★

ನೀರಿಗಾಗಿ ಹಿಮಖಂಡಕ್ಕೆ ಹಗ್ಗ -ಸುದ್ದಿ

**ಹರಹರ ಮಹದೇವ!?**

# "ನಮ್ಮ ನಿಮ್ಮಲ್ಲಿ"

● ಶಿವಕುಮಾರ್

1982ನೇ ಇಸವಿ ಅಕ್ಟೋಬರ್ ತಿಂಗಳು ಅಪರಂಜಿಯ ಮೊದಲನೆಯ ಸಂಚಿಕೆ ಚಿತ್ರದುರ್ಗದಲ್ಲಿ ಬಿಡುಗಡೆಯಾಯಿತು. ಇದಕ್ಕೆ ಹಲವು ತಿಂಗಳುಗಳ ಮುಂಚೆ ಅ.ರಾ.ಸೇ. ಮತ್ತು ಶೇಷಗಿರಿ ಇಬ್ಬರೂ, ಕೊರವಂಜಿಯನ್ನು ಪುನಃ ಪ್ರಾರಂಭಿಸಲು ರಾ.ಶಿ. ಯವರ ಒಪ್ಪಿಗೆ ಪಡೆಯಲು ನಮ್ಮ ಮನೆಗೆ ಬಂದಿದ್ದರು. ರಾ.ಶಿ. ಯವರು, ''ಕಾಡಿಗೆ ಹೋಗಿರುವ ಕೊರವಂಜಿ ಕಾಡಿನಲ್ಲೇ ನಲಿದಾಡುತ್ತಿರಲಿ, ಅವಳನ್ನು ಅಪರಂಜಿಯನ್ನಾಗಿ ನಾಡಿನಲ್ಲಿ ನಲಿದಾಡಿಸಿ. ಅಪರಂಜಿಯು ಚಿರಕಾಲ ನಗುತ್ತಾ, ನಗಿಸುತ್ತಾ ಬಾಳಲಿ.'' ಎಂದು ಹೇಳಿ ಅವರನ್ನು ಆಶೀರ್ವದಿಸಿ ಬೀಳ್ಕೊಟ್ಟಿದ್ದರು. ಅಪರಂಜಿಯ ಬಿಡುಗಡೆ ಸಮಾರಂಭದ ದಿನ, ಶಿವಮೊಗ್ಗ ಸುಬ್ಬಣ್ಣ ಮತ್ತು ನಾನು ಇಬ್ಬರೂ ಬೆಂಗಳೂರಿನಿಂದ ಹೊರಟು ಸಮಾರಂಭದ ಪ್ರಾರಂಭದ ಹೊತ್ತಿಗೆ ಚಿತ್ರದುರ್ಗ ಸೇರಿದ್ದೆವು. ಸ್ವಾಗತ ಭಾಷಣ ಮಾಡಿದ ಅ.ರಾ.ಸೇ ತಮ್ಮ ಮಾತಿನ ಮಧ್ಯೆ, ''ಅಪರಂಜಿ ಪ್ರಾರಂಭಕ್ಕೆ ಈ ಭಾನುವಾರ ಸಂಜೆ ನಾಲ್ಕೂವರೆಯೇ ಆಗಬೇಕಿತ್ತೇ? ಹೇಳಿ ಕೇಳಿ ರಾಹುಕಾಲದ ಪ್ರಾರಂಭ ಅಂತ ಹಲವರು ನನ್ನನ್ನ ಟೀಕಿಸಿದರು. ನಾನು ಅವರಿಗೆ ಹೇಳುವುದಿಷ್ಟೇ. ನಮ್ಮ ಗುರುಗಳು ಇದು ಅಮೃತ ಘಳಿಗೆ. ಈಗ ಪ್ರಾರಂಭವಾದ ಯಾವುದೇ ಚಟುವಟಿಕೆ ನಿರಂತರವಾಗಿ ನಡೆಯುತ್ತದೆ ಅಂತ ಹೇಳಿದರು. ಅಪರಂಜಿಗೆ ಭವ್ಯವಾದ ಭವಿಷ್ಯ ಸಿಗಲಿ ಎಂಬ ಉದ್ದೇಶದಿಂದ ರಾಹುಕಾಲವಾದರೂ ಈಗಲೇ ಪತ್ರಿಕೆಯ ಬಿಡುಗಡೆಮಾಡಲು ನಿಶ್ಚಯಿಸಿದ್ದೇವೆ'' ಎಂಬ ಅರ್ಥಬರುವ ಮಾತುಗಳನ್ನು ಹೇಳಿದ್ದರು.

ರಾ.ಶಿ ಮತ್ತು ಅ.ರಾ.ಸೇ ಯವರು ಅಂದು ಆಡಿದ ಮಾತುಗಳು ಮೊನ್ನೆ ನೆನಪಿಗೆ ಬಂದವು. ಅಪರಂಜಿಗೆ ಒಂದು ಸದೃಢ ಆರ್ಥಿಕ ತಳಹದಿಯನ್ನು ಒದಗಿಸುವ ಉದ್ದೇಶದಿಂದ ಕಳೆದ ತಿಂಗಳು ನಾವು ಮೂಲಧನ ದೇಣಿಗೆಯ ಸಂಗ್ರಹಣೆ ಕಾರ್ಯಕ್ರಮವನ್ನು ಕೈಗೊಂಡಿದ್ದು ನಿಮಗೆಲ್ಲಾ ತಿಳಿದೇ ಇದೆ. ನಮ್ಮ ಈ ವಿನಂತಿಗೆ ಓಗೊಟ್ಟು ಅನೇಕ ಸಹೃದಯ ಸಜ್ಜನರು ಬಿಡುಗೈಯಿಂದ ದೇಣಿಗೆ ನೀಡಿದ್ದಾರೆ. ಹಣಕ್ಕಿಂತ ಮಿಗಿಲಾಗಿ ಅವರುಗಳು ಅಪರಂಜಿ ಬಗ್ಗೆ, ಕೊರವಂಜಿಯ ಪರಂಪರೆಯ ಬಗ್ಗೆ ಆಡಿರುವ ಮೆಚ್ಚುಗೆಯ, ಪ್ರೀತಿಯ ಮಾತುಗಳು ನಮ್ಮೆಲ್ಲರ ಹೃದಯ ತುಂಬುವಂತೆ ಮಾಡಿವೆ.

ದೇಣಿಗೆ ಕೊಟ್ಟಿರುವ ಬಹುತೇಕ ಮಂದಿ ತಮ್ಮ ಹೆಸರನ್ನು

ಹೊರಗೆಡಹಬಾರದೆಂಬ ತಾಕೀತನ್ನೂ ಮಾಡಿದ್ದಾರೆ. ಎಲೆ ಮರೆಯ ಕಾಯಿಯಂತೆ ಇವರ ಕೈಂಕರ್ಯ. ಆದರೂ ಸಹಾ ಹಲವರ ಆತ್ಮೀಯ ಪತ್ರಗಳನ್ನಾದರೂ ನಿಮ್ಮೊಂದಿಗೆ ಹಂಚಿಕೊಳ್ಳುವ ಹಂಬಲ ನನ್ನದು. ಉದಾರ ದೇಣಿಗೆಯೊಂದಿಗೆ ನಮಗೆ ತಲುಪಿರುವ ನೂರಾರು ಪತ್ರಗಳನ್ನು ಪ್ರತಿನಿಧಿಸುವ ಮೂರು ಪತ್ರಗಳು ಈ ಕೆಳಗೆ ಅಡಕವಾಗಿವೆ.

ಮೊದಲನೆಯ ಪತ್ರದಲ್ಲಿ ಈಕೆ ಹೀಗೆ ಬರೆಯುತ್ತಾರೆ. ''ಮೂವತ್ತೈದು ವರ್ಷಗಳ ಹಿಂದೆ ಪ್ರಾರಂಭಿಸಿದ ಪರಂಪರೆಯನ್ನು ರಕ್ಷಿಸಲು ಪಣ ತೊಟ್ಟಿರುವ ಕಾರ್ಯಶೀಲ ಧೀರರ ಗುಂಪಿಗೆ ಎಲ್ಲ ಶುಭಹಾರೈಕೆಗಳೊಂದಿಗೆ ಈ ಕಿರುಕಾಣಿಕೆ.''

ಎರಡನೆಯ ಪತ್ರದ ಒಕ್ಕಣೆ ಹೀಗಿದೆ. ''ಗೌರವ, ಮೆಚ್ಚುಗೆ ಹಾಗೂ ಸಂತಸದಿಂದ ನಾನು ಈ ಕಿರು ಕಾಣಿಕೆಯನ್ನು ನೀಡುತ್ತಿರುವೆ. ಇದನ್ನು ದಯವಿಟ್ಟು ಸ್ವೀಕರಿಸಿ, ನಿಮ್ಮ ನಗೆ ಸಂಸ್ಕೃತಿಯನ್ನು ಹರಡುವ ಕಾರ್ಯವನ್ನು ಮುಂದುವರಿಸಿ. ನನಗೆ ಈ ಅಪೂರ್ವ ಅವಕಾಶವನ್ನು ನೀಡಿದ್ದಕ್ಕಾಗಿ ನಾನು ನಿಮಗೆ ಋಣಿ. ಮುಂದೆ ನಿಮಗೆ ಯಾವುದೇ ಸಹಾಯ ಅಗತ್ಯವೆನಿಸಿದರೂ ನಾನು ನಿಮ್ಮ ಬೆಂಬಲಕ್ಕಿರುವುದನ್ನು ಮರೆಯಬೇಡಿ.''

ಮೂರನೆಯ ಪತ್ರದಲ್ಲಿನ ಹೃದಯಸ್ಪರ್ಶಿ ಭಾವನೆಗಳು ಇಂತಿವೆ. ''ನಾನು ಮತ್ತು ನನ್ನ ದಿವಂಗತ ಸಹೋದರ ಇಬ್ಬರೂ ನಿಮ್ಮ ಕೊರವಂಜಿ ಮತ್ತು ಅಪರಂಜಿ ಪತ್ರಿಕೆಗಳ ಅಭಿಮಾನಿಗಳು. ಪ್ರತಿ ವರ್ಷ ಪ್ರತಿ ತಿಂಗಳೂ ನಮ್ಮ ಮನೆಗೆ ಈ ಹಿಂದೆ ಕೊರವಂಜಿ ಮತ್ತು ಈಗ ಅಪರಂಜಿ ತಪ್ಪದೇ ಬಂದು ನಮ್ಮ ದಿನನಿತ್ಯದ ಏರುಪೇರುಗಳ ಜೀವನದಲ್ಲಿ ನಗೆ, ಸಂತಸಗಳನ್ನು ತರುತ್ತಿವೆ. ಕೊರವಂಜಿ ಕಾಡಿಗೆ ತೆರಳಿದಾಗ ಅತ್ತವರಲ್ಲಿ ನಾವಿಬ್ಬರೂ ಸಹಾ ಇದ್ದೆವು.

ಕೊರವಂಜಿಯ ಜಾಗದಲ್ಲಿ ಅಪರಂಜಿ ನಮ್ಮನ್ನು ರಂಜಿಸಲು ನಮ್ಮ ಮನೆಗೆ ಕಾಲಿಟ್ಟಾಗ ಅವಳನ್ನು ಸಂಭ್ರಮದಿಂದ ನಾವು ಸ್ವಾಗತಿಸಿದೆವು. ಅವಳು ನಿರಂತರವಾಗಿ ಇನ್ನು ಮುಂದೆಯೂ ಇದೇ ರೀತಿ ನಮ್ಮ ಮನೆಗೆ ಬಂದು ನಮ್ಮನ್ನೆಲ್ಲಾ ರಂಜಿಸಲೆಂಬುದೇ ನಮ್ಮ ಆಶಯ. ಈಗ ನಾನು ನಿವೃತ್ತ ಜೀವನದಲ್ಲಿದ್ದು ಪೆನ್ಷನ್‌ನಿಂದ ಜೀವನ ಸಾಗಿಸುತ್ತಿರುವೆ. ಹಾಗಾಗಿ ನನ್ನ ಈ ಕಾಣಿಕೆ ಕಿರಿದು. ಅದನ್ನು ಸ್ವೀಕರಿಸುವ ಕೃಪೆ ಮಾಡಿ. ಇನ್ನು ಮುಂದೆಯೂ ಅವಕಾಶ ಸಿಕ್ಕಿದಂತೆ ನಾನು ನಿಮಗೆ ಹಣ ಕಳಿಸಲು ನಿಮ್ಮ ಒಪ್ಪಿಗೆಯನ್ನು ಬೇಡುವೆ. ನಿಮ್ಮ ಪ್ರೀತಿಯ..''

ಇದನ್ನೆಲ್ಲ ನೋಡಿದ ಮೇಲೆ, ಮೂವತ್ತೈದು ವರ್ಷಗಳ ಕಾಲ ನಿರಂತರವಾಗಿ ನಡೆದು ಬಂದಿರುವ ಅಪರಂಜಿಯ ಈಗಿನ ಆರ್ಥಿಕ ದೃಢತೆಯನ್ನು ಗಮನಿಸಿದಾಗ ಈಗಾಗಲೇ ದೇಣಿಗೆ ನೀಡಿರುವವರ ಹಾಗೂ ಇಷ್ಟರಲ್ಲೇ ದೇಣಿಗೆ ನೀಡಬಯಸುವ ಎಲ್ಲರ ಸಹಾಯದಿಂದ ಅಪರಂಜಿಗೆ ಉಜ್ವಲ ಭವಿಷ್ಯವಿರುವುದು ಖಚಿತ ಎನ್ನಿಸುತ್ತದೆ.

ರಾ.ಶಿ. ಮತ್ತು ಅ.ರಾ.ಸೇ. ಯವರ ಪ್ರಾರಂಭಿಕ ಹಾರೈಕೆ ಇಷ್ಟು ಪ್ರೀತಿ ವಿಶ್ವಾಸಗಳ ಹೊನಲಿನಲ್ಲಿ ನನಸಾಗುವುದನ್ನು ನಾವು ಖಂಡಿತ ನಿರೀಕ್ಷಿಸಿರಲಿಲ್ಲ. ಇಮ್ಮಡಿ

ಉತ್ಸಾಹದಿಂದ, ವಿವೇಕ, ಜಾಗರೂಕತೆಗಳಿಂದ ಅಪರಂಜಿಯನ್ನು ಮುನ್ನಡೆಸುವುದೇ ಈಗ ನಮ್ಮ ಮುಂದಿರುವ ಗುರಿ.

ಮತ್ತೊಮ್ಮೆ ದೇಣಿಗೆ ನೀಡಿರುವ ಎಲ್ಲರಿಗೆ, ಇನ್ನು ಮುಂದೆ ದೇಣಿಗೆ ನೀಡಬಯಸುವ ಎಲ್ಲ ಅಭಿಮಾನಿಗಳಿಗೆ ನಮ್ರತೆಯಿಂದ ತನ್ನ ಕೃತಜ್ಞತೆಗಳನ್ನು ಸಲ್ಲಿಸಿ ಅಪರಂಜಿ ತನ್ನನ್ನು ನಗಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾಳೆ.



# ಒಂದು ಪ್ರತಿಕ್ರಿಯೆ

ಮಾನ್ಯ ಸಂಪಾದಕರಲ್ಲಿ,

ಜುಲೈ ಸಂಚಿಕೆಯಲ್ಲಿ ನಿಮ್ಮ ಕಾಲಮ್ ಓದಿದಾಗ ಸಹಜವಾಗಿಯೇ ಇದನ್ನು ಓದುವ ಪುರುಷರ ಪ್ರತಿಕ್ರಿಯೆ ಏನಿರಬಹುದು ಅಂತ ಚಿಂತಿಸಿದೆ. ಬಹುತೇಕ ಪುರುಷರು, ''ಇಂತಹ ಸಣ್ಣ ತಮಾಷೆ ವಿಷಯಗಳನ್ನೆಲ್ಲಾ ಮಹಿಳೆಯರು ಇಷ್ಟು ಗಂಭೀರವಾಗಿ ಪರಿಗಣಿಸಬಾರದು'' ಎಂದು ನಕ್ಕು ಸುಮ್ಮನಾಗಬಹುದು ಅನ್ನಿಸಿತು. ಇದು ಓದುಗರು ಪರಿಗಣಿಸುವ ವಿಷಯವೇ ಅಲ್ಲ. ಜೋಕ್ ಬರೆಯುವವರು, ಅನೂಚಾನವಾಗಿ ಮಹಿಳೆಯರನ್ನು ಒಂದು ಪುರಾತನ ದೃಷ್ಟಿಕೋನದಿಂದ ನೋಡಿ, ಆಧುನಿಕ ಸಮಾಜದಲ್ಲಿ ಮಹಿಳೆಯರ ಬದಲಾಗುತ್ತಿರುವ ಪಾತ್ರಗಳನ್ನು ಗಮನಿಸದೇ ಇರುವ ವಿಷಯ ಇದು. ನೀವು ನಿಮ್ಮ ಕಾಲಮ್ಮಿನ ಕೊನೆಯ ಪ್ಯಾರಾದಲ್ಲಿ ''ಮಹಿಳೆಯರ ಬಗ್ಗೆ ಸಂವೇದನಾಶೀಲ ದೃಷ್ಟಿಕೋನ''ದ ಬಗ್ಗೆ ಪ್ರಸ್ತಾಪಿಸಿದ್ದೀರ. ಸಂವೇದನೆ ಕೇವಲ ಮಹಿಳೆಯರ ಬಗ್ಗೆ ಮಾತ್ರ ಏಕೆ ಸೀಮಿತವಾಗಬೇಕು? ನಾವು ದಾಖಲಿಸುವ ಹಾಸ್ಯ ಪ್ರಸಂಗಗಳಲ್ಲಿ ಯಾವುದೇ ಒಂದು ಗುಂಪಿನ ಮನ ನೋಯಿಸುವ ಸಾಧ್ಯತೆ ಇದ್ದರೆ ಖಂಡಿತವಾಗಿ ಅದು ಸದಭಿರುಚಿಯ ಹಾಸ್ಯವಲ್ಲ ಎಂದು ನನ್ನ ಭಾವನೆ. ಪುರುಷರನ್ನ, ಸರ್ದಾರ್ಜೀಗಳನ್ನ ಸ್ಟೀರಿಯೋಟೈಪ್ ಮಾಡುವ ನಗೆಹನಿಗಳೂ ಸಹಾ ಮೇಲಿನ ಗುಂಪನ್ನೇ ಸೇರುತ್ತವೆ.

ನಾನು ಅಂದು ನಿಮ್ಮ ಕಥಾ ಕಥನದಲ್ಲಿ ನಿಮ್ಮಲ್ಲೇ ಇದ್ದ ಈ ಮನೋಭಾವವನ್ನು ತೋರಿಸಿಕೊಟ್ಟಾಗ, ನೀವು ಆ ಪ್ರತಿಕ್ರಿಯೆಯನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿದ್ದೇ ಅಲ್ಲದೇ, ಈ ವಿಷಯದ ಬಗ್ಗೆ ನಿಮ್ಮ ಕಾಲಮ್ಮಿನಲ್ಲಿಯೂ ಸಹಾ ಬರೆದಿರಿ. ಇದು ನಿಜಕ್ಕೂ ಅದ್ಭುತವಾದ ಸಂಗತಿ.

ತಮ್ಮ ವಿಶ್ವಾಸಿ
**ರಶ್ಮಿ ಜೆರೂರ್ಕರ್**

ಆತ್ಮೀಯ ಓದುಗರೇ

**ನಿಮ್ಮ ಬಂಧು ಬಳಗ ಕಡೇ ಪಕ್ಷ ಮುಂದಿನ ಹತ್ತು ವರ್ಷಗಳವರೆಗೆ ಪ್ರತಿ ತಿಂಗಳು ನಿಮ್ಮನ್ನು ಹೃದಯತುಂಬಿ ನೆನೆಸಿಕೊಳ್ಳುವಂಥಾ ಒಂದು ಸುವರ್ಣ ಅವಕಾಶ ನಿಮ್ಮ ಮುಂದಿದೆ.** ಅದು ಅಪರಂಜಿಯ ಓದುಗ ಬಳಗವನ್ನು ಹೆಚ್ಚಿಸುವುದು. ನೀವು ಮಾಡಬೇಕಾದುದಿಷ್ಟೆ. ನಿಮ್ಮ ಬಂಧುಗಳಿಗೆ / ಸ್ನೇಹಿತರಿಗೆ ನೀವು ಅಪರಂಜಿಯನ್ನು ಉಡುಗೊರೆಯಾಗಿ ಕೊಡಬಹುದು. **ಪ್ರತಿ ತಿಂಗಳು ಅಪರಂಜಿ ಅವರ ಮನೆಗೆ ಹೋದಾಗ ಅವರು ನಿಮ್ಮನ್ನು ಕೃತಜ್ಞತಾಭಾವದಿಂದ ನೆನೆಯುತ್ತಾರೆ.** ಅದಕ್ಕೆ ನೀವು ಈ ಕೆಳಗಿನ ಅರ್ಜಿಯನ್ನು ತುಂಬಿ ನಮಗೆ ಕಳಿಸಿದರೆ ಸಾಕು. ನಂತರದ ದಿನಗಳಲ್ಲಿ ಅಪರಂಜಿ ನಿಮ್ಮ ಬಂಧುಗಳ/ಸ್ನೇಹಿತರ ಮನೆಗೆ ಅಂಚೆಯಲ್ಲಿ ತಲಪುತ್ತದೆ. **ಪ್ರತಿ ಹೊಸ ಚಂದಾದಾರರಿಗೆ ಹತ್ತು ವರ್ಷದ ಚಂದಾ ರೂ. 750/– ರಂತೆ ಚೆಕ್/ಡಿಡಿ/ ಆನ್‌ಲೈನ್ ಮೂಲಕ ಕೊರವಂಜಿ ಕಾರ್ಯಾಲಯದ ವಿಳಾಸಕ್ಕೆ ಅಥವಾ ಸಂಪರ್ಕ ವಿಳಾಸಕ್ಕೆ ಅಥವಾ ಬ್ಯಾಂಕ್ ಮೂಲಕ ಸಲ್ಲಿಸಬಹುದು.** ಬ್ಯಾಂಕ್ ವಿವರಗಳನ್ನೂ ಕೊಟ್ಟಿದ್ದೇವೆ.

## ಅರ್ಜಿ ನಮೂನೆ

ಇವರಿಂದ : ಹೆಸರು.............................................................................

ಚಂದಾದಾರರ ಸಂಖ್ಯೆ.............................................................................

**ಉಡುಗೊರೆಯಾಗಿ ಅಪರಂಜಿಯನ್ನು ಪ್ರತಿ ತಿಂಗಳೂ ಈ ಕೆಳಕಂಡ ವಿಳಾಸಗಳಿಗೆ ತಲುಪಿಸಿ.**

1) ಹೆಸರು.............................................................................................

ವಿಳಾಸ...................................................................................................

ದೂರವಾಣಿ : ....................... ಈಮೈಲ್ ವಿಳಾಸ: ...................................

2) ಹೆಸರು.............................................................................................

ವಿಳಾಸ...................................................................................................

ದೂರವಾಣಿ : ....................... ಈಮೈಲ್ ವಿಳಾಸ: ...................................

| | |
|---|---|
| **Account Name** | **: KORAVANJI APARANJI TRUST** |
| **Account Number** | : 109804180000056 |
| **IFSC Code** | : SVCB0000098 |
| **Name of the Bank** | : SVC CO-OPERATIVE BANK LTD |
| **Branch Code /Name** | : MALLESHWARAM |
| **Account Type** | : CURRENT |

# ಅಗ್ನಿ ರಥಗಳು

**● ಭಕ್ತ**

*(ನನ್ನ ಆತ್ಮೀಯ ಗೆಳೆಯ ಹಾಗೂ ಅಪರಂಜಿ ಬರಹಗಾರ ಮಾನ್ಯ ಭಕ್ತವತ್ಸಲ ಅವರು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಆರು ದಶಕಗಳಷ್ಟು ಶ್ರೀಮಂತ ಗೆಳೆತನ ನಮ್ಮದು. ಹಿಂದೆ, 2002, 2003 ರ ಸುಮಾರಿನಲ್ಲಿ ಭಕ್ತ ಅವರು ಬರೆದ ಲಲಿತ ಪ್ರಬಂಧಗಳ ಒಂದು ಸರಣಿ ಅಪರಂಜಿಯಲ್ಲಿ ಪ್ರಕಟವಾಗಿತ್ತು. ನನ್ನ ದೃಷ್ಟಿಯಲ್ಲಿ ಅತ್ಯುತ್ತಮ ಸದಭಿರುಚಿಯ ಸಾಹಿತ್ಯಕ್ಕೆ ಈ ಪ್ರಬಂಧಗಳು ಮಾದರಿಯಾಗಬಲ್ಲವು. ಅಗಲಿದ ಗೆಳೆಯನಿಗೆ ನೆನಪಿನ ಕಾಣಿಕೆಯಾಗಿ ಜನವರಿ 2003ರಲ್ಲಿ ಬರೆದ ಅವರ ಈ ''ಅಗ್ನಿ ರಥಗಳು'' ಎಂಬ ಪ್ರಬಂಧವನ್ನು ಇಲ್ಲಿ ಪುನರ್ಮುದ್ರಿಸಿರುವೆ. ಉದಯೋನ್ಮುಖ ಬರಹಗಾರರು ಇದರಿಂದ ಬರೆಯುವ ಕಲೆಯ ಸೂಕ್ಷ್ಮಗಳನ್ನು ಗ್ರಹಿಸುವಂತಾದರೆ ಅದು ನಿಜಕ್ಕೂ ಸಂತಸದ ಸಂಗತಿ).*

ಜಟಕಾಗಳು ಇದೀಗ ಮಾಯವಾಗುತ್ತಿವೆ. ಈ ದಿನಗಳಲ್ಲಿ ಅವು ಕೇವಲ ನೀರಿನ ಪೈಪುಗಳನ್ನು ಬಡಕಲು ಕುದುರೆಯ ಬೆನ್ನಿನ ಮೇಲೆ ಚಾಚುವಂತೆ ಜೋಡಿಸಿಕೊಂಡು ತುಂಬಿದ ವಾಹನ ಸಂಚಾರದ ನಡುವೆ ನುಸುಳಿ ಸಾಗುವ ಸರಕು ಸಾಗಣೆ ವ್ಯವಸ್ಥೆಗಳು ಅಷ್ಟೆ. ಅಕಸ್ಮಾತ್ತಾಗಿ ಹಲವೊಮ್ಮೆ ಆಟೋ ಅಥವಾ ಬಸ್ಸುಗಳ ಮುಷ್ಕರ ಹಠಾತ್ತಾಗಿ ಜಾರಿಗೆ ಬಂದಾಗ ಜಟಕಾಗಳು ಎಂದೂ ಇಲ್ಲದ ಪ್ರಾಮುಖ್ಯತೆ ಪಡೆಯುವುದೇನೋ ನಿಜ. ತಹ ಪರಿಸ್ಥಿತಿ ಬಂದಾಗಲೂ ಜಟಕಾ ಸವಾರಿ ಸಂತಸದಾಯಕ ಅನುಭವವೇನಲ್ಲ. ಮೊದಲೇ ಕೃಶವಾಗಿರುವ ಪ್ರಾಣಿಯ ಮೇಲೆ ತನ್ನ ಹೆಣಭಾರ ಹೊರಿಸಿ ಹೆಜ್ಜೆ ಹೆಜ್ಜೆಗೂ ಅದರ ಜೀವ ಸವೆಸುತ್ತಾ ಸವಾರಿ ಮಾಡಲಿಚ್ಛಿಸುವವನು ಖಂಡಿತ ಸಜ್ಜನನಾಗಿರಲಾರ.

ಜಟಕಾಗಳು ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲ ನನಗೆ ನೆನಪಿದೆ. ಕಾರುಗಳ ವ್ಯಾಪಕ ಬಳಕೆ ಶುರುವಾಗುವುದಕ್ಕೆ ಮುಂಚಿನ ದಿನಗಳವು. ಹೊಸಪೇಟೆಯಲ್ಲಿ, ಉತ್ತರ ಭಾರತದ ಹವೇಲಿಗಳನ್ನು ಹೋಲುವ ಭವ್ಯವಾದ ಸೌಧವೊಂದರಲ್ಲಿ, ನಮ್ಮ ಶ್ರೀಮಂತ ಕುಟುಂಬ ವಾಸವಾಗಿದ್ದೆವು. ರೈಲ್ವೇ ಸ್ಟೇಷನ್ ರಸ್ತೆಯ ಪಕ್ಕದ ವಿಶಾಲವಾದ ಧೂಳಿನ ಪಾತ್ರೆ ಎನ್ನಬಹುದಾದ ಮೈದಾನದ ಮಧ್ಯೆ ಇದ್ದ ಎರಡು ಅಂತಸ್ತಿನ ಮನೆ ಅದು. ಮನೆಯ ಪಕ್ಕದಲ್ಲಿನ ಓಣಿ ಹತ್ತಿರದ ಕಾಲುವೆಯನ್ನು ಸೇರುತ್ತಿತ್ತು. ಓಣಿಯ ಎರಡು ಬದಿಯಲ್ಲಿ ಹವೇಲಿಯ ಪರಿಚಾರಕರ ಮನೆಗಳು. ಈ ಸೇವಕ ವರ್ಗದಲ್ಲಿ ತೀರ ಕೆಳಗಿನವರು ಕಾಲುವೆಯ ಹತ್ತಿರ ವಾಸವಾಗಿದ್ದು, ಮೇಲ್ವಿಚಾರಕ ಹವೇಲಿಗೆ ಹತ್ತಿರದಲ್ಲಿ ನೆಲಸಿದ್ದ. ಅವನಿಗಿಂತ ಹವೇಲಿಗೆ ಹತ್ತಿರವಿದ್ದದ್ದು, ಜಟಕಾವಾಲಾ ಅಜಾಂನ ಪೋಷಣೆಯಲ್ಲಿ ಸುಖವಾಗಿ ಬೆಳೆಯುತ್ತಿದ್ದ ಕುದುರೆ. ಜಟಕಾಗಾಡಿ ಯಾವಾಗಲೂ ಹತ್ತಿರದ ಬೇವಿನ ಮರದಡಿ ಬಿಸಿಲಿಗೆ ಹೊಳೆಯುತ್ತಾ ನಿಂತಿರುತ್ತಿತ್ತು. ಜಟಕಾವಾಲನದು ಒಂದು ಪ್ರತಿಷ್ಠಿತ ಸ್ಥಾನ. ನಮ್ಮ ಚಿಕ್ಕಪ್ಪನಿಂದ ನೇರವಾಗಿ ಆಜ್ಞೆಗಳನ್ನು ಪಡೆಯುತ್ತಿದ್ದುದರಿಂದ ಸಹಜವಾಗಿಯೇ ತಾನು ಎಲ್ಲರಿಗಿಂತಲೂ ಹೆಚ್ಚು ಎನ್ನುವಂತಿತ್ತು ಅವನ ನಡತೆ. ಜಟಕಾಗಾಡಿ ಹಾಗೂ ಕುದುರೆ ಇವೆರಡನ್ನೂ ಅತ್ಯಂತ ಮುತುವರ್ಜಿಯಿಂದ

ನೋಡಿಕೊಳ್ಳುತ್ತಿದ್ದ ಅಜಾಂ. ಕುದುರೆ ಯಾವಾಗಲೂ ಚೈತನ್ಯದಿಂದ ಚಿಮ್ಮುತ್ತಿತ್ತು. ಪ್ರತಿ ವಿಜಯದಶಮಿಯಂದು ಗಾಡಿಯ ಪಕ್ಕಗಳ ಮೇಲೆ ಹೂವಿನ ಗುಚ್ಛಗಳನ್ನು ಹೊಸದಾಗಿ ಬಣ್ಣದಲ್ಲಿ ಚಿತ್ರಿಸುತ್ತಿದ್ದುದರಿಂದ ಗಾಡಿ ಸದಾ ಹೊಸದಾಗಿ ಕಾಣುತ್ತಿತ್ತು. ಮಕ್ಕಳಾದ ನಮಗೆಲ್ಲಾ ಕುದುರೆ ಅಂದರೆ ಏನೋ ಒಂದು ವಿಶೇಷ ಆಕರ್ಷಣೆ.

ನಮ್ಮ ಚಿಕ್ಕಪ್ಪ ತನ್ನ ವ್ಯವಹಾರಕ್ಕಾಗಿ ಎಲ್ಲಿಗಾದರೂ ಹೊರಡಬೇಕಾದಾಗ, ಅದರ ಸೂಚನೆ ಅಜಾಂನ ನಡವಳಿಕೆಯಲ್ಲಿ ಕಾಣುತ್ತಿತ್ತು. ಜಟಕಾವನ್ನು ಓಣಿಗೆ ತರುವುದೇ ಒಂದು ಸಂಕೀರ್ಣ ಕಾರ್ಯಕ್ರಮ ಅನ್ನಬಹುದು. ಮೊದಲಿಗೆ ಗಾಡಿಯೊಳಗಿನ ಮೆತ್ತೆಗಳನ್ನು ಓರಣವಾಗಿ ಜೋಡಿಸಲಾಗುತ್ತಿತ್ತು. ಅನಂತರ ಕುದುರೆಯೊಂದಿಗೆ ಸತತವಾಗಿ ಮಾತನಾಡುತ್ತಾ, ಅಜಾಂ ಅದನ್ನು ಅಲಂಕರಿಸುತ್ತಿದ್ದ. ಕೊನೆಗೆ ಕುದುರೆಯ ತಲೆಯ ಮೇಲೆ ಹೊಳೆಯುವ ಕುಲಾವಿಯೊಂದನ್ನು ಒಂದು ಕೋನದಲ್ಲಿ ಕೂರಿಸಿದ ನಂತರವೇ ಶೃಂಗಾರ ಮುಕ್ತಾಯ. ಒಳ್ಳೆಯ ಮೈಮಾಟದ ಈ ಅಲಂಕೃತ ಕುದುರೆ ಸೂರ್ಯನ ಬೆಳಕಿನಲ್ಲಿ ಹೊಳೆಯುತ್ತ ರಾಜ ಠೀವಿಯಿಂದ ಹೆಜ್ಜೆ ಹಾಕುತ್ತಾ ನಡೆದಾಗ ದೇವಲೋಕದಿಂದ ಇಳಿದು ಬರುತ್ತಿದೆಯೇನೋ ಎನ್ನಿಸುತ್ತಿತ್ತು. ಕುದುರೆಯನ್ನು ಗಾಡಿಗೆ ಕಟ್ಟುವ ಮಹತ್ಕಾರ್ಯವನ್ನು ನೋಡುವುದಕ್ಕೆ ಪ್ರೇಕ್ಷಕರಿಗೇನೂ ಕೊರತೆ ಇರಲಿಲ್ಲ. ದಾರಿಹೋಕರು, ಮಕ್ಕಳು ಇವರುಗಳ ಜೊತೆಗೆ ಚಿಕ್ಕಪ್ಪನನ್ನು ದರ್ಶನ ಮಾಡಲು ಸಾಲು ನಿಂತಿದ್ದವರೂ ಸಹಾ, ತಮ್ಮ ಜಾಗಗಳನ್ನು ಬಿಟ್ಟುಕೊಡದೇ ನಿಂತಲ್ಲಿಂದಲೇ ಕತ್ತು ಉದ್ದಮಾಡಿ ಈ ಕಾರ್ಯಕ್ರಮವನ್ನು ವೀಕ್ಷಿಸುತ್ತಿದ್ದರು. ಒಮ್ಮೆ ಕುದುರೆಗೆ ಲಗಾಮು ಕಟ್ಟುವುದು ಶುರುವಾಯಿತೆಂದರೆ, ಚಿಕ್ಕಪ್ಪ ಇನ್ನೇನು ಸ್ವಲ್ಪ ಹೊತ್ತಿನಲ್ಲೇ ಹೊರಡಲಿದ್ದಾನೆ ಎಂಬುದರ ಸೂಚನೆ ಅದು. ಇಂದು ಉದ್ದನೆಯ ನಿಲುವಂಗಿ, ಚಿನ್ನದ ಸರಿಗೆ ಪೇಟ ಮತ್ತು ಶಲ್ಯಧಾರಿಯಾದ ಚಿಕ್ಕಪ್ಪ ದರ್ಶನಾಕಾಂಕ್ಷಿಗಳ ವಂದನೆಗಳನ್ನು ಸ್ವೀಕರಿಸುತ್ತಾ, ಲೆಕ್ಕ ಇಡುವ ಕರಣಿಕರನ್ನು ಕರೆದು ಕೊನೆಯ ಹಲವು ಆಜ್ಞೆಗಳನ್ನು ನೀಡಿ, ಗೇಟಿನ ಆಚೆ ಬರುತ್ತಿದ್ದರು. ಅಲ್ಲಿ ಅಜಾಂ ಜಟಕಾದೊಂದಿಗೆ ಸಿದ್ಧವಾಗಿರುತ್ತಿದ್ದ. ಜಟಕಾದ ಕಮಾನನ್ನು ಹಿಡಿದು ಚಿಕ್ಕಪ್ಪ ಶ್ರಮವಿಲ್ಲದೇ ಜಟಕ ಏರುವಂತೆ ಮಾಡುವುದು ಅಜಾಂನ ಕರ್ತವ್ಯ.

ಚಿಕ್ಕಪ್ಪನ ಈ ನಿರ್ಗಮನ ನಿಜಕ್ಕೂ ಸರಿಸಾಟಿಯಿಲ್ಲದ್ದು. ಯಾವುದೇ, ವಿಮಾನ, ರೈಲು ಅಥವಾ ಮೋಟರಿನ ನಿರ್ಗಮನಕ್ಕೆ ಈ ಘನತೆ ಇರುವುದೇ ಸಾಧ್ಯವಿರಲಿಲ್ಲ. ಕುದುರೆಯ ಕೊರಳಿಗೆ ಕಟ್ಟಿದ್ದ ಗಂಟೆಗಳ ಕಿಣಿಕಿಣಿ ಕೇಳಿದಾಕ್ಷಣ ಮನೆಯ ಮಹಿಳೆಯರೆಲ್ಲಾ ಮುಂದಿನ ಬಾಲ್ಕನಿಗೆ ಓಡಿ ಬರುತ್ತಿದ್ದರು. ಎಲ್ಲರ ಕಣ್ಣುಗಳೂ ತನ್ನ ಮೇಲಿರುವುದನ್ನು ಗುರುತಿಸಿಯೋ ಏನೋ ಕುದುರೆ ಹಿಂಗಾಲುಗಳ ಮೇಲೆ ನಿಂತು ಕೆನೆದು ಅನಂತರ ಸ್ವಪ್ರತಿಷ್ಠೆಯಿಂದ ಕತ್ತನ್ನು ಎತ್ತಿಕೊಂಡು ಠೀವಿಯಿಂದ ಮುನ್ನಡೆಯುತ್ತಿತ್ತು. ಅನೇಕ ಬಾರಿ ಅಜಾಂ ನಮ್ಮನ್ನು ಅವನ ಪಕ್ಕದಲ್ಲಿ ಕುಳಿತುಕೊಳ್ಳಲು ಬಿಡುತ್ತಿದ್ದ. ಗಾಡಿ ಓಡಿಸುವ ಚಾಕಚಕ್ಯತೆಯ ಪ್ರತ್ಯಕ್ಷ ಅನುಭವ ಆಗ ನಮಗೆ ದೊರಕುತ್ತಿತ್ತು. ಚಾವಣಿಯ ಕೋಲನ್ನು ಚಕ್ರದ ಅರಗಳಿಗೆ ಅಡ್ಡಲಾಗಿಟ್ಟು ಹೊಮ್ಮಿಸುತ್ತಿದ್ದ ಕರ್‍ರ್ ಶಬ್ದದೊಂದಿಗೆ ಬಹುಶಃ ಅವನ ಕುದುರೆಗೆ ಮಾತ್ರ ಅರ್ಥವಾಗುತ್ತಿದ್ದ ಅಜಾಂನ ಕೂಗುಗಳು ದಾರಿಹೋಕರನ್ನು ಚದುರಿಸಿದಾಗ ಅವರು ಗಾಡಿಗೆ ದಾರಿ ಬಿಟ್ಟುಕೊಟ್ಟು ಚಿಕ್ಕಪ್ಪನನ್ನು ಕುತೂಹಲ ಗೌರವಗಳಿಂದ ನೋಡುತ್ತಿದ್ದರು. ದಿನ ಕ್ರಮೇಣ ಆ ಜನಗಳು ಚಿಕ್ಕಪ್ಪನಿಗೆ ತಲೆಬಾಗಿ

ವಂದಿಸುವುದೂ, ಅವನು ಅದಕ್ಕೆ ಪ್ರತಿಯಾಗಿ ಅವರಿಗೆ ಕೈ ಜೋಡಿಸುವುದೂ ರೂಢಿಯಾಯಿತು. ಇದರಲ್ಲೇನೂ ಆಶ್ಚರ್ಯವಿಲ್ಲ ಅನ್ನಿ. ಹೇಗೂ ನಮ್ಮ ಚಿಕ್ಕಪ್ಪ ಬದುಕಿದ್ದಷ್ಟು ದಿನವೂ ಶ್ರೀಮಂತಿಕೆಯ ಬಾಳನ್ನೇ ನಡೆಸಿಕೊಂಡು ಬಂದ. ಹೊಸಪೇಟೆಯಂತಹ ಸಣ್ಣ ಊರಿನಲ್ಲಿ ಅವನಂತಹ ಶ್ರೀಮಂತನಾಗಲೀ ಅಂತಹ ಬೆಲೆಬಾಳುವ ಜಟಕಾಗಳಾಗಲೀ ಎಷ್ಟು ತಾನೇ ಇದ್ದೀತು?

ಇರುತ್ತ, ಒಂದು ದಿನ ಟೆರ್ರಾಪ್ಲೇನ್ ಎಂಬ ಒಂದು ಹೊಳಪುಳ್ಳ ಅಗಾಧವಾದ ಗಾಡಿ ನಮ್ಮ ಹವೇಲಿಗೆ ಆಗಮಿಸಿತು. ಅತಿ ದೊಡ್ಡ ಕಣ್ಣುಗಳಿದ್ದ ಆ ಗಾಡಿಯ ಎರಡು ಪಕ್ಕಗಳಿಗೂ ಹಿತ್ತಾಳೆಯ ಮೊಸಳೆಗಳನ್ನು ಜೋಡಿಸಿದ್ದರು. ಗಾಡಿಯ ಪಕ್ಕದಲ್ಲಿದ್ದ ಬಾಗಿಲನ್ನು ತೆರೆದು ಒಳಕ್ಕೆ ಹೋಗಿ ಸಿಂಹಾಸನದಂತಹ ಆಸನಗಳಲ್ಲಿ ಕೂರುವ ವ್ಯವಸ್ಥೆ ಆ ಗಾಡಿಗೆ. ಒಂದು ಮುಖ್ಯವಾದ ವ್ಯತ್ಯಾಸವೆಂದರೆ ಇದರಲ್ಲಿ ಯಜಮಾನನೂ ಸಹಾ ಎಲ್ಲರಂತೆ ಮುಂದಕ್ಕೆ ಮುಖಮಾಡಿ ಕೂರಬೇಕಾಗಿತ್ತು. ಅಲ್ಲದೇ ಆ ಗಾಡಿಗೆ ಕುದುರೆಯೇ ಇರಲಿಲ್ಲ. ಕುದುರೆಯ ಜಾಗದಲ್ಲಿ ಒಂದು ಉದ್ದವಾದ ಪೆಟ್ಟಿಗೆ. ಗಾಡಿಯ ಚಾಲಕ ಆ ಪೆಟ್ಟಿಗೆಯ ಮುಂದಿದ್ದ ಒಂದು ಚಕ್ರದ ಹಿಂದೆ ಕೂತು ಒಂದು ಗುಂಡಿಯನ್ನು ಒತ್ತಿದ ಕೂಡಲೇ ಆ ಗಾಡಿ ಒಂದು ಡಜನ್ ಜನ ಒಟ್ಟಿಗೆ ಸೀನಿದಂತೆ ಶಬ್ದ ಮಾಡುತ್ತಿತ್ತು.

ಈ ಚಾಲಕ ಮಾತ್ರ ಯಾರೊಂದಿಗೂ ಬೆರೆಯುತ್ತಿರಲಿಲ್ಲ. ಆಗಾಗ್ಗೆ ಕೆಲವೇ ಇಂಗ್ಲೀಷ್ ಪದಗಳನ್ನು ಬಿಟ್ಟರೆ ಆತನ ಮಾತುಕತೆ ಬಹು ಕಡಿಮೆ. ಬಹುಶಃ ಅವನಿಗೆ ಗೊತ್ತಿದ್ದದ್ದೇ ಅಷ್ಟೇ ಏನೋ. ಕಾರನ್ನು ತರಲು ಅವನಿಗೆ ಹೇಳಿದಾಗ, ಆತ, ಪ್ಯಾಂಟು, ಕೋಟು ಮತ್ತು ಅವಕ್ಕೆ ಒಪ್ಪುವಂತಹ ಹ್ಯಾಟನ್ನು ಧರಿಸಿದ ನಂತರವೇ ಕಾರು ಹೊರಬರುತ್ತಿತ್ತು. ನಮ್ಮ ಚಿಕ್ಕಪ್ಪನಿಗೆ ತನ್ನ ಹೊಸ ವಾಹನವನ್ನು ಕಂಡರೆ ತೀರಾ ಹೆಮ್ಮೆ ಇದ್ದುದರಿಂದ ಅದಕ್ಕಾಗಿಯೇ ಒಂದು ಹೊಸ ಗ್ಯಾರೆಜನ್ನು ಕಟ್ಟಿಸಿ, ಆ ಗ್ಯಾರೆಜಿನ ಮುಂದೆ ಒಂದು ಮೇಜು, ಕುರ್ಚಿ ಇಡಿಸಿದ್ದ.

ಕಾರಿನ ಚಾಲಕ ಯಾವಾಗಲೂ ಕಾಲುವೆಯನ್ನೇ ದಿಟ್ಟಿಸುತ್ತಾ ಆ ಕುರ್ಚಿಯ ಮೇಲೆ ಕೂತಿರುವುದು ವಾಡಿಕೆಯಾಗಿತ್ತು. ಅಜಾಂ, ಕುದುರೆ ಒರೆಸುತ್ತಲೋ, ಅದಕ್ಕೆ ಹುಲ್ಲು ಹಾಕುತ್ತಲೋ ಅಂತೂ ಸದಾಕಾಲ ಲಾಯದಲ್ಲೇ ಕಾಲ ಕಳೆಯುತ್ತಿದ್ದ. ಹೊಸ 'ಜಟಕಾ' ಗೆ ಇವು ಯಾವುದರ ಅಗತ್ಯವೂ ಇರಲಿಲ್ಲ. ಬೆಳಗಿನಿಂದ ಸಂಜೆಯವರೆಗೂ ಜನಗಳು ಸಾಲಾಗಿ ಒಂದು ಓಣಿಯ ಎರಡು ಪಕ್ಕಗಳಲ್ಲೂ ನಿಂತು ಇದನ್ನೆಲ್ಲಾ ತದೇಕಚಿತ್ತರಾಗಿ ನೋಡುತ್ತಿದ್ದರು. ಎಲ್ಲರ ದೃಷ್ಟಿ ತನ್ನ ಮೇಲಿದ್ದರೂ, ಅದರ ಪರಿವೆಯೇ ಇಲ್ಲದಂತೆ ನಟಿಸುತ್ತಾ ಚಾಲಕ ತನ್ನ ಕಾಲುವೆ ದಿಟ್ಟಿಸುವ ಕೆಲಸದಲ್ಲಿ ಮಗ್ನನಾಗಿರುತ್ತಿದ್ದ.

ಈ ಹೊಸ ಕುದುರೆಗೆ ಲಗಾಮು ತೊಡಿಸುವ ಸಮಯ ಬಂದಾಗಲಂತೂ ಓಣಿಯಲ್ಲಿ ಜನಗಳ ಸಂತೆಯೇ ಸೇರುತ್ತಿತ್ತು. ಕಾರಿನ ಚಾಲಕ ಸಾವಧಾನದಿಂದ ತನ್ನ ಉಡುಪು ಬದಲಿಸಿ, ಕಾರಿನ ಮುಂದಿದ್ದ ಪೆಟ್ಟಿಗೆಗೆ ಒಂದು ಹ್ಯಾಂಡಲ್ ತೂರಿಸಿ, ಅದನ್ನು ಜೋರಾಗಿ ತಿರುಗಿಸುತ್ತಿದ್ದ. ಹೊಸ ಕುದುರೆ ಜೋರಾಗಿ ಕೆನೆದು ಥರ್ರ್ ಬುರ್ರ್ ಎಂದು ಸದ್ದು ಮಾಡತೊಡಗಿದ ತಕ್ಷಣ ಸುತ್ತ ನೆರೆದಿದ್ದ ಜನಸ್ತೋಮ ''ಹೋ'' ಎಂದು ಕೂಗಿ ತಮ್ಮ ಆಶ್ಚರ್ಯ, ಸಂತಸಗಳನ್ನು ವ್ಯಕ್ತಪಡಿಸುತ್ತಿದ್ದರು. ಚಾಲಕ ಕಾರನ್ನು ಏರಿ ತನ್ನ ಸೀಟಿನಲ್ಲಿ

ಕುಳಿತು, ಒಮ್ಮೆ ಕಾರಿನ ಹಾರ್ನ್ ಅನ್ನು ''ಪೋಂ'' ಅನಿಸಿದಾಗ ಜನ ಹೆದರಿ ದೂರ ಸರಿಯುತ್ತಿದ್ದರು. ಕಾರು ರಾಜಗಾಂಭೀರ್ಯದಿಂದ ಗ್ಯಾರೇಜಿನಿಂದ ನಿಧಾನವಾಗಿ ಹೊರಬಂದು, ಎಡಕ್ಕೆ ತಿರುಗಿ ಆ ಧೂಳಿನ ಪಾತ್ರೆಯನ್ನು ಒಂದು ಸುತ್ತು ಹೊಡೆದು ಹವೇಲಿಯ ಮುಂದೆ ಬಂದು ನಿಲ್ಲುತ್ತಿತ್ತು. ಎಲ್ಲರಂತೆ ಚಿಕ್ಕಪ್ಪ ಕೂಡ ಈ ವಿದ್ಯಮಾನಗಳನ್ನೆಲ್ಲಾ ನೋಡುತ್ತಾ ಗೇಟಿನ ಬಳಿ ಕಾರಿಗೆ ಕಾಯುತ್ತಿರುತ್ತಿದ್ದ. ಹಳೆಯ ಜಟಕಾಗೂ, ಆ ಹೊಸದಕ್ಕೂ ಇದೇ ನೋಡಿ ಮುಖ್ಯ ವ್ಯತ್ಯಾಸ. ಚಿಕ್ಕಪ್ಪ ಕಾರನ್ನು ಹತ್ತಿ ಹಿಂದಿನ ಸೀಟಿನಲ್ಲಿ ಕೂರುತ್ತಿದ್ದಂತೆ ಜನಕ್ಕೆ ಸ್ವಲ್ಪ ಧೈರ್ಯ ಮೂಡಿ ಹತ್ತಿರಕ್ಕೆ ಬರುತ್ತಿದ್ದರು.

ಹಳೆಯ ಜಟಕಾದ ಕುದುರೆಯ ಖುರಪುಟ, ಚಕ್ರಕ್ಕೆ ಕಡ್ಡಿ ತಾಗಿದ ಕರ್ರ್ ಸದ್ದು, ಕುದುರೆಗೂ ಮನುಷ್ಯನಿಗೂ ಆಗುತ್ತಿದ್ದ ಸತತ ಸಂಭಾಷಣೆ ಇವುಗಳಿಗೆ ಒಗ್ಗಿದ್ದ ದಾರಿಯಲ್ಲಿನ ಜನಜಂಗುಳಿಗೆ ಏನೂ ಶಬ್ದವಿಲ್ಲದೆ ಮುಂದೆ ಸರಿಯುತ್ತಿದ್ದ ಈ ಹೊಸ ಜಟಕಾಗೆ ಹೊಂದುಕೊಳ್ಳುವುದು ಕಷ್ಟವಾಗಿತ್ತು. ಅದರ ಘರ್ರ್ ಶಬ್ದ ಅವರ ಮೇಲೆ ಏನೂ ಪ್ರಭಾವ ಬೀರಿರಲಿಲ್ಲ. ಹಾಗಾಗಿ ಕಾರಿನ ಫುಟ್ ಬೋರ್ಡ್ ಮೇಲೆ ಎರಡು ಪಕ್ಕಗಳಲ್ಲೂ ಒಬ್ಬೊಬ್ಬ ನಿಂತು ಜನಗಳೊಂದಿಗೆ ಮಾತನಾಡುವುದಕ್ಕೆ ಶುರುಮಾಡಿದ ನಂತರವೇ ಕಾರು ಮುಂದೆ ಚಲಿಸಲು ಸಾಧ್ಯವಾಗುತ್ತಿತ್ತು. ಮಡ್ ಗಾರ್ಡ್ ಮೊಸಳೆಗಳೂ ಈ ಯತ್ನದಲ್ಲಿ ಸಹಾಯಕವಾಗಿದ್ದವು ಅನ್ನಿ.

ಈ ಹೊಸ ಟೆರ್ರಾಪ್ಲೇನ್ ನಮ್ಮ ಚಿಕ್ಕಪ್ಪನಿಗೆ ಎಷ್ಟು ಇಷ್ಟವಾಯಿತೆಂದರೆ, ಅವನು ಹಳೆಯ ಜಟಕಾವನ್ನು ಸಂಪೂರ್ಣವಾಗಿ ಮರೆತಂತಿತ್ತು. ಒಂದು ಕಾಲದಲ್ಲಿ ಜನರ ಮೆಚ್ಚುಗೆಗೆ ಪಾತ್ರವಾಗಿದ್ದ ಅಜಾಂ ಮತ್ತು ಅವರ ಕುದುರೆಯನ್ನು ಈಗ ಕೇಳುವರಿಲ್ಲವಾಯಿತು. ವರ್ಷಕ್ಕೊಮ್ಮೆ ಜಟಕಾಗೆ ಸಲ್ಲುತ್ತಿದ್ದ ಬಣ್ಣದ ಚಿತ್ರಗಳನ್ನೂ ಸಹಾ, ಅನಗತ್ಯವೆಂದು ಕೈಬಿಟ್ಟರು. ಮಿರುಮಿರನೆ ಮಿರುಗುತ್ತಿದ್ದ ಕುದುರೆಯೂ ಸಹಾ ತನ್ನ ಹೊಳಪನ್ನು ಕಳೆದುಕೊಂಡಂತೆ ಕಂಡಿತು.

ಚಿಕ್ಕಪ್ಪ ಕಾಲವಾದ ನಂತರ ಟೆರ್ರಾಪ್ಲೇನ್‌ಗೆ ಬೇಕಾದ ವರ್ಚಸ್ಸು ಯಾರಲ್ಲೂ ಇಲ್ಲದಿದ್ದುದರಿಂದ, ಅದು ಗ್ಯಾರೇಜು ಸೇರಿ ತುಕ್ಕು ಹಿಡಿಸಿಕೊಂಡು ಕೂತಿತ್ತು. ಅದನ್ನು ನೋಡಿದಾಗಲೆಲ್ಲಾ ಮನೆಯ ಯಜಮಾನ ಹೋಗುವಾಗ ತನ್ನೊಂದಿಗೆ ಎಲ್ಲವನ್ನೂ ತೆಗೆದುಕೊಂಡು ಹೋದನೇನೋ ಎಂಬ ಭಾವನೆ. ಈ ಅವನತಿಯ ಕಾಲದಲ್ಲಿ ಹಳೆ ಜಟಕಾ ಮತ್ತೆ ಬಳಕೆಗೆ ಬಂತು. ಅಜಾಂಗೂ ವಯಸ್ಸಾಗುತ್ತಾ ಬಂದಿತ್ತು. ಮೊದಲಿನಂತೆ ಆತ ಶಿಸ್ತಿನ ಉಡುಪು ಧರಿಸುವುದನ್ನು ಬಿಟ್ಟಿದ್ದ. ಕುದುರೆ ಕೂಡ ಮುದಿಯಾಗುತ್ತಿದ್ದು ಚಾಲಕನ ಆಜ್ಞೆಯ ಅಗತ್ಯವಿಲ್ಲದೇ ರೂಢಿಯಿಂದ ಕಲಿತ ತನ್ನ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿತ್ತು. ಮನೆಯ ಯಜಮಾನನ ದರ್ಪದ ಯಾತ್ರೆಯ ದಿನಗಳು ಮುಗಿದು. ಜಟಕಾ ಸವಾರಿ ಈಗ ಊರಾಚೆ ಇದ್ದ ಹೊಲಗಳಿಗೆ ಹೋಗುವ ಒಂದು ಸಾಧನವಾಗಿತ್ತು ಅಷ್ಟೇ. ನಮ್ಮ ಚಿಕ್ಕಮ್ಮನ ಜೊತೆ ನಾನು ಮುದುಡಿ ಕುಳಿತು ಕಾರಿನ ಚಾಲಕನಿಗಿಂತ ಚೆನ್ನಾಗಿ ಅಜಾಂ ವಾಹನ ನಡೆಸುವುದನ್ನು ಮೆಚ್ಚುಗಣ್ಣಿನಿಂದ ನೋಡುತ್ತಿದ್ದೆ.

ಕುದುರೆಗೆ ತಾನು ಸಂಚರಿಸುತ್ತಿದ್ದ ಪ್ರದೇಶ ತನ್ನ ಕಡಿವಾಣದಷ್ಟೇ ಚೆನ್ನಾಗಿ ಪರಿಚಿತವಾಗಿತ್ತು. ನಮ್ಮ ಚಿಕ್ಕಮ್ಮನ ದಿನನಿತ್ಯ ಕಾರ್ಯಕ್ರಮಗಳಲ್ಲಿಯೂ ಸಹಾ ಎಳ್ಳಷ್ಟೂ

ವ್ಯತ್ಯಾಸವಿರುತ್ತಿರಲಿಲ್ಲ. ಬೆಳಗ್ಗೆ ಹತ್ತು ಘಂಟೆಗೆ ಸರಿಯಾಗಿ ನಾವು ಸ್ಟೇಷನ್ ರಸ್ತೆಯಿಂದ ಹೊರಟು ರೈಲ್ವೇ ಗೇಟ್ ದಾಟಿ. ಹಂಪಿ ರಸ್ತೆಗೆ ತಿರುಗುತ್ತಿದ್ದೆವು. ಸ್ವಲ್ಪ ದೂರದಲ್ಲೇ, ಹೊಸದಾಗಿ ಆದರೆ ಹರಕು ಹರುಕಾಗಿ ಹಾಕಿದ್ದ ಟಾರ್ ರಸ್ತೆ ಬಿಟ್ಟು ಮಣ್ಣು ಹಾದಿಗೆ ತಿರುಗುತ್ತಿದ್ದೆವು. ಧೂಳು, ಕಲ್ಲು ಮಣ್ಣುಗಳು ತುಂಬಿದ್ದ ಈ ದಾರಿಯಲ್ಲಿ ಎತ್ತಿನ ಗಾಡಿಯಿಂದಾದ ಕೊರಕಲು, ಹಳ್ಳದಿಣ್ಣೆ, ಅಲ್ಲಲ್ಲಿ ಪುಟ್ಟ ಹೊಳೆಗಳು ಕಾಣಸಿಗುತ್ತಿದ್ದವು. ಇಪ್ಪತ್ತು ನಿಮಿಷಗಳ ಈ ಪ್ರಯಾಣದ ನಂತರ ನಮ್ಮ ಹೊಲ ಸಿಗುತ್ತಿತ್ತು. ಸಂಜೆಯವರೆಗೂ ಅಲ್ಲೇ ನಮ್ಮ ಠಿಕಾಣಿ. ದಾರಿಯುದ್ದಕ್ಕೂ ಕುದುರೆ ಮತ್ತು ಸಾರಥಿಗಳ ನಡುವೆ ಹಿಂದೆ ನಡೆಯುತ್ತಿದ್ದ ಮಾತುಕತೆ ಈಗ ಸಂಪೂರ್ಣವಾಗಿ ಮಾಯವಾಗಿತ್ತು. ಅವರಿಬ್ಬರಿಗೂ ಈಗ ವೃದ್ಧಾಪ್ಯ. ಆಗೊಮ್ಮೆ ಈಗೊಮ್ಮೆ ಕೋಲಿನಿಂದ ನವಿರಾಗಿ ತಿವಿದೇ ಕುದುರೆಯನ್ನು ಸುತ್ತಲಿನ ಅಪಾಯಗಳ ಎಚ್ಚರಿಕೆ ನೀಡುತ್ತಿದ್ದ ಅಜಾಂ. ಮಾಡೆಲ್ ಟಿ ಫೋರ್ಡ್‌ಗಳು, ಆರ್ಮ ಸ್ಟ್ರಾಂಗ್ ಸಿಡ್ಲೆಗಳು, ದೈತ್ಯಾಕಾರದ ಬಸ್ಸು ಲಾರಿಗಳು ಇವೆಲ್ಲಾ ಸೇರಿ ನಿದ್ರಿಸುತ್ತಿದ್ದ ನಮ್ಮ ಹಳ್ಳಿಯನ್ನು ಒಮ್ಮೆಲೇ ಎಚ್ಚರಗೊಳಿಸಿದ್ದವು. ದಾರಿಯಲ್ಲಿನ ಸೈಕಲ್‌ಗಳಂತೂ ಸದಾ ಕುದುರೆಯನ್ನು ಸವರಿಕೊಂಡೇ ಹೋಗುತ್ತಿದ್ದವು. ಕುದುರೆ ಮಾತ್ರ ಇವಾವುದನ್ನೂ ಲೆಕ್ಕಿಸದೆ, ದಾರಿಗೆ ಸ್ವಲ್ಪ ಎಡಭಾಗದಲ್ಲಿ ಒಂದೇ ವೇಗದಲ್ಲಿ ಹೋಗುವುದನ್ನು ಅಭ್ಯಾಸ ಮಾಡಿಕೊಂಡಿದ್ದು. ರೈಲ್ವೇ ಕ್ರಾಸಿಂಗಿನಲ್ಲಿ ಲಗಾಮು ಎಳೆಯಬೇಕಾದ ಅಗತ್ಯವೇ ಇರಲಿಲ್ಲ. ಬದಲಾಗುತ್ತಿದ್ದ ನಮ್ಮ ಜೀವನದ ರೂಪುರೇಷೆ ಚೆನ್ನಾಗಿ ಅರ್ಥವಾಗಿತ್ತು ಆ ಕುದುರೆಗೆ. ಯಾವುದೇ ಕಾರಿಗಿಂತ ಉತ್ತಮವಾದ ಅದಕ್ಕೆ ಚಾಲಕನ ಅಗತ್ಯವೇ ಇರಲಿಲ್ಲ. ಬೇರ್ಪಡಿಸಲಾಗದ ಒಬ್ಬ ಹಳೆಯ ಗೆಳೆಯನಂತೆ ಅದು ಅವನನ್ನು ಒಪ್ಪಿಕೊಂಡಿತ್ತು ಅಷ್ಟೆ

ನಮ್ಮ ಕುಟುಂಬದೊಂದಿಗೆ ನಾನು ಶಿವಮೊಗ್ಗೆಗೆ ವಾಸ ಬದಲಿಸಿ, ಅಲ್ಲಿನ ಬಾಡಿಗೆ ಜಟಕಾಗಳು, ಅವುಗಳನ್ನು ಎಳೆಯುತ್ತಿದ್ದ ಬಡಕಲು ಕುದುರೆಗಳನ್ನು ಕಂಡಾಗ ಜಟಕಾಗಳನ್ನು ಕುರಿತ ಒಂದು ಸತ್ಯ ನನಗೆ ಮನವರಿಕೆಯಾಯಿತು. ಎಂದಿಗೂ ಅವು ಟ್ಯಾಕ್ಸಿಗಳಂತೆ ಬಳಸುವ ವಾಹನಗಳಲ್ಲ, ನಾವು ಅದನ್ನು ಹೊಂದಿ, ಪಾಲಿಸಿ ಪೋಷಿಸಿ, ವ್ಯಕ್ತಿ ವ್ಯಕ್ತಿಗಳ ನಡುವೆ ಆಗುವಂತೆ ಅದರೊಂದಿಗೆ ಬೆಳೆದು ಹಿರಿಯರಾಗುವ ಸಾಧನಗಳು ಅವು. ಹಾಗಾಗಿ ಅವುಗಳ ಇಂದಿನ ಅವನತಿಯಿಂದ ನನಗೇನೂ ನೋವುಂಟಾಗಿಲ್ಲ. ಲಕ್ಷದಲ್ಲಿ ನಾವೂ ಒಬ್ಬರೆನ್ನುವ ಇಂದಿನ ಪ್ರಪಂಚದಲ್ಲಿ, ಅವುಗಳಿಗೆ ಸ್ಥಾನವೆಲ್ಲಿ? ■

---

# ತ್ರಾಸ – ಪ್ರಾಸ

ಮಾತುಗಾರರಿಗೆ
ಮಾತುಗಳು ಸರಿಯಾಗಿ
ಹೊಳೆಯದಿದ್ದರೆ
ತ್ರಾಸದಾಯಕ
ಕವಿಗಳಿಗೆ
ಸರಿಯಾದ ಪದಗಳು
ಸಿಗದಿದ್ದರೆ
ಪ್ರಾಸದಾಯಕ

# ಮರವೆ

● ಸಿ.ಆರ್. ಸತ್ಯ

ಇತ್ತೀಚೆಗೆ ನನಗೆ ಅಸಾಧ್ಯ ಮರವೆ ಇರೋದರಿಂದ ಮರವೆ ಸ್ಪೆಶಲಿಸ್ಟ್ ಡಾಕ್ಟರ ಹತ್ತಿರ ಹೋದೆ. ಅಲ್ಲಿ ನಮ್ಮಿಬ್ಬರ ನಡುವೆ ಆದ ಸಂಭಾಷಣೆ ಹೀಗಿತ್ತು:

''ನಮಸ್ಕಾರ ಡಾಕ್ಟರೇ. ನನ್ನ ಹೆಸರು ಕೆಂಪಣ್ಣಯ್ಯ ಅಂತ''

''ನಿಮ್ಮ ಹೆಸರು ಆಮೇಲೆ ಆಗಲಿ. ಏನಾಗಿದೆ ನಿಮಗೆ?''

''ವಿಪರೀತ ಮರವೆ ಡಾಕ್ಟರೇ. ಎಲ್ಲಾ ಮರತು ಹೋಗ್ತಾ ಇದೆ''

''ಎಲ್ಲಾ ಅಂದರೆ ಏನು? ಏನಾದರೂ ಲಿಸ್ಟ್ ಮಾಡ್ಕೊಂಡು ಬಂದಿದ್ದೀರಾ?''

''ಮಾಡಿದ್ದೆ. ತರೋದು ಮರೆತ್ಬುಟ್ಟೆ ಡಾಕ್ಟರೇ. ಅದೇ ಅಲ್ವಾ ನನ್ನ ಪ್ರಾಬ್ಲಮ್ಮು?''

''ನೋಡಿ ಸಂಗಣ್ಣಯ್ಯನವರೆ-''

''ಡಾಕ್ಟರೇ, ನಾನು ಸಂಗಣ್ಣಯ್ಯ ಅಲ್ಲ. ನಾನು.. ಓ, ನನ್ನ ಹೆಸರೇ ಜ್ಞಾಪಕ ಬರ್ತಿಲ್ಲ. ಹಾ! ಗುಂಡಣ್ಣಯ್ಯಾ ಅಂತ.''

''ಯಾವುದೋ ಅಣ್ಣಯ್ಯ ಬಿಡಿ. ಅಲ್ರೀ ಮಂಗಣ್ಣಯ್ಯ, ಹೆಂಡತೀ ಹೆಸರಾದ್ರೂ ಜ್ಞಾಪಕಾ ಇದ್ಯೇನ್ರೀ?''

''ಹೆಂಡ್ತೀದೇ..? ಯಾರು, ನನ್ನ ಹೆಂಡ್ತೀದೇ..?''

''ಇಲ್ಲ, ನನ್ನ ಹೆಂಡ್ತೀದು ಕೇಳ್ತಿದೀನಿ ಅಂತ ಅಂದ್ಕೊಂಡ್ರೇನ್ರೀ, ನಿಮ್ಮ ಹೆಂಡ್ತೀದೂ?''

''ನನಗೆ ಹೆಂಡ್ತಿ ಇರೋದು ಜ್ಞಾಪಕ ಇದೆ ಡಾಕ್ಟರೇ. ಆದರೆ ಅವಳ ಹೆಸರು....''

''ಹೋಗ್ಲಿ ಬಿಡಿ ಪೆಂಗಣ್ಣಯ್ಯ. ನನಗೂ ನನ್ನ ಹೆಂಡತಿ ಹೆಸರು ಜ್ಞಾಪಕ ಇಲ್ಲ. ಇದೆಲ್ಲಾ ವಯಸ್ಸಾದ ಮೇಲೆ ಆಗೋದೇ. ಆದರೂ ಹೆಂಡತಿ ಹೆಸರನ್ನೇ ಮರೆತರೆ ಅದಕ್ಕೆ ನಾವು ನಿಮ್ಮನ್ನು ಸ್ಟೇಜ್ ತ್ರೀ ಪೇಶೆಂಟ್ ಅಂತ ಕರೀಬೇಕಾಗುತ್ತೆ.''

''ಹಾಗಂದ್ರೆ ಏನು ಡಾಕ್ಟರೇ? ನನ್ನ ತಲೆ ಆಪರೇಶನ್ ಆಗ್ಬೇಕೇ. ಸೀರಿಯಸ್ಸೇ?''

''ಆಪರೇಶನ್ ಮಾಡೋಕ್ಕೆ ನಿಮ್ಮ ತಲೇಲಿ ಹೇಳ್ಕೊಳ್ಳೋ ಅಂಥಾದ್ದು ಏನಿಲ್ಲ ಬಿಡಿ. ಆದರೆ ಹೊರಗಿನಿಂದಲೇ ನೋಡಿದರೆ, ನಿಮ್ಮ ತಲೇಲಿ ಒಂದು ಪಾರ್ಟ್ ಇದೆ. ಅದರ ಹೆಸರು... ಹೆಸರು.. ಮರತುಹೋಗಿದೆ. ಅದು ಮುಂದಿನಿಂದ ಹಿಂದಕ್ಕೆ ತಿರುಗಿಕೊಂಡಿರೋ ಹಾಗಿದೆ. ಈಗ ಅದನ್ನ ವಾಪಸ್ಸು ತಿರುಗಿಸಬೇಕು ಅಷ್ಟೆ''

''ಇದಕ್ಕೆ ಏನಾದರೂ ಟಾಯ್ಲೆಟ್‌ಗಳಿಂದ.. ಅಯ್ಯೋ ಸಾರೀ.. ಏನಾದರೂ ಟ್ಯಾಬ್ಲೆಟ್‌ಗಳಿಂದ ವಾಸಿ ಮಾಡೋಕ್ಕೆ ಆಗಲ್ವೇ ಡಾಕ್ಟರೇ?''

''ಆಗುತ್ತೆ. ನೋಡಿ, ಪುಟ್ಟಣ್ಣಯ್ಯನವರೆ, ಪ್ರಾಬ್ಲಮ್ ಅದಲ್ಲ. ನನಗೆ ಆ ಟ್ಯಾಬ್ಲೆಟ್ ಹೆಸರು ಮರತುಹೋಗಿದೆ. ತಕ್ಷಣ ಬರೆದುಕೊಡೋಕ್ಕೆ ಆಗೊಲ್ಲ.''

''ಮತ್ತೇನು ಮಾಡಲಿ ಡಾಕ್ಟರೇ?''

''ಒಂದು ಕೆಲಸ ಮಾಡಿ. ಬನ್ನಿ ಇಲ್ಲಿ ಮಲಗಿಕೊಳ್ಳಿ. ನರ್ಸ್! ನರ್ಸ್!! ಆ... ಇದು... ಇದು... ಹಾ, ಪುಟ್ಟ ಸೈಜ್ನ ಸುತ್ತಿ ತಗೊಂಡು ಬನ್ನಿ. ಹಾ. ಥ್ಯಾಂಕ್ಸ್, ಕುಂಟಣ್ಣಯ್ಯನವರೆ, ಈಗ ನಿಮ್ಮ ತಲೇನ ಮೆಲ್ಲಗೆ ಕುಟ್ಟಿ ನೋಡ್ತೀನಿ. ಕೂಗಾಡಬೇಡಿ. ಹಾಗೆ... ಗುಡ್, ವೆರಿ ಗುಡ್..''

''ಯಾಕೋ ತಬಲ ಬಾರಿಸಿದ ಹಾಗೆ ಶಬ್ದ ಬರ್ತಾಯಿದೆಯಲ್ಲಾ ಡಾಕ್ಟರೆ?''

''ಅದು ನಿಮ್ಮ ತಲೆ ಭಾಗ.. ಅ.. ಅ.. ಅ. ಹೆಸರು ಮರತಿದೀನಿ.. ಅದು ಟೊಳ್ಳು ಇರೋ ಹಾಗಿದೆ, ಅಷ್ಟೆ ವರಿ ಮಾಡ್ಕೋಬೇಡಿ. ನನಗೂ ಇದೇ ಜಾಗದಲ್ಲೇ ತಲೇಲಿ ಟೊಳ್ಳು ಇದೆ. ಎಲ್ಲಿ ಈ ಪಕ್ಕಕ್ಕೆ ತಿರುಗಿ.. ಹಾ, ಈಗ ಹೇಗಿದೆ ಶಬ್ದ?''

''ಮೃದಂಗ ಬಾರಿಸ್ದಾಗೆ ಇದೆ ಡಾಕ್ಟರೆ.''

''ಅಂದರೆ, ಅಲ್ಲಿ ಲೋಕಲ್ ಆಗಿ ನಿಮಗೆ ಸ್ವಲ್ಪ... ಲಿವರ್ ಮಾಸ್.. ಅಲ್ಲ, ಅಲ್ಲ ಬ್ರೈನ್ ಮಾಸ್ ಇದೇ ಅಂತ ಆಯ್ತು. ಒಳ್ಳೇದೆ. ಅಂದರೆ ನಿಮಗೆ ಸ್ವಲ್ಪನಾದ್ರೂ ಜ್ಞಾಪಕ ಶಕ್ತಿ ಇರಬಹುದು ಅಂತ ಅರ್ಥ. ನೀವು ಹುಟ್ಟಿದ್ದು ಯಾವಾಗ ಹೇಳಿ?''

''ಮರತು ಹೋಗಿದೆ ಡಾಕ್ಟರೆ. ಕಳೆದ ಶತಮಾನದಲ್ಲಿ ಅಂತ ಜ್ಞಾಪಕ..''

''ಹಾಗಂದರೆ ಏನ್ರೀ? ಆಗ ಮಹಾಭಾರತ ಯುದ್ಧ ನಡೀತಿತ್ತೆ?''

''ಛೇ, ಛೇ, ಮೊದಲ್ನೇದೋ ಎರಡ್ನೇದೋ ವರ್ಲ್ಡ್ ವಾರ್ ಆಗ್ತಿತ್ತು ಅಂತ ಜ್ಞಾಪಕ ಡಾಕ್ಟರೆ''

''ಹಾಗಾದ್ರೆ ಈಗ ನಿಮಗೆ ಸಾವಿರಾರು ವರುಷಗಳು ಆಗಿರಬೇಕು. ಸಾಧ್ಯ ಇಲ್ಲ, ಯಾಕೇಂದ್ರೆ, ನೋಡೋಕ್ಕೆ ಇನ್ನೂ ಚಿಕ್ಕವರಾಗಿ ಕಾಣಿಸ್ತಿದೀರ. ಅದೂ ಅಲ್ಲದೆ ನನಗೆ ಜ್ಞಾಪಕ ಇರೋ ಹಾಗೆ, ಎರಡು ವರ್ಲ್ಡ್ ವಾರ್‌ಗಳು ಆಗಿದ್ದು, ವಿಜಯನಗರ ಸಾಮ್ರಾಜ್ಯ ಬೀಳೋಕ್ಕೆ ಮುಂಚೆ. ಡೋಸೇಜ್ ಅಡ್ಜಸ್ಟ್ ಮಾಡೋಕ್ಕೆ ನಿಮ್ಮ ವಯಸ್ಸು ಎಷ್ಟು ಅಂತ ಕೇಳಿದೆ ಅಷ್ಟೆ. ಒಂದು ಕೆಲಸ ಮಾಡ್ತೀನಿ. ಒಂದು ಟ್ಯಾಬ್ಲೆಟ್‌ನ ಬರೆದು ಕೊಡ್ತೀನಿ. ಅದನ್ನ ದಿನಕ್ಕೆ ಒಂದು ಸಲ ಹದಿನೈದು ದಿನಗಳ ಕಾಲ ತಗೊಂಡು, ನನ್ನನ್ನ ಇನ್ನೊಂದು ಸಲ ಬಂದು ನೋಡಿ. ನಮ್ಮ ಆಸ್ಪತ್ರೆ ರೂಲ್ಸ್ ಪ್ರಕಾರ ಈಗಲೇ ಇಲ್ಲಿ ನರ್ಸ್ ಕೈಲಿ ಇನ್ನೂರು ರೂಪಾಯಿ ಕೊಟ್ಟು ಆಮೇಲೆ ನನ್ನ ಪ್ರಿಸ್ಕ್ರಿಪ್ಷನ್ ತೊಗೊಳ್ಳಿ'' ''ಯಾಕೆ ಡಾಕ್ಟರೆ ಅಡ್ವಾನ್ಸ್ ಆಗಿ ದುಡ್ಡು ಕೊಡಬೇಕೇ?''

''ನೋಡ್ರೀ, ಮಂಗಣ್ಣಯ್ಯನವರೆ, ಇಲ್ಲಿ ಬರೋ ಪೇಶೆಂಟ್‌ಗಳೆಲ್ಲಾ ದುಡ್ಡು ಕೊಡೋಕ್ಕೆ ಮರತು ಬಿಟ್ಟು ಹೊರಟು ಹೋಗ್ತಾರೆ, ಅದಕ್ಕೇ! ನರ್ಸ್! ಎಲ್ಲಿದೀರಾ.. ನರ್ಸ್ ನೋಡಿ, ಈ ವೆಂಕಣ್ಣಯ್ಯನವರ ಹತ್ತಿರ 200 ರೂಪಾಯಿ ತಗೊಂಡು ರಸೀತಿ ಕೊಡಿ. ಹಾಗೇ ಆ ಪ್ರಿಸ್ಕ್ರಿಪ್ಷನ್ ಪ್ಯಾಡ್‌ಕೊಡಿ, ಥ್ಯಾಂಕ್ಸ್, ನರ್ಸ್, ನಾನು ತೊಗೊಳ್ಳೋ ಟ್ಯಾಬೆಟ್ ಹೆಸರು ಜ್ಞಾಪಕ ಇದ್ದರೆ ಹೇಳಿ. ಏನು, ನೀವೂ ಮರತು ಬಿಟ್ರಾ... ಅದೇರೀ, ಅದೆಂತಾದೋ ....ಬೂಸ್ಟ್ ಅನ್ನೋ ಟ್ಯಾಬ್ಲೆಟ್ ತೊಗೋತೀನಲ್ಲ, ಅದು... ಅದು...''

''ಮೆಮೋರಿ ಬೂಸ್ಟ್ ಟ್ಯಾಬ್ಲೆಟ್ಟಾ ಡಾಕ್ಟರೇ? ಪೇಪರ್‌ನಲ್ಲಿ ದಪ್ಪ ತಲೆ ಇರೊ ಒಬ್ಬನ್ನ

ಜಾಹೀರಾತಿನಲ್ಲಿ ನೋಡಿದ ಜ್ಞಾಪಕ.''

''ಅದಲ್ಲಾ ರೀ. ಎಂತದೋ ಬೂಸ್ಟ್, ಹೇಗಿದ್ರೂ ನೀವು ಹದಿನೈದು ದಿವಸ ಬಿಟ್ಟು ಬರ್ತೀರಲ್ಲ, ಆಗ ಜ್ಞಾಪಿಸ್ಕೊಂಡು ಆ ಟ್ಯಾಬ್ಲೆಟ್ ಹೆಸರು ಬರೆದುಕೊಡ್ತೀನಿ. ಅಲ್ಲಿ ತನಕ ಒಂದು ಕೆಲಸ ಮಾಡಿ. ದಿನಕ್ಕೆ ಒಂದು ಸಲ ಬೂಸ್ಟ್ ಡ್ರಿಂಕ್ ಕುಡಿದು ಬಿಡಿ ಸಾಕು.''

''ಯಾವ ಬೂಸ್ಟ್ ಡ್ರಿಂಕು ಡಾಕ್ಟರೆ? ಅದೇ, ಸಚ್ಚಿನ್ ದೇವ್, ಕಪಿಲ್ ತೆಂಡೂಲ್ಕರ್ ಎಲ್ಲಾ ಕುಡಿದು ಅವರ ಬೈಸೆಪ್ಸ್ ತೋರಿಸ್ತಾರಲ್ಲಾ, ಆ ಬೂಸ್ಟೇ..?''

''ಅದೇ, ಅದೇ, ಹಲೋ ನರ್ಸ್, ಬೂಸ್ಟ್‌ನ ಸ್ಪೆಲ್ಲಿಂಗ್ ಹೇಳಿ. ಓ! ನೀವೂ ಮರತು ಬಿಟ್ಟೀದೀರಾ? ನೋಡಿ, ಸಂಕಣ್ಣಯ್ಯನವರೇ, ಸಧ್ಯಕ್ಕೆ, ಬಿ ಯೂ, ಯೂ, ಎಸ್, ಟೀ ಅಂತ ಬರೆದು ಕೊಟ್ಟಿದೀನಿ. ಮುಂದಿನ ಸಲ ಬಂದಾಗ ಅದನ್ನ ಸರಿಯಾಗಿ ಬರೆದು ಕೊಡ್ತೀನಿ, ಆಯ್ತಾ?. ಇನ್ನು ನೀವು ಹೊರಡಿ.''

''ಥ್ಯಾಂಕ್ಯೂ ಡಾಕ್ಟರ್!''

ಏನು, ಈಗ ನನ್ನ ಮರವು ವಾಸಿ ಆಯ್ತೇ ಅಂತ ಕೇಳಿದ್ರಾ? ಇಲ್ಲ, ಆಮೇಲೆ ನಾನು ನೋಡಿದ ಡಾಕ್ಟರ್‌ನ ಸಸ್ಪೆಂಡ್ ಮಾಡಿದ್ರಂತೆ. ಈಗ ಅದೇ ಆಸ್ಪತ್ರೇನಲ್ಲೇ, ನಾನೂ ಅವರೂ ಔಟ್ ಪೇಶೆಂಟ್‌ಗಳಾಗಿ ಅಕ್ಕ ಪಕ್ಕದ ಕುರ್ಚಿಗಳಲ್ಲೇ ಕೂತ್ಕೊಂಡು ಒಬ್ಬ ಹೊಸ ಡಾಕ್ಟರ್ ಹತ್ತಿರ ಕನ್‌ಸಲ್ಟೇಶನ್‌ಗೆ ಕಾಯ್ತಾ ಇದೀವಿ. ''ನಾನು ಜ್ಞಾಪಕ ಇದೆಯೇ ಡಾಕ್ಟರ್ರೇ?'' ಅಂತ ಕೇಳಿದೆ. ''ನನಗೇ ನಾನು ಜ್ಞಾಪಕ ಇಲ್ಲ ಇನ್ನು ನೀವೆಲ್ಲಿ ಜ್ಞಾಪಕಕ್ಕೆ ಬರ್ತೀರೀ?'' ಅಂತ ನನ್ನ ಬೈದರು. ಅದೇ ನರ್ಸ್ ನಮ್ಮನ್ನ ನೋಡಿಕೋತಿರೋದು. ಆಸ್ಪತ್ರೆ ರೂಲ್ಸ್ ಪ್ರಕಾರ ಅಡ್ವಾನ್ಸ್ ಪೇಮೆಂಟ್ ಅಂತೂ ಮಾಡಿದೀವಿ. ■




ನಮ್ಮ ಟಿಂಬರ್ ಲಾಬಿಯವರಿಗೆ ಹೇಳಿದ್ದೀನಿ
ಇವತ್ತೊಂದು ದಿನ ಕಾಡುಕಡೀಬೇಡೀಂತ...

# ಓಲ್ಡ್ ಮಾಡೆಲ್ಸ್

● ಡಾ. ಶ್ಯಾಮಲಾ ರವಿಶಂಕರ್

ನಾವು ಹಳೆಕಾಲದವರು, ಎಷ್ಟು ಸಲ ಬೇರೆ ಬೇರೆ ತರ ಹೇಳಿಸ್ಕೋಬೇಕೂಂತೀನೀ? ಸರ್ ನಾವ್ ಓಲ್ಡ್ ಮಾಡೆಲ್ಸ್. ಇನ್ನು ವರ್ಕಿಂಗ್ ಮಾಡೆಲ್ಸ್ ಅಲ್ವಾ. ಯಾತಕ್ಕೆ ಈಗ ಈ ರಗಳೇ ಅಂದ್ರಾ? ದಿನಕ್ಕೊಂದು ಆದ್ರೂ ರಗಳೆ ಹಚ್ಕೊಳ್ದೇ ಇದ್ರೆ ಓಲ್ಡ್ ಅಂತ ಹೇಗೆ ಅನ್ನಿಸಿಕೊಳ್ತೀವಿ (ನೋಡಿ ನಾವೇ ಹೇಳ್ಕೊಳ್ತಾ ಇದ್ದೀವಿ ಈಗ) ಇವತ್ತಿನ ರಗಳೆಗೇ ಬರೋಣ. ಏನೋ ಹುಡುಕೋಕೆ ಹೋಗಿ ಏನೇನನ್ನೋ ತಪ ತಪಾಂತ ಬೀಳಿಸ್ದೆ, ನನ್ನ ಅಸಂಖ್ಯಾತ ಗೂಡುಗಳಿಂದ. ಅವನ್ನೆಲ್ಲಾ ಹಾಗೆ ತುರುಕುತ್ತಿದ್ದಾಗ ಹಳೇ ಫೋಟೋಗಳ ಗುಂಪೊಂದು ಕೈಜಾರಿ ಮತ್ತೆ ನೆಲವನಪ್ಪಿಕೊಂಡಾಗ, ಇಲ್ಲಿ ಏನೋ ವಿಶೇಷವಿದೆ, ಇದೊಂದು ದೇವತಾ ಸಂದೇಶ ಇದ್ದೇ ಇರಬೇಕು ಅಂತ ಅನ್ನಿಸ್‌ದೇ ಇರತ್ತಾ, ನೀವೇ ಹೇಳಿ. ಸರಿ, ಆ ಫೋಟೋಗಳನ್ನ ಹಿಡ್ಕೊಂಡು ಕೂತೆ ಬಿಟ್ಟೆ, ಕೆಲಸನೂ ಪೋಸ್ಟ್‌ಪೋನ್ ಮಾಡೋಕೆ ಒಂದು ಚಾನ್ಸು.

ಮೂರು ವರ್ಷಗಳ ಹಿಂದೆ ಅನಂತಪುರ (ಎಂಬೋದೊಂದು ಊರಿದೆ ಆಂಧ್ರ ಪ್ರದೇಶದಲ್ಲಿ)ಕ್ಕೆ ಹೋಗಿದ್ದ ಟ್ರಿಪ್ಪಿನದು. ಅಲ್ಲಿಗೆ ಹೋಗಿದ್ದೂ ಅಲ್ಲದೆ ಫೋಟೋ ತೆಗಿಸ್ದ್ದೂ ಸಾಲದೆಂಬಂತ ಈಗ ಈ ಕೊರೆತ ಬೇರೆ ನಾ ಅನ್ನಬೇಡಿ. ಎಲ್ಲರ್ಗಿಗೂ ಅದ್ರಲ್ಲೂ ಓಲ್ಡ್ ಮಾಡೆಲ್‌ಗೆ ಎಲ್ಲಿರತ್ತೆ ಈ ತರ ಚಾನ್ಸು? ತಲೆ ಕೊರೆಸ್ಕೊಳ್ಳೋವ್ರು ಇರೋವರ್ಗೂ ಕೊರಿಯೋವ್ರೂ ಇರ್ತಾರೆ ಅಲ್ವಾ. ಈಗ ಗತಕಾಲಕ್ಕೆ ಬರೋಣ.

ಅಲ್ಲೊಂದು ಮದುವೆಗೆ ಬಹಳ ಒತ್ತಾಯದ ಆಹ್ವಾನವಿತ್ತು, ಅದೂ ಬಳಗದವ್ರದ್ದು, ಅಲ್ಲದೆ ಆ ಊರನ್ನು ರೈಲಲ್ಲಿ ಹಾದುಹೋಗುವಾಗ ಕಿಟಕಿಯಿಂದ ಕಂಡಾಗೆಲ್ಲಾ ಈ ಊರೋ ಪರ್ವಾಗಿಲ್ವೆ, ಒಂದು ಸಾರಿ ನೋಡಬೇಕು ಅನ್ನಿದ್ದೂ ಕೂಡ ಉಂಟು. ಹಾಗೂ ಅಲ್ಲಿನ ದೊಡ್ಡದೊಂದು ಕಾಲೇಜಿನಲ್ಲಿ ನನ್ನ ಪತಿ ದೇವರು ಹಿಂದೊಂದು ಕಾಲದಲ್ಲಿ ಓದಿದ ಕಾರಣ ಅವರಿಗೆ ಅಭಿಮಾನ ಸಹಜವೇ. ಅದೂ ಅಲ್ಲದೆ ಆ ಊರಿನ ಬಗ್ಗೆ ನಮ್ಮತ್ತೆ ಮನೆವರಿಗೆ ಬಹಳ. ಈಗ ಆ ಮಹಾನಗರವನ್ನು ನೋಡುವ ಚಾನ್ಸು ಅಂದುಕೊಂಡು ಹೊರಟೇ ಬಿಟ್ಟೆ. ಇವರಿಗೆ ಎಲ್ಲಿಲ್ಲದ ಉತ್ಸಾಹ.

ಸುಮಾರಾಗಿ ದೊಡ್ಡ ಹೋಟೆಲ್ ಅನ್ನಬಹುದಾದ ಹೋಟೆಲ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲೇ ರೂಮೊಂದನ್ನು ನಮಗಾಗಿ ಕಾದಿರಿಸಿದ್ರು, ಕಾರಣ, ಅಲ್ಲಿ ಕಾಲು ಘಂಟೆಗೆ ಒಂದು ಸಲವಾದರೂ ಕರೆಂಟ್ ಹೋಗತ್ತೆ, ಆಗ ಲಿಫ್ಟ್‌ನಲ್ಲಿ ಸಿಕ್ಕೊಂಡ್ರೆ ಕಷ್ಟ ಆಗಬಾರದು ನಾವು ದೊಡ್ಡವರಲ್ಲವೇ, ಅದಕ್ಕೆ. ಎಲ್ಲ ನಮಗಾಗೆ, ಅಲ್ಲ, ನಮ್ಮ ವಯಸ್ಸಿಗಾಗಿ. ನೀವು ಎಂದಾದ್ರೂ ಹೋಟೆಲ್‌ನಲ್ಲಿಯ ಗ್ರೌಂಡ್ ಫ್ಲೋರ್ ರೂಮ್‌ನಲ್ಲಿ ಇದ್ದಿದ್ರೋ ಇಲ್ಲವೋ, ಈ ತರ ವ್ಯವಸ್ಥೆಗೆ ಮಾತ್ರ ಒಪ್‌ಕೋಬೇಡಿ. ಆ ಬವಣೆ ಹೇಳತೀರದು. ರಾತ್ರಿಯೆಲ್ಲಾ ಫೋನುಗಳ ಕಾಟ. ಫ್ರಂಟ್ ಡೆಸ್ಕಿನಿಂದ ಆಗುತ್ತಿದ್ದ ಸಂಭಾಷಣೆಗೆ ನಾವೇ ಸಾಕ್ಷಿ, ತರಲೆ

ಗಿರಾಕಿಗಳಾಗಮನ, ನಿರ್ಗಮನ, ದೋಬಿಯ ವ್ಯವಹಾರ, ಪೊಲೀಸರ ಸರ್ಪ್ರೈಸ್ ಚೆಕಿಂಗ್. ಅಬ್ಬಾ... ಒಂದಾ... ಎರಡಾ... ಸಾಕೋ ಸಾಕು. ಈ ಮಧ್ಯದಲ್ಲಿ ಅವಾಗವಾಗ ಮೆತ್ತಗೆ ಮಾತಾಡಿ, ದೊಡ್ಡವರು ಮಲಗಿದ್ದಾರೆ ಅನ್ನೋ ಹಿತೋಕ್ತಿ. ಇವೆಲ್ಲ ಕೇಳಿಸ್ಕೊಳ್ತಾ ಕೇಳಿಸ್ಕೊಳ್ತಾ ಬೆಳಗಾಗಿದ್ದೇ ಗೊತ್ತಾಗ್ಲಿಲ್ಲ!

ಮದುವೆ ಮನೆಗೆ. ನಿದ್ದೆ ಕಣ್ಣಲ್ಲೆ ಹೋದ್ವಿ. ಅಲ್ಲಂತೂ ನಮಗೆ ಎಲ್ಲಿಲ್ಲದ ಮರ್ಯಾದೆ, ವಯಸ್ಸಾದವರಲ್ಲವೇ. ನಮ್ಮ ಆಹ್ವಾನ ಮನ್ನಿಸಿ ಬೆಂಗಳೂರಿನಿಂದ ಬಂದಿದ್ದಾರೆ ದೊಡ್ಡವರು ಅಂತ ಮಂಟಪದಲ್ಲಿದ್ದವರಲ್ಲಿ ಅರ್ಧ ಜನಸಮೂಹ ನಮ್ಮಲ್ಲಿ ಬಂದು ನಮಸ್ಕಾರ ಮಾಡಿದರೆ ನಮಗೆ ಆಶೀರ್ವಾದ ಮಾಡಿಮಾಡಿ ಸುಸ್ತಾಯಿತು. ಓಲ್ಡ್ ಮಾಡೆಲ್ಸ್ ಅಲ್ವೆ. ಊಟಕ್ಕೂ ನಮಗೆ ಪ್ರೈಯಾರಿಟೀ. ಎಲ್ಲ ಉಪಚಾರಗಳಾದ ಮೇಲೆ ನನಗೆ ಪಟ್ಟು ಸೀರೆ, ಇವರಿಗೆ ಒಬ್ಬಟಂಚು ಪಂಚೆ ನಮ್ಮ ಕೈ ಸೇರಿತು. ಸಂಜೆ ಆರತಕ್ಷತೆಗೂ ಬಲಾತ್ಕಾರವಿದ್ದಾಗ್ಯೂ 'ನೀವು ಬಂದ್ರೆ ಚೆನ್ನಾಗಿರತ್ತೆ. ಕೈಲಿಯಾಗ್ದಿದ್ರೆ ಪರವಾಗಿಲ್ಲ, ಪಾಪ, ಹಿರಿಯರು. ಪ್ರಯತ್ನ ಮಾಡಿ' ಎಂದು ಮನವಿ ಮಾಡಿಕೊಂಡರು.

ನಾವು ಹಾಗೆ ಗಾಡಿ ಬಿಟ್ವಿ ನಮ್ಮ ಹೋಟೆಲ್ಗೆ. ಎಸಿ ಹಾಕ್ಕೊಂಡು ವಿಶ್ರಾಮದ ನಂತರ ಅಲ್ಲೇ ಸುತ್ತಮುತ್ತ ಅಡ್ಡಾಡತಾ ಇದ್ದಾಗ ಇವರು ''ಇಲ್ಲಿ ಬಾಯ್ಸ್ ಹಾಸ್ಟೆಲ್ ಇತ್ತಲ್ಲಾ ಈಗ ಎಲ್ಲಿದೆ'' ಅಂತ ಕಂಡ ಕಂಡವರನ್ನ ಕೇಳ್ತಾ ಹೋದರು. ಗೊತ್ತಿಲ್ಲ ಸರ್ ಅಂದವರೇ ಬಹಳಷ್ಟು ಜನ ಕಡೆಗೊಬ್ಬಾತ ''ಸರ್ ನಮ್ಮ ತಂದೆ ಕೂಡ ಹೇಳೋವ್ರು ಅವ್ರು ಅಲ್ಲೇ ಇರೋವ್ರಂತೆ. ಇದೇ ಸರ್ ಅದು ನೋಡಿ. ಈ ಫ್ಲೈ ಓವರ್ ಕೆಳಗೆ.. ಅರ್ಧದಷ್ಟು ಫ್ಲೈ ಓವರ್ ಇನ್ನರ್ಧದಷ್ಟು ಮತ್ತೆ ಈ ಪಕ್ಕಕ್ಕೆ ಅಂಗಡಿಗಳು ಬಂದಿವೆ'' ಎಂದ. ''ಈ ಕಾಲದವರಿಗೆ ಅದರ ಬೆಲೆ ಏನು ಗೊತ್ತು. ಎಷ್ಟು ಚೆನ್ನಾಗಿತ್ತು ಏನು ಕಥೆ ಅಂತ ಒಂದು ದೊಡ್ಡ ಭಾಷಣನೇ ಬಿಗಿದು ಬಿಡ್ತಾರೆ ಇವತ್ತಿಗೂ'' ಅಂತ ಸೇರಿಸಿದ. ಮತ್ತೆ ನಿಮಗೂ ಹಾಗೆ ಅನ್ನಿಸ್ತಾ ಸರ್, ಪಾಪ, ಹಳೇ ಕಾಲದವರು ಅನಬೇಕೇ, ಅವ್ನೊವೇ ಸರಿ ಜಾಗ ಖಾಲಿ ಮಾಡಿದ್ವಿ.

ಇನ್ನು ನಮ್ಮವರ ಹುಡುಕಾಟ ತಮ್ಮ ಕಾಲೇಜ್ ಕಡೆಗೆ ತಿರುಗಿತು ''ಆಹಾ. ಆ.. ಕ್ಲಾಕ್ ಟವರ್ ನೋಡು ನಮ್ಮ ಫಿಸಿಕ್ಸ್ ವಿಭಾಗಕ್ಕೆ ತಿಲಕ ಪ್ರಾಯ. ಅದನ್ನಾದ್ರೂ ಉಳಿಸಿದ್ದಾರಲ್ಲ ಆವಾಗ ಇದ್ದ ಹಾಂಗೇ ಇದೆ'' ಅಂತ ಖುಷಿಪಟ್ಕೋತಾ ಇದ್ದ ಹಂಗೆ ತಿಳೀತು ಅದು ಈಗ ಕಾಲೇಜಲ್ಲ ಮುನಿಸಿಪಾಲಿಟಿ ಆಫೀಸು ಅಂತ. ಕಾಲೇಜೋ ಊರ ಹೊರಗೆ ದೂಡಲಾಗಿತ್ತು. ಅಂದ ಹಾಗೆ ನಾನು ಕೆಲಸಕ್ಕೆ ಸೇರಿಕೊಂಡ ಹೊಸದರಲ್ಲಿ ಸೈಟೊಂದು ಕೊಂಡುಕೊಂಡಿದ್ದೆ ಆಗ ಊರ ಹೊರಗೆ ಅಂತಿತ್ತು ಅದನ್ನಾದರೂ ನೋಡಿಕೊಂಡು ಬರೋಣ ಅಂದರು ನಮ್ಮವರು. ಮತ್ತೆ ಹೋಟೆಲ್‌ಗೆ ಹೋಗಿ ನಕ್ಷೆ ತೆಗೆದುಕೊಂಡು ಹೊರಟೆವು. ಅಷ್ಟಿಷ್ಟು ಹುಡುಕಾಡಿದ ಮೇಲೆ ಆ ಏರಿಯಾ ಅಂತೂ ಸಿಕ್ಕಿತು. ಅಲ್ಲಿ ಟ್ರೆಸ್ ಪ್ಯಾಸ್ ಮಾಡಿದವರನ್ನು ಶಿಕ್ಷೆಗೆ ಗುರಿಮಾಡಲಾಗುತ್ತದೆ ಎಂಬ ಫಲಕ ನಮಗೆ ಸ್ವಾಗತ ನೀಡಿತು! ಅಲ್ಲಿ ಧರ್ಮಶಾಲೆ ಒಂದನ್ನಕಟ್ಟಿಸ್ತಾರಂತೆ. ಸ್ಥಾನಿಕರಿಂದ ತಿಳಿದ ಸಮಾಚಾರ! ಅಲ್ಲೊಬ್ಬರು ಹೀಗಂದ್ರು- ಅವಾಗ್ಯಾವಗ್ಲೋ ತೊಗೊಂಡಿದ್ರಾ, ಪಾಪ ಹಿರಿಯರು, ಅಮಾಯಕರ ಹಾಗೆ ಕಾಣುತ್ತಿದ್ದೀರಾ, ನಿಮ್ಮಂಥವ್ರಿಗೆ ಮೋಸ ಮಾಡಿದರೆ ಮತ್ತೆ ಉದ್ಧಾರ

ಆಗೋಲ್ಲ ಬಿಡಿ, ಇದು ನನ್ನದಲ್ಲ ಅಂತಂದುಕೊಂಡು ಮರೆತು ಬಿಡಿ. ಇವು ಎಲ್ಲವೂ ತರಲೆಗಳೇ. ನಿಜವಾಗ್ಲೂ ಧರ್ಮ ಕಾರ್ಯ ಮಾಡಿದ್ರೆ ನಿಮಗೂ ಅದ್ರಲ್ಲಿ ಪುಣ್ಯ ಬಂದೆ ಬರತ್ತೆ. ಅಂತ ಸಮಾಧಾನ ಹೇಳಿ ಕಳಿಸಿದ್ರು. ಪೆಚ್ಚು ಮುಖ ಹಾಕ್ಕೊಂಡು ಹೋಟೆಲ್‌ಗೆ ವಾಪಸ್ಸಾದೆವು.

ಡಿನ್ನರ್‌ಗೆ ಅಂತ ಬೇರೆ ಹೋಟೆಲ್‌ಗೆ ಹೋದ್ವಿ. ಅಲ್ಲ, ಹೋಟೆಲ್‌ಗಳಿಗೆ ಹೋದ್ವಿ. ಎಲ್ಲಿ ಹೋದ್ರೂ ಒಂದೇ ರಾಗ ಮೆನೂ ನಲ್ಲಿ! ಆಲೂ ಗೋಬಿ ಸರ್ಸೋಂಕ ಸಾಗ್, ಆಲೂ ಮಟರ್, ಮಿರ್ಚಿಕ ಸಾಲ್‌ನ್, ಅಂತ ಏನೇನೋ, ಒಂದೂ ನಾವು ತಿನ್ನೋ ತರದ್ದಲ್ಲ. ಏನಪ್ಪಾ, ಸೌತ್ ಇಂಡಿಯನ್ ಊಟ ಸಿಕ್ಕೋಲ್ವ ನಿಮ್ಮೂರಲ್ಲಿ ಅಂದಿದ್ದಕ್ಕೆ, 'ಇದೆ ಸರ್, ಈಗ ನಡೆಯೋದು,' ಅಂತಾನೆ ಅದೇನೋ ಸಿನಿಮಾ ಹಲೋ ಏನೋ ಅನ್ನೋ ಹಾಗೆ. ಇನ್ನೊಬ್ಬ ಹೋಟೆಲ್ ಯಜಮಾನ ನಮಗೆ ಚೇಂಜ ಆಗ್ಬೇಕು, ಕಾಲಕ್ಕೆ ಹೊಂದುಕೋಬೇಕು, ಹೊಸ ತಿನುಸುಗಳನ್ನ ಟ್ರೈ ಮಾಡ್ಬೇಕು ಅದೂ ಜೀರ್ಣ ಶಕ್ತಿ ಕುಗ್ಗೋ ಮುಂಚೆ' ಅಂತ ಏನೆಲ್ಲ ಬುದ್ಧಿವಾದ ಹೇಳ್ದ ಅಂತೀರಾ ಕಡೆಗೂ ಒಂದು ಹೋಟೆಲ್ ಮಾಲೀಕರು ನಮ್ಮ ಪರಿಸ್ಥಿತಿ ಅರ್ಥ ಮಾಡ್ಕೊಂಡು ನಮ್ಮನ್ನ ಟೆರೇಸ್ ಮೇಲೆ ಕರ್ಕೊಂಡು ಹೋಗಿ ಕೂರಿಸಿ ಚಿತ್ರಾನ್ನ, ಮೊಸರನ್ನ ಮಾಡಿಸಿ ಬಡಿಸಿದರು. ದುಡ್ಡು ತೊಗೊಳ್ಳಕ್ಕೂ ಇಷ್ಟ ಪಡಲಿಲ್ಲ ನಾವೇ ದುಡ್ಡು ಇಟ್ಟು ಕೃತಜ್ಞರಾಗಿ ಹೊರಗೆ ಬಂದ್ವಿ.

ಮರುದಿನವೇ ವಾಪಸ್ ಬೆಂಗಳೂರಿಗೆ ಅನಂತಪುರಾಯಣಕ್ಕೆ ಮಂಗಳ ಹಾಡಿ!

ಈಗ ಓದುಗರೇ ನಿಮಗೊಂದು ಸವಾಲು. 24 ಘಂಟೆಗಳಲ್ಲಿ ಎಷ್ಟು ಸಲ ನಮ್ಮ ಹಿರಿಯತನ ನಮಗೆ ಜ್ಞಾಪಿಸಿತು ಎಂದು ನೀವು ಬೇಗ ಹೇಳಬೇಕು! ■

---

## ಶೂಟ್ ಹಿಮ್..

'ಅವಸ್ಥೆ' ಸಿನಿಮಾದ ಚಿತ್ರೀಕರಣದ ಸಮಯ. ಚಿತ್ರೀಕರಣ ಆರಂಭದ ಸಮಯದಲ್ಲಿ ಅದರ ಲೇಖಕ ಯು ಆರ್ ಅನಂತಮೂರ್ತಿ ಅಮೆರಿಕದಲ್ಲಿದ್ದರು. 'ರೈಟರ್ ಇಲ್ಲದೆ ಸಿನಿಮಾ ಶುರು ಮಾಡುವುದೆ?' ಎಂದು ಯಾರೋ ಆಕ್ಷೇಪಣೆ ಎತ್ತಿದರು. ಆಗ ಅಲ್ಲಿದ್ದ ಪ್ರಜಾವಾಣಿ ಸಂಪಾದಕ ವೈಎನ್‌ಕೆ "ಕಾದಂಬರಿ ಆಧಾರಿತ ಸಿನಿಮಾಗಳ ಮೊದಲ ಶಾಟ್ ವಿಲ್ ಬಿ ರೈಟರ್. ಅವರನ್ನು ಮುಗಿಸಿ ನಂತರ ಸಿನಿಮಾ ಶೂಟ್ ಮಾಡಬೇಕು. ಅವರಿದ್ದರೆ 'ನಾನು ಅದನ್ನಿಟ್ಟುಕೊಂಡು ಬರೆದಿದ್ದೆ. ಇದರಲ್ಲಿ ಈ ಭಾವನೆ ಇತ್ತು..' ಅಂತ ಹೇಳ್ತಾನೆ ಇರ್ತಾನೆ. ಅದಕ್ಕೆ.. ಲೇಖಕನಿಗೆ ಗನ್‌ನಿಂದ ಶೂಟ್ ಮಾಡಿ ಕ್ಯಾಮೆರಾ ಚಾಲೂ ಮಾಡಬೇಕು" ಎಂದರು.

ಸಿನಿಮಾ ತಯಾರಾಯಿತು. ಅದನ್ನು ನೋಡಿದ ಒಬ್ಬರು 'ಅಲ್ರೀ ನಾನು 'ಅವಸ್ಥೆ' ಮೂರು ಸಲ ನೋಡಿದೆ. ಮೂರನೆ ಸಲ ನೋಡಿದ್ರೂ ಅರ್ಥವಾಗಲಿಲ್ಲ' ಎಂದು ಗೊಣಗಿದಾಗ ಒಬ್ಬರು 'ಛೆ! ಛೆ! ಎಂತಹ ದಡ್ಡರು ನೀವು. ಮೂರು ಸರ್ತೀನು ಗೊತ್ತಾಗಲಿಲ್ಲವ? ನನಗೆ ಒಂದನೇ ಸಲಕ್ಕೇ ಗೊತ್ತಾಯಿತು. ಇದು ಮೂರಲ್ಲ ನೂರು ಸರ್ತಿ ನೋಡಿದರೂ ಗೊತ್ತಾಗೊ ಸಿನಿಮಾ ಅಲ್ಲ..' ಎಂದರು.

**ಕೃಷ್ಣ ಮಾಸಡಿ, ಪ್ರಜಾವಾಣಿಯಲ್ಲಿ.**

# ಡ್ರೀಂ ದೇಖ್ತಾ ಇರೋಣವೇ?

**● ವೀಣಾ ರಂಗನಾಥ್**

ಹಲವು ವರ್ಷಗಳ ಹಿಂದೆ ನಡೆದ ಘಟನೆಯಿದು. ಆಗ, ಇಂಗ್ಲೀಷ್ ಭಾಷಾ ಕಲಿಕೆಯ ಗಾಳಿ ಪ್ರಬಲವಾಗಿ ಹರಡಿತ್ತು. ಕೂತರೆ ನಂತರೆ ಇಂಗ್ಲಿಷ್. ಕೊನೆಗೆ ಯೋಚಿಸುವುದೂ ಕೂಡ ಇಂಗ್ಲೀಷಿನಲ್ಲಿಯೇ . ಇಂತಹ ಗಾಳಿಯಲ್ಲಿ ಸಿಕ್ಕು ಹಾಕಿಕೊಂಡವರಲ್ಲಿ ಒಬ್ಬರು ನಮ್ಮ ತಂದೆಯವರು. ಬೆಂಗಳೂರಿನ ಮಜೆಸ್ಟಿಕ್‌ನ ಕಡೆ ಪ್ರತಿನಿತ್ಯವೂ ಅಲ್ಲಿನ 'ಶಾಂತಲ ಸಿಲ್ಕ್ ಹೌಸ್' ಅನ್ನು ಹಾದು ಹೋಗುತ್ತಿದ್ದರು. 'ಶಾಂತಲ ಸಿಲ್ಕ್ ಹೌಸ್' ನಾಮ ಫಲಕವನ್ನು ಇಂಗ್ಲೀಷಿನಲ್ಲಿ ಬರೆಯಲಾಗಿತ್ತು. ಇಂಗ್ಲೀಷಿನ ಫಲಕವನ್ನು ಮಾತ್ರ ಓದುತ್ತಿದ್ದ ನಮ್ಮ ತಂದೆ ಅದನ್ನು 'ಶಂತಾಲ' ಎಂದು ಓದುತ್ತಿದ್ದರು. ತಾವು ಓದುತ್ತಿರುವುದು ಸರಿಯೇ ತಪ್ಪೇ ಎಂದು ತಿಳಿದುಕೊಳ್ಳಲು ಪಕ್ಕದಲ್ಲಿಯೇ ಇದ್ದ ಕನ್ನಡದ ಫಲಕವನ್ನು ನೋಡುವ ಗೋಜಿಗೆ ಹೋಗಿದ್ದರೆ ತಾನೆ?

ಮತ್ತೊಂದು ಕಡೆ  ಇವರು ಒಂದು ಚಿತ್ರ ಮಂದಿರದಲ್ಲಿ ಅಂಟಿಸಿದ್ದ ಅಂದಿನ ಚಿತ್ರದ ಭಿತ್ತಿ ಪತ್ರವನ್ನು ನೋಡಿದರು. ಅದನ್ನು ಇವರು ಇಂಗ್ಲೀಷ್ ಶೈಲಿಯಲ್ಲಿ 'ಬೆಸ್ಯೂಜ್' ಎಂದು ಓದಿದರು.  ಈ ಪದದ ಉಚ್ಚಾರಣೆ 'ಬೆಸುಗೆ' ಎಂದು ಗೊತ್ತಾಗಿದ್ದಿದ್ದರೆ ಬಹುಶ: ಅವರು ಈ ಚಿತ್ರವನ್ನು ನೋಡಿಕೊಂಡೇ ಬರುತ್ತಿದ್ದರೇನೋ. ಇಂದು ಯಾವುದೇ ಒಂದು ಭಾಷೆಯನ್ನು ತೆಗೆದುಕೊಂಡರೂ ಅದು ದೈನಂದಿನ ಬಳಕೆಯಿಂದ ಅನ್ಯ ಭಾಷಾ ಪದಗಳಿಂದ ಮಿಶ್ರಿತವಾಗಿ ಕಂಡುಬರುವುದು. ಇದು ಈ ಶತಮಾನದ ಮಹಿಮೆ ಎಂದು ಹೇಳಬಹುದೇ?

ನಮ್ಮ ಅಜ್ಜಿಯ ತಮ್ಮ ಒಮ್ಮೆ ಮೈಸೂರಿನಲ್ಲಿದ್ದ ನೆಂಟರ ಮನೆಯಲ್ಲಿ ಇಳಿದುಕೊಂಡಿದ್ದರು. ಆ ಮನೆಯಲ್ಲಿಯೇ ಇದ್ದ ಒಬ್ಬ ಹುಡುಗ ಏನೋ ಚೇಷ್ಟೆ ಮಾಡಿ ಇವರ ಕೈಯಲ್ಲಿ  ಯೂ, ಹೋಪ್‌ಲೆಸ್ ಫೆಲೊ ಎಂಬ ಬೈಗಳ ತಿಂದಿದ್ದ. ಆ ಬಾಲಕ ಚುರುಕಾಗಿದ್ದರಿಂದ ಈ ಹೊಸ ಇಂಗ್ಲೀಷ್ ಪದವನ್ನು ಜ್ಞಾಪಕದಲ್ಲಿಟ್ಟುಕೊಂಡ. ಕೆಲವು ತಿಂಗಳು ಕಳೆದ ಮೇಲೆ ಈ ಹಿರಿಯರು ಮೈಸೂರಿಗೆ ಮತ್ತೊಮ್ಮೆ ಬರಬೇಕಾಯಿತು. ಇವರು ಬರುತ್ತಿದ್ದುದನ್ನು ನೋಡಿದ ಆ ಬಾಲಕನು ತನ್ನ ತಾಯಿಗೆ ಈ ಸುದ್ದಿ ತಿಳಿಸಬೇಕೆಂದು ಮನೆಗೆ ಬಂದ. ಹಿರಿಯರ ಹೆಸರು ಏನೆಂದು ಜ್ಞಾಪಕವಿಲ್ಲದೆ, 'ಅಮ್ಮ, ಹೋಪ್‌ಲೆಸ್ ಫೆಲೊ ಅಜ್ಜ' ಬರುತ್ತಿದ್ದಾರೆ!   ಎಂದ.

ಈ ರೀತಿ, ನಾವೇ ಕಲ್ಪಿಸಿಕೊಂಡ ಅಥವ ಸೃಷ್ಟಿಸಿಕೊಂಡ ಭಾಷೆಯು ನಮಗೇ ತಿರುಗುಬಾಣವಾಗಿ ಬಂದು ಬಿಡುತ್ತದೆ. ಇದು ಒಂದು ರೀತಿಯದ್ದಾದರೆ ಇನ್ನೊಂದು ರೀತಿಯಲ್ಲಿ ಮೋಜನ್ನು ಉಂಟುಮಾಡುತ್ತದೆ.

ನಾವು ಬಳಸುವ ಭಾಷೆಯ ಮೇಲೆ ಪರಿಸರದ ಪ್ರಭಾವ ಎಷ್ಟರ ಮಟ್ಟಿಗೆ ಬೀಳುತ್ತದೆಯೆಂಬುದಕ್ಕೆ ಈ ಒಂದು ಪ್ರಸಂಗವೇ ಸರಿ. ನಮ್ಮನೆ ಆವರಣದಲ್ಲಿ ತೆಲುಗು, ಮಲೆಯಾಳ, ಸಿಂಧಿ ಹಾಗೂ ಕನ್ನಡ ಮಾತನಾಡುವ ನಾವುಗಳು

ಸೇರಿದಂತೆ, ಒಟ್ಟು ನಾಲ್ಕು ಸಂಸಾರಗಳು. ಪಕ್ಕದ ಮನೆಯವರು ಹಿಂದಿ ಮಾತನಾಡುವವರು. ಅವರ ಮನೆಯಲ್ಲಿದ್ದ ಪುಟ್ಟ ಹುಡುಗಿ ಅನುಪಮಾ ನಮ್ಮಲ್ಲಿಗೇ ಬಂದು ಆಟವಾಡಿಕೊಂಡು ಇರುತ್ತಿದ್ದಳು. ಕೆಲವೊಮ್ಮೆ, ಊಟ, ತಿಂಡಿ, ನಿದ್ದೆ ಎಲ್ಲ ನಮ್ಮ ಮನೆಯಲ್ಲಿಯೇ ಆಗುತ್ತಿತ್ತು. ಶಾಲೆಯಲ್ಲಿ ಇಂಗ್ಲೀಷ್, ಮಾತೃ ಭಾಷೆ ಹಿಂದಿ ಹಾಗೂ ನಮ್ಮ ಜೊತೆ ಕನ್ನಡ. ಒಮ್ಮೆ, ನಾನು ಅವಳ ಕೂದಲನ್ನು ಬಾಚುತ್ತಿದ್ದೆ. ಕೂದಲನ್ನು ಗಟ್ಟಿಯಾಗಿ ಹಿಡಿದಿದ್ದರಿಂದ ಅವಳಿಗೆ ನೋವಾಯಿತು. ತಕ್ಷಣ ಅವಳು ಕಿರುಚಿ, ನನ್ನ ಜುಟ್ಟನ್ನು ಟೈಟ್ ಆಗಿ ಬಾಂದ್ ಬೇಡ ಎನ್ನಬೇಕೆ?

ತೆಲುಗು ಮಾತನಾಡುವವರ ಮನೆಯಲ್ಲಿ ನಾವೆಲ್ಲರೂ ಸೇರಿ ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದ 'ಚಿತ್ರಹಾರ್' ನೋಡುತ್ತಿದ್ದೆವು. ಒಂದು ದೃಶ್ಯದಲ್ಲಿ, ನಾಯಕನು ಕನಸು ಕಾಣುತ್ತಿದ್ದನು. ಕೂಡಲೇ, ಅದನ್ನು ಆ ಮನೆಯಾಕೆ ವಿವರಿಸುತ್ತಾ, ಓಹೋ, ಅವನು ಡ್ರೀಂ ದೇಖ್ತಾ ಇದ್ದಾನೆ, ಅಲ್ಲವೇ? ಎಂದರು. ಈ ವಾಕ್ಯದಲ್ಲಿ ಮೂರು ಭಾಷೆಗಳ ಏಕೀಕರಣವಾಗಿತ್ತು.

ಕನ್ನಡ ಭಾಷೆಯನ್ನು ರಾಷ್ಟ್ರ ಮಟ್ಟದಲ್ಲಿ ಏಕೀಕರಣ ಮಾಡೋಣವೋ ಅಥವಾ ಅಂತರರಾಷ್ಟ್ರೀಯ ಮಟ್ಟದಲ್ಲಿ ಏಕೀಕರಣ ಮಾಡೋಣವೋ ಎಂಬುದರ ಬಗ್ಗೆ ಡ್ರೀಂ ದೇಖ್ತಾ ಇರೋಣವೇ ?

■

---

## ಅಪರಂಜಿ ಓದುಗರಿಗೆ ಸವಾಲು!!

# ದಿನ ಪೂರ್ತಿ ಹಗಲೇ ಇದ್ದಿದ್ದರೆ ಬದುಕು ಹೇಗಿರುತ್ತಿತ್ತು?

ಹೌದು ಹೇಗಿರಬಹುದು? ಹೇಗಿರಬಹುದಿತ್ತು?

ಈಗ ನಿಮ್ಮ ತಲೆ ಓಡಿಸಿ ಇದರ ಬಗ್ಗೆ ಒಂದು ಸಣ್ಣ ಬರಹ ಕಳಿಸಿಕೊಡಿ. ಅದು ಕಥೆ, ವಿಡಂಬನೆ, ಹರಟೆ, ಕವನ, ನಾಟಕ, ಪ್ರಬಂಧ, ಚುಟುಕ.. ಹೀಗೆ ಯಾವುದೇ ಪ್ರಕಾರದಲ್ಲಿರಬಹುದು.

ಹೇಳಬೇಕಿರುವುದನ್ನು ಚಿಕ್ಕದಾಗಿ, ಚೊಕ್ಕದಾಗಿ ಬರೆದು ಕಳಿಸಿ.

ಸ್ವಾರಸ್ಯವಾಗಿರುವುದನ್ನು ಅಪರಂಜಿಯಲ್ಲಿ ಪ್ರಕಟಿಸುತ್ತೇವೆ. ನಿಮ್ಮ ಬರಹಗಳು ನುಡಿ ತಂತ್ರಾಂಶದಲ್ಲಿ ಇದ್ದರೆ ಅನುಕೂಲ .

**ಕೊನೆಯ ದಿನ: ಆಗಸ್ಟ್ 20, 2019**.

# ಔಟ್‌ಸೋರ್ಸ್

● ನಂನಾಗ್ರಾಜ್

ಅಜ್ಜಿಯ ಕಾಲದಲ್ಲಿ ಔಟ್‌ಸೋರ್ಸ್ ಪರಿಕಲ್ಪನೆಯೇ ಇರಲಿಲ್ಲ. ಪ್ರತಿಯೊಂದು ಚಟುವಟಿಕೆಯನ್ನು ಮನೆಮಂದಿಯೇ ನಿಭಾಯಿಸುತ್ತಿದ್ದರು. ಅಡುಗೆ, ಮನೆ ಗುಡಿಸಿ ಸಾರಿಸುವುದು, ಪಾತ್ರೆಗಳನ್ನು ತೊಳೆಯುವುದು, ಬಟ್ಟೆಗಳನ್ನು ಒಗೆಯುವುದು..... ಅಷ್ಟೇ ಏಕೆ, ವರುಷಕ್ಕೆ ಬೇಕಾಗುವಷ್ಟು ಹುಳಿಪುಡಿ, ಸಾರಿನಪುಡಿ, ಖಾರದಪುಡಿ, ಚಟ್ನಿಪುಡಿ, ಹಪ್ಪಳ, ಸಂಡಿಗೆ, ಉಪ್ಪಿನ ಕಾಯಿಗಳು ಕೂಡ.

ಕಾಲಕ್ರಮೇಣ ಜೀವನ ಶೈಲಿ ಬದಲಾದ ಹಾಗೆ ಹಲವಾರು ಕೆಲಸಗಳು ಔಟ್‌ಸೋರ್ಸ್ ಆಗಲು ಪ್ರಾರಂಭವಾದವು.

**ಔಟ್‌ಸೋರ್ಸ್ ಮನೆಕೆಲಸ**

ಮನೆ ಗುಡಿಸಿ ಸಾರಿಸುವುದು, ಪಾತ್ರೆ, ಲೋಟ, ತಟ್ಟೆಗಳನ್ನು ತೊಳೆಯುವುದು, ಬಟ್ಟೆಗಳನ್ನು ಒಗೆಯುವುದು, ಇವೆಲ್ಲವನ್ನೂ ನಿಭಾಯಿಸುವುದಕ್ಕೆ ಮನೆಕೆಲಸದಾಕೆಯ ನೇಮಕ.

**ಔಟ್‌ಸೋರ್ಸ್ ಸುತ್ತು ಕೆಲಸ**

ನಂತರ ಔಟ್‌ಸೋರ್ಸ್ ಆಗಿದ್ದು ಪುಡಿಗಳು, ಹಪ್ಪಳ, ಸಂಡಿಗೆ, ಉಪ್ಪಿನ ಕಾಯಿಗಳು. ಜೀವನೋಪಾಯಕ್ಕೆ ಮನೆ ಮನೆಗೂ ಹೋಗಿ ಸ್ಥಳದಲ್ಲೇ ಇವನ್ನೆಲ್ಲ ಮಾಡಿಕೊಡುವ ಹೆಂಗಸರಿಗೆ ಈ ಕೆಲಸಗಳನ್ನು ವಹಿಸಲಾಗುತ್ತಿತ್ತು.

**ಔಟ್‌ಸೋರ್ಸ್ ಫುಡ್**

ಉದ್ಯೋಗದಲ್ಲಿರುವ ದಂಪತಿಗಳಿಗೆ ಆಫೀಸಿಗೆ ಹೋಗಿ ಬರುವುದಕ್ಕೆ ಸಾಕಷ್ಟು ಸಮಯ ಪೋಲಾಗುತ್ತದೆ. ಮೇಲಾಗಿ ಆಫೀಸಿನ ಒತ್ತಡ, ಸಮಯದ ಅಭಾವ. ಸಾಧ್ಯವಾದಷ್ಟು ದಿನಗಳು ಮುಕ್ಕರಿದು ಏನನ್ನಾದರೂ ಬೇಯಿಸುವುದು, ಮಿಕ್ಕಿದ ದಿನಗಳು ಹೊರಗಡೆ ತಿನ್ನುವುದು ಅಥವಾ ಆನ್‌ಲೈನ್‌ಲಿ ಆರ್ಡರ್ ಮಾಡುವುದು, ಆರ್ಡರ್ ಮಾಡಿ ಟೇಬಲ್ ಸೆಟ್ ಮಾಡುವಷ್ಟರಲ್ಲಿ ಫುಡ್ ಹಾಜರ್!

**ಔಟ್‌ಸೋರ್ಸ್ ಬೇಬಿ ಕೇರ್**

ಸನ್ನಿವೇಶ (1) ಉದ್ಯೋಗದಲ್ಲಿರುವ ಮಧ್ಯಮ ವರ್ಗದ ದಂಪತಿಗಳು ಹಾಗೂ ಎಳೆಯ ಮಗು. ಮಗುವಿನ ಆರೈಕೆ, ಉಸ್ತುವಾರಿಗೆ ಡೇ ಕೇರ್ ಮೊರೆ ಹೋಗುವುದು ಅನಿವಾರ್ಯ. ತಂದೆ, ತಾಯಿಗಳಿಗೆ ಕರುಳು ಕಿತ್ತುಬರುತ್ತದೆ ಪಾಪ.

ಸನ್ನಿವೇಶ (2) – ಶ್ರೀಮಂತ ಕುಟುಂಬ, ಆಧುನಿಕತೆ, ಕ್ಲಬ್ಸ್, ಪಾರ್ಟಿ, ಸೋಶಿಯಲೈಸಿಂಗ್ ಬಿಟ್ಟು ಮನೆಯಲ್ಲಿದ್ದು ಮಗುವನ್ನು ನೋಡಿಕೊಳ್ಳುವುದೇ? ಛೇ, ಛೇ ನೋ ವೇ. ಇಲ್ಲಿ ಕಿತ್ತು ಬರುವುದಕ್ಕೆ ಕರುಳೇ ಇಲ್ಲ

**ಔಟ್‌ಸೋರ್ಸ್ ಅಟೆಂಡೆನ್ಸ್**

ಕೆಲವು ಸಬ್ಜೆಕ್ಟ್‌ಗಳು ಬೋರ್, ಕೆಲವು ಶಿಕ್ಷಕರು ಬೋರ್, ಕೆಲವೆಡೆ ಎರಡೂ ಸಹ! ಕಾಲೇಜ್ ಅಂದರೆ ಕ್ಲಾಸ್ ರೂಂ ಮಾತ್ರ ಅಲ್ಲ ಅಲ್ಲವೇ? ಬೇರೆ ಎಷ್ಟೊಂದು ಚಟುವಟಿಕೆಗಳು(!) ಆಲ್‌ರೌಂಡ್ ಡೆವೆಲಪ್‌ಮೆಂಟ್, ಪರ್ಸನಾಲಿಟಿ ಡೆವೆಲಪ್‌ಮೆಂಟ್ ಕೂಡ ಮುಖ್ಯವಲ್ಲವೇ? ಅವಕ್ಕೂ ಬಿಡುವು ಮಾಡಿಕೊಳ್ಳಬೇಕಲ್ಲ. ಆದರೆ ಹಾಜರಿ ಕೂಡ ಮುಖ್ಯ. ಪರಿಹಾರ? 'ಪ್ರಾಕ್ಸಿ' ಅಂದರೆ ನಮ್ಮ ಹಾಜರಿಯನ್ನು ಔಟ್‌ಸೋರ್ಸ್ ಮಾಡುವುದು ಗೆಳೆಯರು ಇರುವುದಾದರೂ ಏಕೆ? ಟರ್ನ್ ಬೈ ಟರ್ನ್ ಪರಸ್ಪರ ಸಹಾಯ!

**ಔಟ್‌ಸೋರ್ಸ್ ಬುದ್ಧಿವಂತಿಕೆ**

ಪಿ.ಯು.ಸಿ / ಪ್ರವೇಶ ಪರೀಕ್ಷೆಗಳಲ್ಲಿ ಒಳ್ಳೆಯ ಅಂಕಗಳು ಬಂದರೆ ಮಾತ್ರ ಪ್ರಖ್ಯಾತ ಪ್ರೊಫೆಶನಲ್ ಕಾಲೇಜ್‌ಗಳಲ್ಲಿ ಪ್ರವೇಶ ಲಭ್ಯ. ಅಷ್ಟು ತಲೆ ಇಲ್ಲವಲ್ಲ ಎಂದು ತಲೆ ಮೇಲೆ ಕೈ ಇಟ್ಟು ಕೂತರೆ ಕಾರ್ಯಸಿದ್ಧಿಯಾಗುತ್ತದೆಯೇ? ಹೀಗಾಗಿ ಬುದ್ಧಿವಂತಿಕೆಯನ್ನು ಔಟ್‌ಸೋರ್ಸ್ ಮಾಡುವುದು. 'ಇಂಪರ್ಸೊನೇಶನ್'!

**ಔಟ್‌ಸೋರ್ಸ್ ಡಿಪಾರ್ಟ್‌ಮೆಂಟ್ಸ್**

ಬಹುತೇಕ ಕಾರ್ಪೊರೇಟ್‌ಗಳು ತಮ್ಮ ಸಂಸ್ಥೆಯ ಹಲವಾರು ವಿಭಾಗಗಳನ್ನು ಔಟ್‌ಸೋರ್ಸ್ ಮಾಡುತ್ತಾರೆ. ಉದಾ: ಸೆಕ್ಯೂರಿಟಿ, ಹೌಸ್ ಕೀಪಿಂಗ್, ಕ್ಯಾಂಟೀನ್, ಲೀಗಲ್, ಅಕೌಂಟ್ಸ್ ಕೂಡ! ಅಕೌಂಟ್ಸ್ ವಿಭಾಗವನ್ನು ಕಂಪನಿಯ ಆಡಿಟರ್ಸ್‌ಗಳಿಗೆ ಔಟ್‌ಸೋರ್ಸ್ ಮಾಡಿದರೆ ಆಡಿಟ್ ಕ್ವೈರಿಗಳ ಕಿರಿಕಿರಿಯೂ ಇರುವುದಿಲ್ಲ! ಇದಲ್ಲದೇ ಕೆಲವೊಂದು ಪ್ರೋಸಸ್‌ಗಳನ್ನು ಕಾಂಟ್ರ್ಯಾಕ್ಟ್ ನೌಕರರ ಮೂಲಕ ನಡೆಸಲಾಗುತ್ತೆ ಔಟ್‌ಸೋರ್ಸ್ ಲೇಬರ್.

**ಔಟ್‌ಸೋರ್ಸ್ ಕ್ರೌಡ್**

ರಾಜಕೀಯ ಪಕ್ಷಗಳು ಬೃಹತ್ ರ್‍ಯಾಲಿಯೊಂದನ್ನು ಯೋಜಿಸಿರುವಾಗ ಪಕ್ಷದ ಸದಸ್ಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುವುದು ಅನುಮಾನಾಸ್ಪದ. ರ್‍ಯಾಲಿಯ ಜಯಭೇರಿಗೆ ಬೃಹತ್ ಸಂಖ್ಯೆ ಮುಖ್ಯವಾಗಿರುವುದರ ಕಾರಣ ಜನರನ್ನು ಜಮಾಯಿಸುವ ವೃತ್ತಿಯಲ್ಲಿರುವ ಕಾಂಟ್ರ್ಯಾಕ್ಟರ್‌ಗಳಿಗೆ ಜವಾಬ್ದಾರಿಯನ್ನು ವಹಿಸಲಾಗುತ್ತೆ. ಔಟ್‌ಸೋರ್ಸ್ ಕ್ರೌಡ್! ಲಾರಿಗಳಲ್ಲಿ ಟ್ರ್ಯಾಕ್ಟರ್‌ಗಳಲ್ಲಿ ತುಂಬಿಕೊಂಡು ಬರಲಾಗುತ್ತೆ ಅವರಿಗೆಲ್ಲ ಊಟ ತಿಂಡಿ, ಮೇಲಷ್ಟು ಹಣ. ಆಯಿತಲ್ಲ ಬೃಹತ್ ರ್‍ಯಾಲಿ! ಆ ಗುಂಪಿನ 95 ಪ್ರತಿಶತ ಜನರಿಗೆ ರ್‍ಯಾಲಿಯ ಬಗ್ಗೆ ಏನೊಂದು ಅರಿವೂ ಇರುವುದಿಲ್ಲ!

**ಔಟ್‌ಸೋರ್ಸ್ ಪ್ರೆಗ್ನೆಂಸಿ (ಸರೋಗೇಟ್ ಮದರ್ಸ್)**

ಮದುವೆಯಾಗಿ ನಾಲ್ಕು ವರುಷಗಳು ಕಳೆದಿವೆ ತಾಯಿಯಾಗುವ ಹಂಬಲ ಕಾಡಿದೆ. ಆದರೆ ಹೊರುವ, ಹೆರುವ ಪ್ರಕ್ರಿಯೆಯ ಝಂಝಾಟ ಬಿಲ್‌ಕುಲ್ ಬೇಕಿಲ್ಲ. ಪರಿಹಾರ? ಈ ಭಾಗವನ್ನು ಔಟ್‌ಸೋರ್ಸ್ ಮಾಡಿಬಿಡುವುದು! ಹೆರಿಗೆ ನಿಮಗೆ, ಮಗು ನಮಗೆ!

**ಔಟ್‌ಸೋರ್ಸ್ ಅಳು**

ಸಾವಿನ ಮನೆ, ಮನೆಮಂದಿಯ ರೋದನೆ ಎಲ್ಲೆ ಮೀರಿದೆ. 'ಸಾಲುತಿಲ್ಲವೇ, ಸಾಲುತಿಲ್ಲವೇ' ಎಂಬ ಅನುಮಾನ ಈ ತರಹದ ಸಾವಿನ ಸಂದರ್ಭಗಳಿಗಾಗಿ ಕರುಳು ಕಿತ್ತು ಬರುವ ಹಾಗೆ ಬಾಯಿ, ಎದೆ ಬಡಿದುಕೊಂಡು ಅಳುವ ಪ್ರೋಫೆಶನಲ್ ಅಳುಗಾರರು ಲಭ್ಯ.

**ಔಟ್‌ಸೋರ್ಸ್ ತಂದೆ ತಾಯಿಗಳ ಯೋಗಕ್ಷೇಮ**

ದಂಪತಿಗಳು ದೊಡ್ಡ ಹುದ್ದೆಗಳಲ್ಲಿದ್ದಾರೆ. ಜೊತೆಯಲ್ಲಿ ವಯಸ್ಸಾದ ತಂದೆ ತಾಯಿಗಳು, ಅನಾರೋಗ್ಯದ ಸಮಸ್ಯೆ ಕೂಡ. ಸದಾ ಹತ್ತಿರವಿದ್ದು ನೋಡಿಕೊಳ್ಳಬೇಕಾದ ಪರಿಸ್ಥಿತಿ. ಕೆಲಸದ ಒತ್ತಡ, ಸಮಯದ ಅಭಾವ. ಪರಿಹಾರ? ಅವರನ್ನು ಹತ್ತಿರದಿಂದ ನೋಡಿಕೊಳ್ಳುವ ಜವಾಬ್ದಾರಿ ಔಟ್‌ಸೋರ್ಸ್ ಆಗುತ್ತೆ, ನರ್ಸ್ ನೇಮಕಗೊಂಡು. ಕೆಲವು ಕುಟುಂಬಗಳು ಇದನ್ನು ಅನಿವಾರ್ಯತೆ ಹಾಗೂ ಮನಸ್ಸಿಲ್ಲದ ಮನಸ್ಸಿನಿಂದ ಮಾಡಿದರೆ ಮತ್ತೆ ಕೆಲವು ಅಂತಃಕರಣವಿಲ್ಲದ ಕುಟುಂಬಗಳು ವಯಸ್ಸಾದ ತಂದೆ, ತಾಯಿಯನ್ನು ವೃದ್ಧಾಶ್ರಮಕ್ಕೆ ವರ್ಗಾಯಿಸಿ ನಿರಾಳರಾಗುತ್ತಾರೆ. ಎಂತಹ ವಿಷಾದ.

**ಔಟ್‌ಸೋರ್ಸ್ ಕಲ್ಲೆಸೆತ**

ಪ್ರತಿಭಟನೆ ಹಿಂಸಾಚಾರದೊಡನೆ ತೀವ್ರವಾಗಿರಬೇಕೇ? ಕಲ್ಲಲ್ಲಿ ಶಿಲ್ಪಗಳನ್ನು ಮಾತ್ರ ಕೆತ್ತಬಹುದು ಎಂದು ನಂಬಿದ್ದೆವು ನಾವೆಲ್ಲ. ಹಾಗಲ್ಲ, ಮುಖ ಹಾಗೂ ಮೈಗಳನ್ನೂ ಕೆತ್ತಬಹುದು ಎಂದು ಪ್ರೊಫೆಶನಲ್ ಕಲ್ಲೆಸೆತಗಾರರು ಸಾಬೀತುಪಡಿಸುತ್ತಿದ್ದಾರೆ.

ಸಾಕೇ? ಔಟ್ ಅಂಡ್ ಔಟ್, ಔಟ್‌ಸೋರ್ಸ್! ■



# ಜಿರಳೆ ರಗಳೆ

● **ಅನುಪಮಾ**

"ಅಮ್ಮಾ, ಅಮ್ಮಾ ... ಬನ್ನಿ.. ದೊಡ್ಡ ಬವ್ವಾ ..ಬನ್ನಿ .. ಬವ್ವಿ ... " ಎಂದು ನನ್ನ ಮಗ ಪ್ರಣವ್ ಹೊರಗೆ ವರಾಂಡದಿಂದ ಕೂಗಿಕೊಳ್ತಾ ಇದ್ದ. ಇನ್ನೂ ಮೂರು ವರ್ಷ ತುಂಬಿರದ ಅವನ ಭಾಷೆಯಲ್ಲಿ "ಬವ್ವಾ " ಎಂದರೆ ಹುಳ! ಅವನೇನೋ ಜೇಡ ನೋಡಿರಬೇಕು ಎಂದುಕೊಂಡು ನಾನು ಧಾವಿಸಿ ಪ್ರಣವ್ ಇದ್ದಲ್ಲಿಗೆ ಬಂದೆ. ನನ್ನ ಪುಟ್ಟ ಕಂದಮ್ಮ ಕುರ್ಚಿ ಮೇಲೆ ಹತ್ತಿ ಕುಳಿತು ಆ ಬವ್ವಾವನ್ನೇ ನೋಡ್ತಾ ಇದ್ದ. ನಾನು ಬಂದ ರಭಸಕ್ಕೆ ಬವ್ವಾವಿಗೂ ನಾನು ಬಂದಿದ್ದರ ಸುಳಿವು ದೊರೆತು ನನ್ನೆಡೆಗೆ ತಿರುಗಿತ್ತು. ನೋಡ್ತೇನೆ, ಅದು ಜೊಂಡಿಗ್ಯಾ ಅಲಿಯಾಸ್ ಜಿರಳೆ! ನನ್ನ ಹಳೆಯ ಶತ್ರು (ಬಹುಪಾಲು ಜನರಿಗೆ ಅದು ಶತ್ರುವೇ ) ನನ್ನನ್ನೇ ನೋಡುತ್ತಾ ಮೀಸೆಯನ್ನು ಒಂದು ಮೇಲೆ ಒಂದು ಕೆಳಗೆ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತ "ನೀನೋ ನಾನೋ ? ನೋಡಿಯೇ ಬಿಡೋಣ" ಎನ್ನುವಂತಿತ್ತು. ನನ್ನ ಮಗ ಸಾಮಾನ್ಯವಾಗಿ ಬವ್ವಾ ಪ್ರೇಮಿಯಾಗಿದ್ದರೂ (ನನ್ನಿಂದ ಬಂದ ಗುಣ ಎಂದು ಹೆಮ್ಮೆಯಿಂದ ಹೇಳಿಕೊಳ್ಳಲು ಇಚ್ಛಿಸುತ್ತೇನೆ) ಕೂಡ ಜಿರಲೆಯ ಗಾತ್ರ ಹಾಗು ಅದರ ವೇಗವನ್ನು ನೋಡಿ ಹೆದರಿ ಕುರ್ಚಿಯೇರಿ ಕುಳಿತಿದ್ದ. ಇನ್ನು ಅದನ್ನು ಹಾಗೇ ಬಿಟ್ಟರೆ ಮನೆಯೊಳಗೇ ನುಗ್ಗಿ ವಂಶಾಭಿವೃದ್ಧಿ ಮಾಡುತ್ತೆ, ಹಾಗಂತ ಅದನ್ನು ಕೊಲ್ಲಲು ಹೋದರೆ ನನ್ನ ಮಗ ಅದನ್ನೇ ಕಲಿತು ಬಿಡುತ್ತಾನೆ. ಇನ್ನೇನು ಮಾಡೋದು ಅಂತ ವಿಚಾರ ಮಾಡುತ್ತಿರುವಾಗಲೇ ಅದಕ್ಕೇನ್ ತಿಳಿತೋ ಏನೋ ಸರ್ರನೆ ಯುದ್ಧದಿಂದ ಪಲಾಯನ ಮಾಡುವಂತೆ ಓಡಿ ಹೋಗಿ ಒಂದು ಗೋಡೆಯ ತೂತಿನೊಳಗೆ ನುಸುಳಿಕೊಂಡಿತು. ಅಲ್ಲದೇ ನನ್ನ ಮಗ, ಸುಮಾರು ಗಂಟೆಗಳು ಕಾದರೂ ಹೊರಗೆ ಬರಲೇ ಇಲ್ಲ. ಅಥವಾ ಹೊರಗೆ ಬಂದು ಆಗಲೇ ಎಲ್ಲೋ ಬೇರೆ ಮನೆ ಸೇರಿಕೊಂಡಿತೋ ಏನೋ. ಏಕೆಂದರೆ ಇದರ ವೇಗ ಎಷ್ಟಿರುತ್ತೆಂದರೆ ನಾವು ಆಕಡೆ ಹೋಗಿ ಈಕಡೆ ಬರೋದ್ರೊಳಗೆ ಮಾಯವಾಗಿ ಬಿಟ್ಟಿರುತ್ತೆ. ಇದು ಗಂಟೆಗೆ ಮೂರು ಮೈಲಿ ವೇಗ ಓಡುತ್ತೆ. ಇನ್ನೂ ಸ್ವಲ್ಪ ವರ್ಷ ಕಳೆದು ವಿಕಾಸನವಾದರೆ, ಪ್ರಖ್ಯಾತ ಒಲಿಂಪಿಕ್ ಓಟಗಾರ ಉಸೇನ್ ಬೋಲ್ಟ್ ನ್ನು ಹಿಂದಿಕ್ಕುತ್ತೋ ಏನೋ? ಈ ವೇಗದಿಂದಲೇ ಇದನ್ನು ಕಾಣದಿದ್ದರೂ ಓಡಾಡುವ ಶಬ್ದ ಮಾತ್ರ ಕೇಳುತ್ತಿರುತ್ತೆ, ಇದು ಎಂಥವರನ್ನೂ ನಿದ್ದೆಗೆಡಿಸುವಂತದ್ದು. ಈಗೋ ಆಗೋ ಇನ್ನೇನು ಹೊರಗೆ ಬಂದೇ ಬಿಡುತ್ತೆ ಎಂದು ಉಸಿರು ಬಿಗಿಹಿಡಿದು, ಕಸಬರಿಗೆ ಹಿಡಿದುಕೊಂಡು ನಿಂತಿರುವ ನನಗೆ ನಿರಾಶೆಯೇ. ಒಂದೊಂದು ಸಲ ಕಸಬರಿಗೆಯಲ್ಲೇ ಅವಿತುಕೊಂಡಿದೆ ಏನೋ ಎಂದುಕೊಂಡು, ಒನಕೆ ಓಬವ್ವನ ಭಂಗಿಯಿಂದ ಹಠಾತ್ತನೆ ಭಯಗೊಂಡ ಬೆಕ್ಕಿನ ಮರಿಯಂತೆ, ಕಸಬರಿಗೆಯನ್ನು ಕೆಳಕ್ಕೆ ಒಗೆದು ಸ್ವಲ್ಪ ದೂರ ನಿಂತು ನೋಡಿದ್ದೂ ಇದೆ. ಆದರೆ ಏನು ಮಾಡಿದರೂ ಇದನ್ನು ಸಂಪೂರ್ಣವಾಗಿ ಮನೆಯಿಂದ ಹೊರ ಹಾಕಲು ನಾನು ವಿಫಲವಾಗಿದ್ದೇನೆ ಎಂದು ಒಪ್ಪಿಕೊಳ್ಳಲೇಬೇಕು.

ಇದಕ್ಕೆ ಕಾರಣ ನನ್ನ ದುರ್ಬಲತೆ ಎಂದು ತಿಳಿಯಬೇಡಿ. ಬದಲಾಗಿ

ಜಿರಲೆಗಳಿಗಿರುವ ಎಲ್ಲಕ್ಕೂ ಹೊಂದಿಕೊಂಡು ಹೋಗುವ ಗುಣ. ಹೌದು ಇದು ಅತೀ ತಂಪಾದ ವಾತಾವರಣ ಆರ್ಕ್ಟಿಕ್ ನಿಂದ ಅತೀ ಉಷ್ಣಾಂಶದ ವಾತಾವರಣಕ್ಕೂ ಒಗ್ಗಿಕೊಳ್ಳುತ್ತದೆ. ಅದಕ್ಕೇ ಇದು ಭೂಮಿಯ ಅತ್ಯಂತ ಪುರಾತನ ಜೀವಿಗಳಲ್ಲೊಂದಾಗಿದೆ. ಪರಿಣಾಮವೇ, ನೀವು ಜಿರಲೆಗಳನ್ನು ಎಲ್ಲೆಂದರಲ್ಲಿ ನೋಡುತ್ತೀರಿ. ಅಡುಗೆಮನೆ, ಬಾತ್ ರೂಮ್ ನಿಂದ ಶುರುವಾಗಿ ಎಸಿ ಇರುವ ವಿಆರ್ಎಲ್ ಬಸ್‌ವರೆಗೂ! ಎಷ್ಟು ಕೊಲ್ಲಲು ಪ್ರಯತ್ನ ಪಟ್ಟರೂ, ಪರಶಿವನಿಂದ ವರ ಪಡೆದು ಜೀವಂತವಾಗಿ ಬರುತ್ತೋ ಏನೋ ಎನ್ನುವಂತೆ ಜಿರಲೆಯ ಸಂಖ್ಯೆ. ಆದರೆ ನಾನು ಅಮೆರಿಕದಲ್ಲಿದ್ದಾಗ ಮಾತ್ರ ಇದನ್ನು ತುಂಬಾ ಮಿಸ್ ಮಾಡ್ಕೊಂಡೆ! (ಮಿಸ್ ಮಾಡ್ಕೊಳ್ಳುವುದಕ್ಕಿಂತಲೂ ಹೆಚ್ಚಾಗಿ, ಜಿರಳೆ ತಾಪತ್ರೆ ತಪ್ಪಿತೆಂದು ಹಾಯಾಗಿದ್ದೇನೋ? ಅಥವಾ ವಯ್ಸ್ ವೆರ್ಸಾ ಏನೋ ಗೊತ್ತಿಲ್ಲ?!) ಅಲ್ಲಿನ ನೆಲದ ಮೇಲೆ ಹೆಚ್ಚಾಗಿ ಕಾರ್ಪೆಟ್‌ಗಳೇ ಮಲಗಿಕೊಂಡಿರುತ್ತಿದ್ದರಿಂದ ಜಿರಳೆ ಓಡಾಡಿದರೂ ಕೇಳಿಸುತ್ತಿರಲಿಲ್ಲ. ಅಲ್ಲದೇ ಎಲ್ಲವೂ ಮರದ ಪೀಠೋಪಕರಣಗಳಿಂದ ತುಂಬಿ ಹೋಗುತ್ತಿದ್ದರಿಂದ ತುಂಬಾ ಜಿರಲೆಗಳಿರುತ್ತವೆ ಎಂದುಕೊಂಡಿದ್ದ ನಾನು, ಅಲ್ಲಿ ಯಾವ ಅಮೆರಿಕನ್ ಜಿರಳೆಯನ್ನೂ ಕಾಣದೆ ತಬ್ಬಿಬ್ಬಾಗಿದ್ದೆ! ಎಷ್ಟೋ ಸಲ ರಾತ್ರಿ ಮನೆಗೆ ಫೋನ್ ಮಾಡಲು ಕಾದು ಕುಳಿತಾಗ, ಪಕ್ಕನೆ ಅಡುಗೆಮನೆ ಲೈಟ್ ಹಾಕಿ, ಜಿರಳೆ ನೋಡಲು ಹಾತೊರೆದಿದ್ದೆ. ಯಾವ ಜೀವಜಂತುವಿನ ಸುಳಿವೂ ಸಿಗದೇ ಸುಮ್ಮನಾಗಿದ್ದೆ. ಇದಕ್ಕೆ ಕಾರಣ, ಅಮೆರಿಕನ್ನರು ಬಳಸುವ ಅತೀ ಪರಿಣಾಮಕಾರಿಯಾದ ಪೆಸ್ಟ್ ಕಂಟ್ರೋಲ್. ವರ್ಷಕ್ಕೊಂದೆರಡು ಬಾರಿ ಇಡೀ ಮನೆಯನ್ನು ಪೆಸ್ಟ್ ಕಂಟ್ರೋಲ್ ನವರಿಗೆ ಕಾಂಟ್ರಾಕ್ಟ್ ಕೊಡುತ್ತಾರೆ. ಅವರು ಬಂದು ಇಡೀ ಮನೆಯನ್ನು ಬವ್ವಾ ರಹಿತ ಮನೆಯನ್ನಾಗಿ ಮಾಡಿ ಬಿಡುತ್ತಾರೆ. ಜಿರಳೆ ಹೋಗಲಿ, ಒಂದು ಇರುವೆ ಕೂಡ ಕಾಣಸಿಗೋಲ್ಲಾ. ಇದನ್ನು ಮಾಡಿ ಹೊಟ್ಟೆ ತುಂಬಿಸಿಕೊಳ್ಳುವ ದೊಡ್ಡ ದೊಡ್ಡ ಕಂಪನಿಗಳೇ ಇವೆ. ವರ್ಷಕ್ಕೆ ಕೋಟ್ಯಂತರ ಬವ್ವಾಗಳನ್ನು ಬಲಿ ಕೊಟ್ಟು ಮಿಲಿಯನ್ ಗಟ್ಟಲೆ ಹಣ ಗಳಿಸುತ್ತವೆ. ಸಧ್ಯಕ್ಕೆ ನಮ್ಮಲ್ಲಿ ಹುಳ ಕೊಲ್ಲಲು ಇಷ್ಟು ದೊಡ್ಡ ಉದ್ಯಮ ಬೆಳೆದಿಲ್ಲ. ಏನಿದ್ದರೂ ಕಸಬರಿಗೆಯಿಂದ ಶುರುವಾಗಿ ಹಿಟ್ ಸ್ಪ್ರೇ ವರೆಗೆ ನಿಂತಿದೆ! ಅದಕ್ಕಾಗಿಯೋ ಏನೋ ಇದರ ಜೀವ ಸಂತತಿಗೆ ಧಕ್ಕೆಯಾಗಿಲ್ಲ. ಅದೂ ಅಲ್ಲದೆ, ನನ್ನ ಅನುಭವದ ಪ್ರಕಾರ ಜಿರಳೆ ಸ್ವಲ್ಪ ಬುದ್ಧಿಶಾಲಿಯೂ ಆಗಿದೆ. ಕಸಬರಿಗೆಯಿಂದ ಹೊಡೆದಾಕ್ಷಣ ಸತ್ತಂತೆ ನಟಿಸುವ ಜಿರಳೆ, ಸ್ವಲ್ಪ ಸಮಯವಾದ ಕೂಡಲೇ ಏನೂ ಆಗೇ ಇಲ್ಲ ಎನ್ನುವಂತೆ ಓಡಿ ಹೋಗಿ ಅವಿತುಕೊಂಡು ಬಿಡುತ್ತದೆ. ಈ ಸಂಚು ಹೆಚ್ಚು ಕಡಿಮೆ ಎಲ್ಲಾ ಜೀವಿಗಳಲ್ಲಿ ಕಂಡು ಬಂದರೂ, ಜಿರಳೆಗೆ ವರದಾನವಾಗಿರುವ ಮತ್ತೊಂದು ಸಂಗತಿ ಏನೆಂದರೆ, ಇದರ ತಲೆಯನ್ನು ಕಡಿದು ಹಾಕಿದರೂ ಇದು ಬದುಕುಳಿಯಬಲ್ಲುದು! ಹೌದು, ಇದರ ದೇಹದಲ್ಲಿರುವ ಚಿಕ್ಕ ಚಿಕ್ಕ ರಂಧ್ರಗಳಿಂದ ಇದು ಉಸಿರಾಡಬಲ್ಲುದರಿಂದ ಇದಕ್ಕೆ ಬಾಯಿಯ ಅವಶ್ಯಕತೆ ಇಲ್ಲ. ಹೀಗಾಗಿ ಇದು ತಲೆ ರಹಿತವಾಗಿ, ಆಹಾರವಿಲ್ಲದೆ ಒಂದು ತಿಂಗಳಿನವರೆಗೂ ಜೀವಿಸಬಹುದಾದರೂ, ನೀರಿಲ್ಲದೆ ಹೆಚ್ಚೆಂದರೆ ಒಂದು ವಾರ ಬದುಕಬಹುದು.

ಇರಲಿ, ಕೊಲ್ಲುವ ವಿಧಾನಗಳ ಬಗ್ಗೆ ಗಮನ ಹರಿಸಿದರೆ ಧನಾತ್ಮಕವಾಗಿ

ಚಿಂತಿಸಿದಂತಾಗುತ್ತದೆ. ಆಗಲೇ ಹೇಳಿದಂತೆ ಜಿರಳೆ ಕಂಡೊಡನೆ ಯಾವ ಹಿಟ್ ಸ್ಪ್ರೇ ಆಗಲೀ ಅಥವಾ ಲಕ್ಷ್ಮಣ ರೇಖೆಯಾಗಲೀ ಎಲ್ಲಿ ಇಟ್ಟಿದ್ದೇವೆಂದು ನೆನಪಾಗುವುದಿಲ್ಲ. ಕೈಗೆ ಸಿಕ್ಕ ವಸ್ತುವಿನಿಂದ ಅದನ್ನು ಹೊಡೆದು ಕೊಲ್ಲುವುದೇ ಮೊದಲ ವಿಧಾನ. ಎರಡನೇ ವಿಧಾನದಲ್ಲಿ, ಜಿರಳೆ ವಾಸಿಸುವ ಸ್ಥಳವನ್ನು ವಿಷಕಾರಿಯಾಗಿಸುವುದು. ಈ ವಿಧಾನದಿಂದ ಜಿರಲೆಯು ಒಂದು ಬಾಡಿಗೆ ಮನೆಯಿಂದ ಇನ್ನೊಂದು ಬಾಡಿಗೆ ಮನೆಗೆ ಹೋದ ಹಾಗೆ ಸ್ಥಳ ಬದಲಾಯಿಸಿ ಇನ್ನಷ್ಟು ಹೆಚ್ಚು ತಲೆನೋವಾಗಿ ಪರಿಣಮಿಸುತ್ತವೆ. ಏಕೆಂದರೆ ಮೊದಲಾದರೆ ಜಿರಳೆ ಸ್ಥಳ ಗೊತ್ತಿದ್ದು ಜಿರಳೆ ಅವಾಂತರ ನೋಡಲು ಮನಸ್ಸು ಸಿದ್ಧ ಆಗಿರುತ್ತೆ. ಸ್ಥಳ ಬದಲಾಯಿಸಿದರೆ, ಯಾವಾಗ ಬೇಕಾದ್ರೂ ಜಿರಳೆ ಪಟ್ ಅಂತ ಕೈ ಮೇಲೆ ಬೀಳಬಹುದು. ಇದರ ವೇದನೆ ಅನುಭವಿಸಿದವರಿಗೇ ಗೊತ್ತು. ಆ ಗರಗಸದಂತಿರುವ ಕಾಲುಗಳು ನಿಮ್ಮ ಮೃದು ಕೈಯನ್ನು ಬಿಗಿದಪ್ಪಿ ಓಡಾಡಿದರೆ ಹೇಗಾಗಬೇಡ! ಮೂರನೇ ವಿಧಾನದಲ್ಲಿ; ಮೂರನೇ ವಿಧಾನ ಎನ್ನುವುದಕ್ಕಿಂತಲೂ ಮುಂಜಾಗ್ರತಾ ಕ್ರಮವೆಂದೇ ಹೇಳಬಹುದು. ಜಿರಳೆ ತನ್ನ ವಂಶಾಭಿವೃದ್ಧಿ ಮಾಡಲು ಮೊಟ್ಟೆಗಳನ್ನು ಒಂದು ಸೂಟ್ ಕೇಸಿನಂತಹ ಪೆಟ್ಟಿಗೆಯೊಳಗೆ ಇಡುತ್ತದೆ. ಇಂತಹ ಒಂದು ಬಾಕ್ಸ್ ನಲ್ಲಿ ಕಡಿಮೆ ಎಂದರೂ ಹದಿನಾರು ಮೊಟ್ಟೆಗಳಿರುತ್ತವೆ. ಒಂದು ಸೂಟ್ ಕೇಸ್ ನಾಶ ಮಾಡಿದರೆ, ಹದಿನಾರು ಭಾವೀ ಜಿರಲೆಗಳನ್ನು ಕೊಂದಂತೆ!! ಹೇಗಿದೆ?! ಇದಕ್ಕೆ ಒನಕೆ ಓಬವ್ವ ಆಗಬೇಕಿಲ್ಲ, ಮನೆ ತುಂಬಾ ಓಡಾಡಬೇಕಿಲ್ಲ, ಹೇಸಿಗೆ ಪಡಬೇಕಿಲ್ಲ, ಮೇಲಾಗಿ ಜಿರಲೆಯನ್ನು ಕೊಲ್ಲಲು ನಾವು ಬೆನ್ನಟ್ಟಿದ್ದೇವೋ ಅಥವಾ ಜಿರಲೆಯೇ ನಮ್ಮ ಬೆನ್ನತ್ತಿದೆಯೋ ಎನ್ನುವ ಗೊಂದಲವಿರುವುದಿಲ್ಲ. ಈ ವಿಧಾನ ನನ್ನ ಅಚ್ಚುಮೆಚ್ಚಿನದು.

ನಾಲ್ಕನೆಯದು ಮತ್ತು ಕೊನೆಯದು; ಜಿರಳೆ ನಿಯಂತ್ರಿಸಲು ಒಂದು ಬೆಕ್ಕನ್ನು ಸಾಕುವುದು. ಇದು ಮಾತ್ರ, ಒಂದು ಕೊಟ್ಟು ಇನ್ನೊಂದನ್ನು ಮೈಮೇಲೆ ಎಳೆದುಕೊಂಡಂತೆ. ನಾನು ಚಿಕ್ಕವಳಿದ್ದಾಗ, ನಮ್ಮಮ್ಮ ಒಂದು ಬೆಕ್ಕನ್ನು ಸಾಕಿದ್ದರು (ನನ್ನ ಹಟದಿಂದಲೇ ಇರಬಹುದು) ಕಾಣಲು ಕಂದು ಬಣ್ಣ ಮತ್ತು ಬಿಳಿ ಬಣ್ಣದ ಪಟ್ಟೆಗಳಿದ್ದರಿಂದ ಇದಕ್ಕೆ ಹುಲಿ ಅಂತಲೇ ಕರೆಯುತ್ತಿದ್ದ ನೆನಪು. ಅದೋ ಬರೀ ಹೆಸರಿಗಷ್ಟೇ ಹುಲಿ ಇದ್ದು, ಯಾವ ಜಿರಳೆ, ಹಲ್ಲಿ , ಇಲಿಯನ್ನೂ ಕೂಡ ಹಿಡಿಯುತ್ತಿರಲಿಲ್ಲ. ಪಟ್ಟಣವಾಸಿಗಳಂತೆ ಬ್ರೆಡ್ಡು, ಬಿಸ್ಕೆಟ್,ಬನ್ನು, ಹಾಲು ಇದರಲ್ಲೇ ಜೀವನ ಸಾಗಿಸುವಂತಿತ್ತು. ವಾರಕ್ಕೊಮ್ಮೆ ರವಿವಾರದಂದು ಶಾಲೆಗೆ ರಜವಿದ್ದಾಗ ನಾನು ಅದನ್ನು ಹಲ್ಲಿ ಬೇಟೆಗೆಂದು "ಅಮ್ಮಾ ನಾನಿದಕ್ಕೆ ಜಿರಳೆ ಹಿಡಿಯುವ ಟ್ರೇನಿಂಗ ಕೊಡುತ್ತೇನೆ "ಎಂದು ಬೆಕ್ಕನ್ನು ಕರೆದುಕೊಂಡು ನಮ್ಮ ತೋಟದಲ್ಲಿ ತಿರುಗಾಡುತ್ತಿದ್ದೆ. ಕಿಟಕಿಯಲ್ಲಿರುವ ಹಲ್ಲಿಯನ್ನು ತೋರಿಸಿ , ಕಟ್ಟಿಗೆಯ ಸಹಾಯದಿಂದ ಹಲ್ಲಿಯನ್ನು ಬೆಕ್ಕು ಕೂತ ದಿಕ್ಕಿಗೆ ಓಡಿಸುತ್ತಿದೆ. ಈ ಬೆಕ್ಕು ಹಲ್ಲಿ ಹಿಡಿಯಲು ತನ್ನ ಮುಂಗಾಲುಗಳನ್ನು ಎತ್ತರಕ್ಕೆ ಚಾಚುತ್ತಿತ್ತು. ಹೀಗೆ ಚಾಚಿದಾಗ, ಕಿಟಕಿಯಲ್ಲಿ ಫಿಕ್ಸ್ ಮಾಡಿದ ತಂತಿಯ ಸೊಳ್ಳೆ ಪರದೆಯಲ್ಲಿ ಬೆಕ್ಕಿನ ಉಗುರು ಸಿಕ್ಕಿ ಹಾಕಿಕೊಳ್ಳುತ್ತಿತ್ತು. ಅದನ್ನು ಬಿಡಿಸಿಕೊಳ್ಳಲು ಪಟ್ಟ ಪಾಡು ಹಲ್ಲಿ ಹಿಡಿಯುವುದಕ್ಕಿಂತ ಜಾಸ್ತಿ ಇತ್ತು. ಮಂತ್ರಕ್ಕಿಂತ ಉಗುಳೇ ಜಾಸ್ತಿ ಎನ್ನುವಂತೆ ಹಲ್ಲಿ ಬೇಟೆ ದೂರ,

ಬೆಕ್ಕಿನ ಉಗುರು ಮುರಿಯದಿದ್ದರೆ ಸಾಕು ಎಂದು ಸಹಾಯಕ್ಕೆ ಅಣ್ಣನನ್ನು ಕರೆಯಲು ಓಡಿ ಹೋಗುತ್ತಿದ್ದೆ. ಇಂತಹ ಅನುಭವದಿಂದ ಈಗ ಬೆಕ್ಕಿನ ಉಸಾಬರಿ ಬೇಡ ಅನ್ನಿಸುತ್ತೆ. ಆದರೂ ಬೀದಿ ಬೆಕ್ಕು ಯಾವಾಗಾದರೂ ಗಟಾರ್ ಪಕ್ಕ ಓಡಾಡುವ ಜಿರಳೆ ಹಿಡಿದು ಕುರುಮ್ ಕುರುಮ್ ಎಂದು ಸಂಡಿಗೆ ತಿನ್ನುವಂತೆ ಜಿರಲೆಯನ್ನು ಚಪ್ಪರಿಸುವುದನ್ನು ನೋಡಿದಾಗ, ಇಂತಹದೊಂದು ಬೆಕ್ಕು ಇದ್ದರೆ ಎಷ್ಟು ಚೆನ್ನ ಎಂದೆನಿಸುತ್ತದೆ.


ಇನ್ನೂ ಒಂದು ವಿಶೇಷ ಹಾಗೂ ಪೂರ್ವಯೋಜಿತ ವಿಧಾನವಿದೆ. ಇದು ನಮ್ಮಮ್ಮ ರೂಡಿಸಿಕೊಂಡ ಹಾಗು ಯಾವುದೇ ಕೀಟನಾಶಕ ಬಳಸದೇ, ಒಂದು ಸಾವಯವ ವಿಧಾನವೆಂದೇ ಹೇಳಬಹುದು. ಇದೇನೆಂದರೆ, ಜೊಂಡಿಗನಿಗೆ ಅತೀ ಪ್ರಿಯವಾದ ಖಾಲಿ ರಟ್ಟಿನ ಡಬ್ಬಿಗಳನ್ನು ಅಡುಗೆಮನೆಯಲ್ಲಿ ಅವು ಓಡಾಡುವ ಸ್ಥಳಗಳಲ್ಲಿ ಇಡುವುದು. ಇದೊಂತರಹ ಇಲಿ ಹಿಡಿಯಲು ಬೋನು ಇಟ್ಟ ಹಾಗೆ. ಒಂದು ವಾರದ ನಂತರ ಜಿರಳೆಗಳು ಅದನ್ನು ತಮ್ಮ ಮನೆಯಂತೆ ವಾಸ ಮಾಡುತ್ತಿರುವಾಗ; ಒಂದು ಬುಟ್ಟಿಯಲ್ಲಿ ಕುದಿಯುವ ನೀರು ತೆಗೆದುಕೊಂಡು ಆ ಡಬ್ಬದಲ್ಲಿರುವ ಎಲ್ಲ ಜಿರಲೆಗಳನ್ನೂ ಅದರಲ್ಲಿ ಬೀಳಿಸುವುದು! ಒಂದು ಸಲ ಅಮ್ಮನಿಗೆ "ತಣ್ಣೀರಲ್ಲೇ ಬೀಳಿಸಬಹುದಲ್ಲ" ಅಂತ ಪ್ರಶ್ನಿಸಿದ್ದಕ್ಕೆ ಅವು ಅದರಲ್ಲಿ ಸಾಯುವುದಿಲ್ಲ ಎಂದಷ್ಟೇ ಉತ್ತರಿಸಿದ್ದರು. ಯಾವಾಗ ಪಿ ಯು ಸಿ ನಲ್ಲಿ ಜೀವವಿಜ್ಞಾನ ಪ್ರಯೋಗಶಾಲೆಯಲ್ಲಿ ಜಿರಲೆಯ ಅಂಗ ರಚನೆಯ ಭಾಗ ಬಂತೋ, ಅಂದೇ ಜಿರಲೆಯ ಎಲ್ಲ ಜನ್ಮ ರಹಸ್ಯಗಳೂ ಬಯಲಾಗಿ ಬಿಟ್ಟವು. ಈ ಶೀತರಕ್ತದ ಮಿಶ್ರಾಹಾರಿ ಜಿರಲೆಯು ನೀರಿನಲ್ಲಿ ಮುಳುಗಿಯೂ ನಲವತ್ತು ನಿಮಿಷ ಜೀವಂತವಾಗಿರಬಲ್ಲುದು. ಇನ್ನು ಯಾವಾಗಲಾದರೂ, ಪಾಂಡವರಿಂದ ರಕ್ಷಿಸಿಕೊಳ್ಳಲು ನೀರೊಳಗೆ ಅಡಗಿ ಕುಳಿತ ದುರ್ಯೋಧನನ ನೆನಪಾದರೆ ಅದರ ಜೊತೆ ಈ ಜೊಂಡಿಗ್ಯಾನ ನೆನಪೂ ಆಗಬಹುದು.

ಇಂಥ ಹಠಮಾರಿ ಜಿರಲೆಯು ಪರಮಾಣು ಬಾಂಬ್ ನಿಂದಲೂ ಉಳಿದುಕೊಳ್ಳುತ್ತದೆ ಎನ್ನುವುದು ಕೆಲವರ ವಾದ. ಹಿರೋಷಿಮಾ ನಾಗಾಸಾಕಿ ಮೇಲೆ ಪರಮಾಣು ದಾಳಿಯಾದಾಗ ಎಲ್ಲ ಜೀವಿಗಳೂ ನಿರ್ನಾಮವಾದರೂ ಜಿರಳೆ ಮಾತ್ರ ಬದುಕುಳಿದಿತ್ತು ಎಂದು ಅಂಬೋಣ. ಇದನ್ನೇ ಎತ್ತಿ ಹಿಡಿಯುವಂತೆ, ಕಳೆದ ದಶಕದಲ್ಲಿ ಬಿಡುಗಡೆಗೊಂಡ ಒಂದು ಅನಿಮೇಷನ್ ಚಿತ್ರ "WALL-E" ನಲ್ಲಿ; ಭೂಮಿಯ ಮೇಲೆ ಯಾವ ಜೀವಿ ಇಲ್ಲದಿದ್ದರೂ ಜಿರಲೆಯೊಂದಿತ್ತು ಎಂದು ರೋಬೋಟ್ ಜೊತೆಗೆ ಜಿರಲೆಯ ಸ್ನೇಹ ಸಂಬಂಧದ ಬಗ್ಗೆ ಸುಂದರ ಕಲ್ಪನೆಯನ್ನು ಚಿತ್ರಿಸಿದ್ದರು. ನಿಜವಾಗಿಯೂ ಹೇಳಬೇಕೆಂದರೆ, ಜಿರಳೆ ಪರಮಾಣು ವಿಕಿರಣವನ್ನು ತಡೆದುಕೊಳ್ಳಲಾರದು. ಮನುಷ್ಯನಿಗೆ ಹೋಲಿಸಿದರೆ ವಿಕಿರಣ ತಡೆದುಕೊಳ್ಳುವ ಶಕ್ತಿ ಜಿರಳೆಗೆ ಹೆಚ್ಚಿದ್ದರೂ ಇದು ಪರಮಾಣುವಿನಿಂದ ಉಳಿಯಲಾರದು.

ಹಾಗಂತ ಮನೆಯಲ್ಲೇನಾದರೂ ಪರಮಾಣು ಪ್ರಯೋಗ ಮಾಡಲಾದೀತೇ?! ಅದೂ ಅಲ್ಲದೆ ಈ ಸರ್ವವ್ಯಾಪಿ ಜಿರಲೆಯು ಮನೆಯಿಂದ ತೊಲಗಿದರೂ, ಜಗತ್ತಿನ ಎಲ್ಲ ಮೂಲೆಗಳಲ್ಲೂ ಇದರ ಸಂತತಿ ಇದೆ. ಇದಕ್ಕೆ ಸಾಕ್ಷಿ

ಎಂಬಂತೆ ಸಂತತಿಯ ಹೆಸರೇ ವಾಸಸ್ಥಾನವನ್ನು ಸೂಚಿಸುತ್ತದೆ. ಅಮೆರಿಕನ್ ಜಿರಳೆ, ಜರ್ಮನ್ ಜಿರಳೆ, ಒರಿಯಂಟಲ್ ಜಿರಳೆ ಇತ್ಯಾದಿ. ಇವು ಆಯಾ ಪ್ರದೇಶಕ್ಕೆ ಅನುಗುಣವಾಗಿ ವಿಕಸನಗೊಂಡಿವೆ. ಖ್ಯಾತ ಸಸ್ಯ ಶಾಸ್ತ್ರಜ್ಞ ಮತ್ತು ಸಾಹಿತಿ ಬಿಜಿಎಲ್ ಸ್ವಾಮಿ ಹೇಳುವಂತೆ ಒಂದೇ ವರ್ಗದ ಮರಗಳು ಹವಾಮಾನಕ್ಕೆ ಅನುಗುಣವಾಗಿ ಬೇರೆ ಬೇರೆಯಾಗಿ ಬೆಳೆಯುತ್ತವೆ. ಹಾಗೆಯೇ ಜಿರಲೆಗಳೂ ಕೂಡ ಇಲ್ಲಿ ಗಾತ್ರದಲ್ಲಿ ಚಿಕ್ಕವಿದ್ದರೂ ಉಷ್ಣ ವಲಯದಲ್ಲಿ ಇದರ ಮೂರು ಪಟ್ಟು ದೊಡ್ಡದಾಗಿ ಬೆಳೆಯುತ್ತವೆ. ಈ ಕಟುಸತ್ಯವನ್ನು ನನ್ನಿಂದ ಅರಗಿಸಿಕೊಳ್ಳಲು ಬಹುಕಷ್ಟ. ಊಹಿಸುವುದಕ್ಕೂ ಮನಸ್ಸು ಬೇಡ ಎನ್ನುತ್ತದೆ. ಇದಕ್ಕಿಂತ ಕಠೋರವಾದ ಸತ್ಯವೇನೆಂದರೆ ಚೀನಾದಲ್ಲಿ ಜಿರಲೆಯನ್ನು ಆಹಾರವಾಗಿ ತಿನ್ನುತ್ತಾರೆ ಮತ್ತು 'ಜಿರಳೆ ಕೃಷಿ' ಮಾಡುತ್ತಾರಂತೆ!! ತಿನ್ನುವುದಕ್ಕಲ್ಲದೇ ಕೆಲವು ಮೆಡಿಸಿನ್ ಗಳಲ್ಲಿಯೂ ಬಳಸುತ್ತಾರಂತೆ. ಕುಕ್ಕಟಗಳಿಗೆ ಆಹಾರವಾಗಿ ಜಿರಳೆ ಕೃಷಿ.

ಅಬ್ಬಾ! ಈ ಸರ್ವಾಹಾರಿ ಬವ್ವಾವಿನ ಸುತ್ತ ಇಷ್ಟೆಲ್ಲಾ ವೈಚಿತ್ರ್ಯಗಳಿದ್ದರೂ ಮನಸ್ಸು ಈಗಲೂ ಜಿರಳೆ ರಹಿತ ಮನೆಯನ್ನೇ ಬಯಸುತ್ತದೆ. ಪರಮಾತ್ಮನಂತೆ ಸರ್ವವ್ಯಾಪಿಯಾಗಿರುವ ಇವು; ತಮ್ಮನ್ನು ಸರ್ವನಾಶ ಮಾಡಲು ಬರುವ ಮನುಜರನ್ನು ನೋಡಿದ ಕೂಡಲೇ, ಜಿರಲೆಯ ಮನಸ್ಸೂ ಕೂಡ ನಮ್ಮಂತೆಯೇ ಮನೆಯನ್ನು ಮಾನವರಹಿತವಾಗಿ ಬಯಸುತ್ತವೆಯೋ ಅಥವಾ ಅವುಗಳ ಜೀವನದಲ್ಲಿ ನಮ್ಮನ್ನು ಮನರಂಜನೆಯಂತೆ ಬಿಂಬಿಸಿಕೊಳ್ಳುತ್ತವೆಯೋ ಏನೋ? ಯಾರು ಬಲ್ಲರು ಜಿರಲೆಯ ಮನಸ್ಸನ್ನು! ಆದರೂ, ಯಾವುದೋ ಮೆಚ್ಚಿನ ಹಳೆಯ ಪುಸ್ತಕವೊಂದನ್ನು ಓದುವಾಗ ಪುಸ್ತಕದ ಮಧ್ಯದಲ್ಲಿ ಚಪ್ಪಟೆಯಾಗಿ ಅವಶೇಷವಾಗಿ ಸಿಗುವ ಜಿರಲೆಯ ಅಸ್ಥಿಪಂಜರ ಮಾತ್ರ ಚಿದಂಬರ ರಹಸ್ಯವಾಗಿ ಕಂಡು ಬರುತ್ತದೆ!



## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ✓ ನೆರಳಿನಲ್ಲಿ ಕುಳಿತು ಓ! ವಾ! ಹೌ ಬ್ಯೂಟಿಫುಲ್..!! ಎನ್ನುತ್ತಿದ್ದರೆ ತೋಟ ಬೆಳೆಯವುದಿಲ್ಲ.
- ✓ ನಾವು ನೋಡಿದ್ದಲ್ಲ ಕಂಡದ್ದು. ಅನಿರೀಕ್ಷಿತವಾಗಿ ನಮ್ಮನ್ನು ಮೀರಿ ಏನೋ ಕಾಣುತ್ತಲ್ಲ ಅದು ಕವಿತೆ ಆಗುತ್ತದೆ.
- ✓ ದೇರ್ ಆರ್ ಮೆನಿ ಥಿಂಗ್ಸ್ ಐ ಡು ನಾಟ್ ವಾಂಟ್ ಟು ಡು ಬಿಫೋರ್ ಐ ಡೈ.
- ✓ ಅನೇಕ ವೇಳೆ 'ಏನು ಹೇಳಿದರು?' ಎಂಬುದಕ್ಕಿಂತ 'ಯಾರು ಹೇಳಿದ್ದು?' ಎಂಬುದೇ ಹೆಚ್ಚು ಮುಖ್ಯವಾಗುತ್ತದೆ.
- ✓ 'ಸೆಲ್ ಫೋನ್' ಎಂದೇಕೆ ಅದನ್ನು ಕರೆಯುತ್ತಾರೆ? ಏಕೆಂದರೆ ಅದು ನಮ್ಮನ್ನು ತನ್ನ ಬಂಧನದಲ್ಲಿರಿಸಿಕೊಂಡಿರುವದರಿಂದ.
- ✓ ಸೆಲ್ ಫೋನ್‌ಗಳು ತೆಳ್ಳಗಾಗುತ್ತಿವೆ. ಅದನ್ನ ಬಳಸುವವರು ತೆಳ್ಳಗಾಗಲು ಹೆಣಗುತ್ತಿದ್ದಾರೆ.
- ✓ ಟು ಸಕ್ಸೀಡ್ ಇನ್ ಲೈಫ್ ಯು ನೀಡ್ ತ್ರೀ ಥಿಂಗ್ಸ್ – ವೈಸ್ ಬೋನ್, ಬ್ಯಾಕ್ ಬೋನ್ ಅಂಡ್ ಫನ್ನಿ ಬೋನ್.
- ✓ ಬದುಕಿನ ಅವಧಿ ಕಡಿಮೆ ಎಂದು ಅರಿವು ಮೂಡುವ ಹೊತ್ತಿಗೆ ಸಮಯ ಕಳೆದೇ ಹೋಗಿರುತ್ತದೆ.
- ✓ ಕಂಡ ಸಂಗತಿಯಿಂದ ಕಾಣದ್ದನ್ನು ಕಲ್ಪಿಸುವ ಶಕ್ತಿ ಕವಿಗೆ ದಕ್ಕಿದ ವರ. ಅದಿಲ್ಲದೆ ಹೋದರೆ ಕವಿಗಳು ಫೋಟೋಗ್ರಾಫರ್ ಆಗಿಬಿಡುತ್ತಿದ್ದರು.
- ✓ ಸಮಯದ ಉಪಯೋಗ ಎಂದರೆ ಎಷ್ಟು ಸಮಯ ಇನ್ನೂ ಇದೆ ಎಂದಲ್ಲ ಇರುವ ಸಮಯವನ್ನು ಹೇಗೆ ಬಳಸುತ್ತಿದ್ದೀಯ ಎಂಬುದು.
- ✓ ವರಿ ಆಫನ್ ಗಿವ್ಸ್ ಎ ಸ್ಮಾಲ್ ಥಿಂಗ್ ಎ ಬಿಗ್ ಶ್ಯಾಡೊ.
- ✓ ಮರ ತನಗಾಗಿ ಏನೂ ಉಳಿಸಿಕೊಳ್ಳದು. ಎಲ್ಲವನ್ನೂ ಕೊಟ್ಟು ಬಿಡುತ್ತದೆ. ತೆಗೆದುಕೊಳ್ಳುವವರು ಯಾರೂ ಇಲ್ಲ ಎಂದರೆ ಅದು ತನ್ನ ಫಲವನ್ನು ಭೂಮಿಗಾದರೂ ಕೆಡವುತ್ತದೆ. ಗುರುಗಳು ಹಾಗೆಯೇ.
- ✓ ಮನೆಯ ಮುಂದೆ ಬೆಳೆಸಿದ ಗಿಡಗಳಿಂದ ಹೂಗಳನ್ನು ನಸುಕಿನಲ್ಲಿ ಕದ್ದೊಯ್ಯುವವರು ಅವುಗಳಿಗೆ ಒಂದು ಚೆಂಬು ನೀರನ್ನಾದರೂ ಹಾಕುವಂತಿದ್ದರೆ?
- ✓ ಫಿಟ್‌ನೆಸ್ ಈಸ್ ಸೊ ಮಚ್ ಅಬೌಟ್ ಲುಕಿಂಗ್ ಗುಡ್. ಇಟ್ ಈಸ್ ಅಬೌಟ್ ಫೀಲಿಂಗ್ ಗುಡ್.

■

# ದೇವರ ಅತಿಥಿ

● ಪಾಲಹಳ್ಳಿ ವಿಶ್ವನಾಥ್

ಓ ! ಇಂದು ನನ್ನ ಪರಿವಾರದವರು ಬಹಳ ಬೇಗನೇ ಎಬ್ಬಿಸಿಬಿಟ್ಟರು.

ಪ್ರಭು, ಏಳಿ, ಏಳಿ, ಬೆಳಗಾಯಿತು .

ಎಲ್ಲಿ ಬೆಳಿಗ್ಗೆ. ಇನ್ನೂ ಬಹಳ ಕತ್ತಲೆ. ಹೌದು! ಆ ಮಧುರ ಧ್ವನಿಯ ಸುಪ್ರಭಾತವೂ ಶುರುವಾಗುವ ಮುಂಚೆಯೇ!

ಸರಿಯಾಗಿ ಏಳಿ, ಅದು ಎಡ ಪ್ರಭು, ಬಲಕ್ಕೆ ತಿರುಗಿಕೊಂಡು ಏಳಿ.

ಏನು ಮಾಡುವುದು, ನಿದ್ದೆ ಪೂರ್ತಿಯಾಗದಿದ್ದರೆ ಹೀಗೇ ಆಗುವುದು. ಯಾವುದೋ ವಿಶೇಷ ಹಲ್ಲುಪುಡಿ, ದಿನಕ್ಕಿಂತ ಹೆಚ್ಚು ಸ್ನಾನ, ಹೊಸ ಸಾಬೂನು ಬೇರೆ. ನೀರಿನಲ್ಲಿ ಪನ್ನೀರಲ್ಲದೆ ಇನ್ನೇನೋ ಸುವಾಸನೆಗಳು. ನನಗೆ ಅಕ್ಷಿ ಬರುತ್ತೆ ಎಂದರೂ ಕೇಳುತ್ತಿಲ್ಲ. ಹೊಸ ಬಟ್ಟೆಗಳು. ಎಲ್ಲೋ ಒಳಗೆ ಇಟ್ಟಿದ್ದ ಒಡವೆಗಳು.

ಪ್ರಭು, ಒಂದು ಸತಿ ಕನ್ನಡಿಯಲ್ಲಿ ನೋಡಿಕೊಂಡುಬಿಡಿ.. ನಾವು ಸರಿಯಾಗಿದೆಯಲ್ವೆ? ಏನಿದು, ಏನು ವಿಶೇಷ

ಎಂದು ನಾನು ಕೇಳುತ್ತಲೇ ಇದ್ದೇನೆ. ಹೇಳ್ತೀವಿ ಎಂದು ಉತ್ತರ ಕೊಡುತ್ತಲೇ ಇದ್ದಾರೆ. ನಾನು ಒಂದು ರೀತಿಯಲ್ಲಿ ನನ್ನ ಪರಿವಾರದ ಖೈದಿ. ಅವರು ಏನು ಮಾಡಿದರೂ ಮಾಡಿಸಿಕೊಳ್ಳಬೇಕು. ಅದೂ ಒಂದಿಬ್ಬರೇ? ಇಲ್ಲ, ಸುಮಾರು ಮಂದಿ.ನನಗೆ ಅವರೆಲ್ಲಾ ಒಂದೆ. ಆದರೆ ಅವರಲ್ಲೇ ಬಹಳ ಭೇದಗಳು , ಅಂತಸ್ತುಗಳು ಇವೆ. ಓ ಹೇಳುವುದು ಮರೆತಿದ್ದೆ. ಈವತ್ತು ಅವರ ಮುಖ್ಯಸ್ಥರು ಬಂದು ನನಗೆ ಸ್ನಾನ ಮಾಡಿಸಿದರು. ಅವರು ಪ್ರತಿ ದಿವಸವೂ ಬರುವುದಿಲ್ಲ. ಅವರು ಬಂದರು ಎಂದರೆ ಏನೋ ವಿಶೇಷವಿರುತ್ತದೆ. ಅವರಿಗೆ ಎಷ್ಟು ಮರ್ಯಾದೆ ಗೊತ್ತೆ. ಅವರು ಬರುತ್ತಲೆ ಸಾಮಾನ್ಯ ಜನರಲ್ಲದೆ ನಮ್ಮ ಪರಿವಾರದವರೆಲ್ಲ ದಾರಿ ಬಿಡುತ್ತಾರೆ. ನನಗಿಂತ ಅವರಿಗೇ ಹೆಚ್ಚು ಮರ್ಯಾದೆ ಎಂದರೂ ತಪ್ಪಿಲ್ಲ.ಸರಿ, ನಾನು ಅವರನ್ನೆ ಕೇಳೋಣ ಎಂದು ಕೊಂಡೆ

ಏನಿವತ್ತು ? ಶ್ರಾವಣ ಶನಿವಾರವೇ?'

ಅವರು ನಕ್ಕರು. ನಗುವುದು ಬಹಳ ಅಪರೂಪವಾದ್ದರಿಂದ ಅವರು ನಕ್ಕದ್ದನ್ನು ಇಲ್ಲಿ ಹೇಳಬೇಕಾಯಿತು

ಪ್ರಭು, ನಿಮಗೆ ಇಲ್ಲೇ ನಿಂತು ನಿಂತು ಕಾಲದ ಪರಿವೆ ಇಲ್ಲವಾಗಿದೆ. ಹಿಂದಿನ ತಿಂಗಳೆ ಆಯಿತಲ್ಲ ಶ್ರಾವಣ ಶನಿವಾರ.ಲಕ್ಷಗಟ್ಟಲೆ ಜನ ಬಂದುಹೋದರಲ್ಲವೇ?

ಅವರು ಹೇಳುವುದೂ ನಿಜವೆನ್ನಿ ! ನನಗೆ ಹೇಗೆ ತಿಳಿಯಬೇಕು ಯಾವ ತಿಥಿ, ನಕ್ಷತ್ರ ಎಂದು ! ಸರಿ,ಮತ್ತೆ ಕೇಳಿದೆ.

ಏನಿವತ್ತು ವಿಶೇಷ ?

ನಿಮಗೆ ಯಾರೂ ಹೇಳಿಲ್ಲ ಅಲ್ವೆ ? ನಾನೇ ಆದೇಶ ಕೊಟ್ಟಿದ್ದೆ. ನಿಮಗೂ ಸ್ವಲ್ಪ ಆಶ್ಚರ್ಯವಾಗಲಿ ಎಂದಿದ್ದೆ. ಬೇಡ ಅಂತೀರಾ? ಸರಿ, ಪ್ರಭು, ಹೇಳುತ್ತೇನೆ, ಕೇಳುವಂತವರಾಗಿ. ಈವತ್ತು ಮುಂಬಯಿಯಿಂದ ಆ ಗಣ್ಯ ವ್ಯಕ್ತಿ ಬರುತ್ತಿದ್ದಾರೆ. ಯಾರು ಎಂದಿರಾ? ಬಹಳ ಹಿಂದಿನಿಂದಲೂ ಬರುತ್ತಿದ್ದಾರೆ. ಆಗ ಅವರು ಇಷ್ಟು ಮೇಲೆ ಹೋಗಿರಲಿಲ್ಲ. ಈಗ ಅವರು ಇಡೀ ದೇಶದಲ್ಲೇ ದೊಡ್ಡವರು. ಎಲ್ಲರೂ ಅವರ ಮುಂದೆ ಬಗ್ಗುತ್ತಾರೆ.

ನಾನೂ ಬಗ್ಗಬೇಕೆ ?

ಪ್ರಭು, ಹ!ಹ! ಹಾಗಲ್ಲ. ದೊಡ್ಡ ಅತಿಥಿಗಳು ಬರುತ್ತಿದ್ದಾರೆ. ಸ್ವಲ್ಪ ಚೆನ್ನಾಗಿರುವ ಬಟ್ಟೆ ಹಾಕಿಕೊಂದಿದ್ದರೆ ಒಳ್ಳೆಯದಲ್ಲವೆ... ಅವರು ಭಾರತ ಚಿತ್ರೋದ್ಯಮದ ಮೇರು ನಟ. ಅವರ ಹೆಸರನ್ನು ಕೇಳುತ್ತೀರೋ ಏನೋ! ದೊಡ್ಡವರ ಹೆಸರನ್ನು ಹೇಳಬಾರದಲ್ಲವೇ? ಅವರ ಹೆಸರಿನ ಅರ್ಥ ಅತ್ಯಂತ ಕಾಂತಿಯುತ ಎಂದು. ಅವರು ಎಷ್ಟು ದೊಡ್ಡವರು ಎಂದರೆ ಕಾಂತಿಗೇ ಹೊಸ ಅರ್ಥ ತಂದಿದ್ದಾರೆ. ಈಗ ನಿಮ್ಮನ್ನು ನೋಡಲು ಬರುತ್ತಿದ್ದಾರೆ. ಎರಡು ವರ್ಷಗಳ ಹಿಂದೆ ಅವರಿಗೆ ಮೊಮ್ಮಗಳು ಹುಟ್ಟಿದಳು. ಮಗ ಸೊಸೆ ಮತ್ತು ಮೊಮ್ಮಗಳೊಂದಿಗೆ ಬರುತ್ತಿದ್ದಾರೆ..

ಎರಡು ವರ್ಷ ಆಯಿತು. ಈಗ ಬರುತ್ತಿದ್ದಾರೆಯೆ? ಸ್ವಲ್ಪ ಹುಸಿ ಕೋಪ ತೋರಿಸಿದೆ.

ಪ್ರಭು ಅವರು ಬಹಳ ಬ್ಯುಸಿ. ಸಮಯವೇ ಇಲ್ಲ. ನಿಮಗೂ ಏನಾದರೂ ಉಡುಗೊರೆ ತರುತ್ತಾರೆ. ಪದ್ಮಾವತಿ ಅಮ್ಮನವರಿಗೂ.

ನಮಗೊ, ನಿಮಗೊ,?

ಹ, ಹ ಎಲ್ಲರಿಗೂ ಅನ್ನಿ. ನೀವು ಹೂವು, ನಾವು ನಾರು.

ನೋಡಿ, ನಾನು ಹೇಳುತ್ತಲೇ ಇರುತ್ತೇನೆ ಎಷ್ಟು ಬಡವರು ನನ್ನನ್ನು ನೋಡಲು ಕಾತುರಿರುತ್ತಾರೆ, ದಿನಗಳು, ಗಂಟೆಗಳು ಕಾದು ಬಂದು ನನ್ನನ್ನು ನೋಡುತ್ತಾರೆ. ಈಗ ನೀವು ಯಾರೋ ಪ್ರಭಾವಿ ವ್ಯಕ್ತಿ ಬರುತ್ತಿದ್ದಾರೆ ಎಂದು ಇಷ್ಟೆಲ್ಲ ಮಾಡುತ್ತಿದ್ದೀರಿ. ಅದಲ್ಲದೆ ನನಗೆ ಈ ಬಟ್ಟೆ, ಒಡವೆ.

ಪ್ರಭು! ಈ ವಿಚಾರ ನೀವು ಎಷ್ಟು ಬಾರಿ ಚರ್ಚಿಸಿಲ್ಲ? ನನಗೆ ಮುಂಚೆ ನನ್ನ ತಂದೆಯ ಜೊತೆ, ಅದಕ್ಕೆ ಮುಂಚೆ ನನ್ನ ತಾತನ ಜೊತೆ! ಎಲ್ಲರ ಜೊತೆಯೂ ಇದೇ ಮಾತು ಹೇಳ್ತಾ ಇದ್ದೀರಿ. ಈಗಲೂ ಅದೆ.

ಹೇಳಲೂ ನನಗೆ ಸ್ವಾತಂತ್ರ್ಯವಿಲ್ಲವೆ?

ಹೇಳಿ, ಪ್ರಭು, ಹೇಳಿ. ಆದರೆ ಈ ಲೌಕಿಕದ ವಿಷಯ ನಮ್ಗೆ ಬಿಟ್ಟಿಡಿ ಅಷ್ಟೇ .. ಅವರುಗಳನ್ನು ನೋಡಲು ಬೆಟ್ಟದ ಕೆಳಗಿನಿಂದ ಅಮ್ಮನವರೂ ಪಲ್ಲಕ್ಕಿಯಲ್ಲಿ ಬರುತ್ತಿದ್ದಾರೆ.

ದೇವಿ ಕೂಡ?

ಹೌದು, ಪ್ರಭು ನಾನು ಅವರುಗಳನ್ನು ನೋಡಬೇಕು, ತಡವಾದರೆ ಸ್ವಲ್ಪ ಇರಿಸಿಕೊಂಡಿರಿ. .. ಆದರೆ ಬಂದೇ ಬಿಟ್ಟರಲ್ಲ.

ಪದ್ಮ ಕೂಡ ಹೊಸ ಬಟ್ಟೆ ಹಾಕಿಕೊಂಡಿದ್ದಾಳೆ. ನನ್ನಂತೆಯೇ ಹೊಸ ಒಡವೆಗಳು.

ಇನ್ನೂ ಬಂದಿಲ್ಲವಾ?

ಬೆಟ್ಟದ ಕೆಳಗಿಂದ ಪಲ್ಲಕ್ಕೀಲಿ ಬಂದಿದ್ದಾಳೆ. ಅದ್ರೂ ಮೇಲುಸಿರು. ಏನೋ ಉತ್ಸಾಹ.

ಈವತ್ತು ಚೆನ್ನಾಗಿ ಕಾಣುತ್ತೀಯಾ ಎಂದೆ.

ಏಕೆ, ದಿನವೂ ಕೆಟ್ಟದಾಗಿರ್ತೀನಾ?

ನಿರೀಕ್ಷಿಸಿದ್ದ ಉತ್ತರವೇ!

ನೋಡಿ, ಬರೋವರು ಗಣ್ಯವ್ಯಕ್ತಿಗಳು. ದೇಶದಲ್ಲೆಲ್ಲಾ ಅವರಿಗೆ ಗೌರವ ಕೊಡ್ತಾರೆ. ನಿಮ್ಮ ಕೆಟ್ಟು ಜೋಕುಗಳೆಲ್ಲ ಮಾಡ್ಬೇಡಿ. ಪಾಪ ಅಂತ ನಗಬಹುದು. ಅಷ್ಟೆ! ಆಗಲೆ ಅಂಗವಸ್ತ್ರ ಕೊಳಕು ಮಾಡಿಕೊಂಡು ಬಿಟ್ಟಿದೀರಾ!

ಬಹಳ ಶಬ್ದ. ಬೆಟ್ಟದ ಮೆಲೆ ಬಂದುಬಿಟ್ಟಿದ್ದಾರೆ ಅಂತ ಮಾತಾಡಿ ಕೊಳ್ಳುತ್ತಿದ್ದಾರೆ. ಮತ್ತೆ ಪದ್ಮ.

ಮಗನೂ ಚೆನ್ನಾಗಿದಾನೆ ಅಂತ ಕೇಳಿದೀನೆ. ಸೊಸೆಯೂ ವಿಶ್ವ ಸುಂದರಿಯಂತೆ.

ನಿನಗಿಂತವಾ ಎಂದು ರೇಗಿಸಿದೆ.

ನೀವೂ ಅವರಿಂದ ನೊಡಿ ಕಲಿತುಕೋಬಹುದು. ಬಹಳ ಬುಧ್ಧಿವಂತರೂ ಅಂತೆ. ಪ್ರಶ್ನೆಗಳನ್ನು ಕೇಳಿ, ಕೇಳಿ ಎಷ್ಟು ವಿಷಯ ತಿಳಿದುಕೊಂಡಿರಬೇಕಲ್ವ. ಒಳ್ಳೆ ಬಟ್ಟೆಹಾಕಿಕೊಳ್ತಾರೆ, ಮೇರು ನಟ, ರೂಪವಂತ. ಈಗ ಬುಧ್ಧಿವಂತ ಕೂಡ.

ನೀನು ಹೇಳೋದು ಕೇಳಿದರೆ ನನಗೆ ಅಸೂಯೆಯಾಗ್ತಾ ಇದೆ.

ಪ್ರಭೂ! ಹಣವಂತ ಕೂಡ... ನಮ್ಮ ಪುಣ್ಯ! ಇಲ್ಲಿಗೇ ಬರ್ತಾ ಇದ್ದರಲ್ಲ! ಆ ಬೈರಾಗೀನ ಹುಡುಕ್ಕೊಂಡು ಕಾಶಿಗೋ ರಾಮೇಶ್ವರಕ್ಕೋ ಹೋಗಿಬಿಟ್ಟಿದ್ದರೆ?

(ಭಾರತದ ಮೇರು ನಟ ತನ್ನ ಸಂಸಾರದೊಂದಿಗೆ ಏಳು ಬೆಟ್ಟಗಳ ಒಡೆಯನನ್ನು ನೋಡಲು ಹೋದ ಸಮಯದಲ್ಲಿ..... ಹೋದರು ಎಂದು ಹಳೆಯ ನೆನಪು)

■

---

ಮನಿಷ: ನನಗೆ ಬ್ಯಾಂಕಿನಲ್ಲಿ ಕೆಲಸ ಸಿಕ್ಕಿದೆ ಅಂಕಲ್..

ಹೌದೆ? ನಿನ್ನ ಹೆಸರನ್ನು ಮನಿ–ಷ ಅಂತ ಬದಲಿಸ್ಕೊ..

TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

**Civil Contractors for**
**Complete Construction Activities**

Mob: 9740968677

# ಗಡಿಬಿಡಿ ಗುಂಡಿ

● **ಸಹನಾ ಪ್ರಸಾದ್**

ಗಡಿಬಿಡಿ ಗುಂಡಿ ಇವತ್ತು ಎಂದಿಗಿಂತ ಹೆಚ್ಚು ಗಡಿಬಿಡಿಯಲ್ಲಿದ್ದಳು. ಕಾರಣ ಅವಳ ಮೊಬೈಲು ಕಾಣುತ್ತಾ ಇಲ್ಲ, ಸಿಗುತ್ತಿಲ್ಲ. ಸೈಲೆಂಟಲ್ಲಿ ಹಾಕಿರಬಹುದು ಎಂದು ಮನೆಯೆಲ್ಲಾ ಜಾಲಾಡಿ ಸುಸ್ತಾಗಿದ್ದಳು. ಇನ್ನು ಗಂಡ, ಸಿಟ್ಟಿನ ಸೋಮು ಬಂದರಂತೂ ಮುಗಿದೇ ಹೋಯಿತು. ಇವಳ ಗಡಿಬಿಡಿತನಕ್ಕೂ. ಅವನ ಸಿಡಿಮಿಡಿಗೂ ನಂಟು ಬಲು ಜೋರು!

ಗುಂಡಿಯ ಹೆಸರು ಗಾಯತ್ರಿ. ಮರಗೂಳಿತನ ಮತ್ತು ಬೇಜವಾಬ್ದಾರಿಯಿಂದ ಅವಳು ಗಡಿಬಿಡಿ ಗುಂಡಿ ಆದಳು. ಅವಳ ಗಂಡ ಅವಳಿಗೆ ವ್ಯತಿರಿಕ್ತ. ತನ್ನ ವಸ್ತುಗಳನ್ನು ಜತನದಿಂದ ಹುಶಾರಾಗಿ ಎತ್ತಿಡುವುದು, ಸಾವಧಾನದಿಂದ ಸಾವಕಾಶವಾಗಿ ಕೆಲಸ ಮಾಡುವುದು ಅವನ ಗುರುತು. ಗಡಿಬಿಡಿ ಎಂಬುದು ಅವನ ಶಬ್ದಕೋಶದಲ್ಲೇ ಇಲ್ಲ. ಇವರಿಬ್ಬರ ಸಂಸಾರವೂ ದೇವರ ಲೀಲೆಗಳಲ್ಲಿ ಒಂದು.

ಇರಲಿ, ಈಗ ಕಳೆದು ಹೋದ ಮೊಬೈಲು ಎಲ್ಲಿ? ಗುಂಡಿ ಸೋಫಾದ ಕೆಳಗೆ.. (ಹಾ, ಅಣ್ಣನ ಸ್ನೇಹಿತನ ಪತ್ನಿಯ ಸಹೋದರ ಕರೆ ಮಾಡಿದ್ದಾಗ, ತನ್ನ ದುಂಡು ಶರೀರವನ್ನು ಸೋಫಾದ ಮೇಲೆ ಚಾಚಿ ಮಾತಾಡಿದೆನಲ್ಲವೇ?), ಅಡುಗೆ ಮನೆಯಲ್ಲಿ.. (ಯೂಟ್ಯೂಬಿನಲ್ಲಿ ನೋಡುತ್ತಾ ಮಾಡಿದ ಹೊಸ ರುಚಿ ನಾಯಿ ಪಾಲಾಗಿದ್ದು, ನಾಯಿಯೂ ಮೂಸದೆ ಹೋಗಿದ್ದು ಅಲ್ಲೇ ಅಲ್ಲವೇ?) ರೂಮಿನಲ್ಲಿ.. (ಧಡೂತಿ ಶರೀರವನ್ನು ಸಣ್ಣದಾಗಿ ಕಾಣುವಂತೆ ಸೀರೆ ಉಡುವುದು ಹೇಗೆ? ಎಂಬ ಲೇಖನ ಓದಿದ್ದು ಅಲ್ಲಿಯೇ ಅಲ್ಲವೇ?) ಬೀರುವಿನ ಒಳಗೆ.. ( ಹೊಸ ರವಿಕೆ ಹುಡುಕುವಾಗ ಟಾರ್ಚ್ ಬಿಟ್ಟಿದ್ದು ಅಲ್ಲೆ), ಬಚ್ಚಲುಮನೆಯಲ್ಲಿ.. ( ಥೂ ಗೆಳತಿ ಸೊಣಕಲು ಶಾಂತಾ ಯಾವಾಗಲೂ ಕರೆ ಮಾಡುವುದು ತಾನು ಅಲ್ಲಿದ್ದಾಗಲೇ). ಕೊನೆಗೆ ತಂಗಳು ಪೆಟ್ಟಿಗೆ, ಮೂರ್ಖ ಪೆಟ್ಟಿಗೆಯ ಹಿಂದೆ, ಹೊರಗಡೆ ತುಳಸಿ ಕಟ್ಟೆಯ ಬಳಿ, ಎಲ್ಲಾ ಕಡೆ ತಡಕಾಡಿದ್ದಾಯಿತು. ಈ ಮಧ್ಯೆ ಗಂಡ ಕರೆ ಮಾಡಿ ತಾನು ಕರೆ ಎತ್ತದಿದ್ದರೆ ಅವನ ಸಿಟ್ಟು ಸೆಡವು ಎದುರಿಸಬೇಕಲ್ಲ ಎಂಬ ಭಯ ಬೇರೆ.


ಸಂಜೆ ಕೆಂಪು ಆವರಿಸುತ್ತಿತ್ತು. ಮೊಬೈಲಿನ ಪತ್ತೆ ಇಲ್ಲ. ಸೋಮು ಬರುವುದು ತಡ ಎಂದು ಹೇಳಿದ್ದು ನೆನಪಾಯಿತು. ಸಧ್ಯ, ಎಂದು ಸ್ತಿರ ದೂರವಾಣಿಯಲ್ಲಿ ಅವನಿಗೊಂದು ಕರೆ ಮಾಡಿ, ಮೊಬೈಲಲ್ಲಿ ಚಾರ್ಜ್ ಇಲ್ಲ, ಕರೆ ಮಾಡುವುದಾದರೆ ಇದಕ್ಕೇ ಮಾಡಿ ಎಂದು ತಾತ್ಕಾಲಿಕವಾಗಿ ಬಚಾವಾದಳು. ಆಚೆ ಮನೆ ಮೀರ, ಎದುರು ಮನೆ ತಾರ, ಪಕ್ಕದ ಮನೆ ಪಾರು ಎಲ್ಲರ ಮನೆಗೆ ಎಡತಾಕಿ ಬಂದಳು. ಅವರೆಲ್ಲರ ಮನೆಗೆ ಬೆಳಗ್ಗೆ ಸೋಮು ಹೊರಟ ನಂತರ ಒಂದು ಸುತ್ತು ಹೋಗಿ ಬಂದಿದ್ದಳಲ್ಲ. ಹೊಸದಾಗಿ ಮದುವೆಯಾಗಿ ಬಂದ ಮೀನಾಕ್ಷಮ್ಮನ ಸೊಸೆ ಹೇಗೆ ಅತ್ತೆಯ ಮಾತು ಮೀರಿ ಅರಳು ಸಂಡಿಗೆಯ ಬದಲು ಅವಲಕ್ಕಿ ಸಂಡಿಗೆ ಇಟ್ಟಳು ಎಂದು ಹೇಳಲು ವಾಟ್ಸಾಪ್ಪು ಸಾಲುವುದೇ? ಖುದ್ದಾಗಿ ಹೋಗಿ ವಿಷಯ

ತಿಳಿಸಲೇಬೇಕಾಯಿತು. ಎಲ್ಲರ ಮನೆಗೆ ಸಂಜೆ ಭೇಟಿ ಕೊಟ್ಟಾಗ ಅವರು ನೋಡುತ್ತಿದ್ದ ಸೀರಿಯಲ್ ಕೊಂಚ ಹೊತ್ತು ವೀಕ್ಷಿಸಿ, ಬಿಸಿ ಮಾಡುತ್ತಿದ್ದ ಕಾಫಿ, ಟೀಯ ರುಚಿ ನೋಡಿ, ಮೆಲ್ಲುತ್ತಿದ್ದ ಅವಲಕ್ಕಿ, ಕಡಲೇಕಾಯಿ ಬೀಜ ಮೆಲ್ಲುತ್ತಾ ಮನೆಗೆ ಬಂದಾಗ ಸೋಮುವಿನ ಸವಾರಿ ಚಿತ್ತೈಸಿತು.

ಬಾಸ್ ಜತೆ ಜಗಳವಾಡಿ ಬೈಸಿಕೊಂಡು ಮನೆಗೆ ಬಂದ ಸೋಮುವಿಗೆ ಉಂಡು ಮಲಗಿದರೆ ಸಾಕಾಗಿತ್ತು. ಅವನಿಗಷ್ಟು ಬಡಿಸಿ, ಅವನು ಟೀವಿಯ ಮುಂದೆ ಕುಕ್ಕರಿಸಿದಾಗ ಮತ್ತೆ ಹುಡುಕಲು ಆರಂಭಿಸಿದಳು. ಸರಿ, ಎಲ್ಲೋ ಬಿಟ್ಟು ಬಂದಿರುವೆ, ನಾಳೆ ತರಕಾರಿ ಉಪ್ಪಿಟ್ಟು ಮಾಡಿ, ಅವನ ಮುಂದೆ ಬಿಂಕ ಬಿನ್ನಾಣ ತೋರಿ ಹೇಳಿದರಾಯಿತು ಎಂದು ನಿರ್ಧರಿಸಿ ಅಳುಕುತ್ತಲೇ ಹಿಂಬಾಗಿಲು ಹಾಕಲು ಹೋದಳು. ಗುರ್, ಗುರ್ ಎನ್ನುತ್ತಿದ್ದ ವಾಷಿಂಗ್ ಮಶೀನು ತನ್ನ ಕೆಲ್ಸ ಮುಗಿದಿದೆ ಎಂದು ಸೂಚಿಸುತ್ತಿತ್ತು. ಅಯ್ಯೊ, ಮಧ್ಯಾನ ಹಾಕಿದ ಬಟ್ಟೆಗಳು, ಹರವಲು ಮರೆತೇ ಬಿಟ್ಟೆನಲ್ಲ ಎಂದು ಚಡಪಡಿಸುತ್ತಾ ಒಳಗಡೆ ಇರುವ ಬಟ್ಟೆಗಳನೆಲ್ಲಾ ಎಳೆದಳು. ಟಣ ಟಣ ಸದ್ದು ಮಾಡುತ್ತಾ ಕೆಳಗೆ ಬಿದ್ದ ಮೊಬೈಲು ಪೀಸ್ ಪೀಸಾಗಿ ಅವಳನ್ನು ಅಣಕಿಸಿತು.

■

---



# ಎಚ್ಚೆನ್ ನೆನಪುಗಳು

● ಸುಕೇಶವ

ಈ ವರ್ಷ ಡಾ. ಎಚ್ಚೆನ್ ಅವರ ಜನ್ಮಶತಾಬ್ಧಿ. ತನ್ನಿಮಿತ್ತ ಒಂದು ಲೇಖನ.
(ಎಚ್ಚೆನ್ ಅವರ ಹೋರಾಟದ ಹಾದಿ ಗ್ರಂಥದಿಂದ ಆಯ್ದದ್ದು)

## ಎಚ್. ಎನ್ ತಿಂದ ಚಿತ್ರಾನ್ನ

ಎಸ್.ಎಸ್.ಎಲ್.ಸಿ. ಪರೀಕ್ಷೆ ನಡೆಯುತ್ತಿದ್ದ ಸಂದರ್ಭದಲ್ಲಿ ನಡೆದ ಒಂದು ಘಟನೆ ಇನ್ನೂ ಜ್ಞಾಪಕವಿದೆ. ಕೊನೆಯ ದಿನ ಚರಿತ್ರೆ, ಭೂಗೋಳದ ಪರೀಕ್ಷೆ. ಭೂಗೋಳದಲ್ಲಿ ಅಂತಹ ಹೆಚ್ಚಿನ ಆಸಕ್ತಿ ನನಗಿರಲಿಲ್ಲ. ಎಲ್ಲಾ ಬಹುಮಟ್ಟಿಗೆ ಕಗ್ಗ, ಹೆಚ್ಚು ಜ್ಞಾಪಕ ಶಕ್ತಿ ಬೇಕು. ಬಾಯಿಪಾಠ ಮಾಡುವ ಶಕ್ತಿ ಇದ್ದವರಿಗೆ ಇಂತಹ ವಿಷಯಗಳು ಸುಲಭ. ಪರೀಕ್ಷೆಯ ಹಿಂದಿನ ದಿನ ರಾತ್ರಿ ಊಟ ಮಾಡಿ ನಿಲಯದ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತಿದ್ದ ಮೂರು ನಾಲ್ಕು ವಿದ್ಯಾರ್ಥಿಗಳು ಇಡೀ ರಾತ್ರಿ, ಚರಿತ್ರೆ, ಭೂಗೋಳವನ್ನು ಓದಲು ನಿಶ್ಚಯಿಸಿದೆವು. ಹೇಗಾದರೂ ಕೊನೆಯ ದಿನ ಪೂರ್ತಿ ನಿದ್ದೆಗೆಟ್ಟರೂ ಮಾರನೆಯ ದಿನ ಪರೀಕ್ಷೆ ಮುಗಿದ ಮೇಲೆ ಹಾಯಾಗಿ ನಿದ್ದೆ ಮಾಡಬಹುದೆಂಬ ಧೈರ್ಯ. ಆದುದರಿಂದ ನಾವು ಒಂದೇ ಕೊಠಡಿಯಲ್ಲಿ ಕುಳಿತು ಓದಲು ಮೊದಲು ಮಾಡಿದೆವು. ಸುಮಾರು ರಾತ್ರಿ ಒಂದು ಘಂಟೆಯ ಹೊತ್ತಿಗೆ ಒಬ್ಬ ಹುಡುಗ ತನಗೆ ಹಸಿವಾಗುತ್ತಿದೆ ಎಂದು ಹೇಳಿದ. ಆತನು ಹೇಳಿದ ಮೇಲೆ ನಮಗೂ ಹಾಗೆಯೇ ಅನಿಸಿತು. ಪುಸ್ತಕಗಳನ್ನು ಪಕ್ಕಕ್ಕಿಟ್ಟು ಆ ವೇಳೆಯಲ್ಲಿ ಹಸಿವು ಹೋಗಲಾಡಿಸಿಕೊಳ್ಳಲು ಏನು ಮಾಡಬೇಕೆಂದು ತೀವ್ರವಾಗಿ ಯೋಚನೆ ಮಾಡಲು ಮೊದಲು ಮಾಡಿದೆವು. ಸರಿ, ಚಿತ್ರಾನ್ನ ಮಾಡಿ ತಿನ್ನುವುದು ಅತ್ಯಂತ ಸೂಕ್ತವಾದ ಕೆಲಸ ಎಂಬ ನಿರ್ಧಾರಕ್ಕೆ ಬಂದೆವು. ಸರಿ, ಅದಕ್ಕೆ ಬೇಕಾಗುವ ಏರ್ಪಾಟುಗಳಲ್ಲಿ ತೊಡಗಿದೆವು. ಉಗ್ರಾಣದ ಬೀಗದ ಕೀ ನನ್ನಲ್ಲಿಯೇ ಇತ್ತು. ಚಿತ್ರಾನ್ನಕ್ಕೆ ಬೇಕಾಗುವ ಅಕ್ಕಿ, ತೆಂಗಿನಕಾಯಿ, ಎಣ್ಣೆ ಇತ್ಯಾದಿ ಎಲ್ಲಾ ಲವಾಜಮೆಗಳನ್ನು ತೆಗೆದುಕೊಂಡು ಒಬ್ಬೊಬ್ಬರು ಒಂದೊಂದು ಕೆಲಸವನ್ನು ಹಂಚಿಕೊಂಡು ಚಿತ್ರಾನ್ನ ಮಾಡುವುದರಲ್ಲಿ ಮಗ್ನರಾದೆವು. ಬೆಳಗಿನ ಜಾವ ಎರಡು ಗಂಟೆಯ ಹೊತ್ತಿಗೆ ಚಿತ್ರಾನ್ನ ಸಿದ್ಧವಾಯಿತು. 15–20 ನಿಮಿಷಗಳಲ್ಲಿ ಚೆನ್ನಾಗಿಯೇ ತಿಂದು ಮುಗಿಸಿ ಮಾರನೇ ದಿನದ ಪರೀಕ್ಷೆಯನ್ನು ಜ್ಞಾಪಿಸಿಕೊಂಡು ನಮ್ಮ ಓದನ್ನು ಮುಂದುವರಿಸಿದೆವು. 15–20 ನಿಮಿಷಗಳಾದ ಮೇಲೆ ಎಲ್ಲರಿಗೂ ಬಲವಾದ ತೂಕಡಿಕೆ ಪ್ರಾರಂಭವಾಯಿತು. ಅಕ್ಷರಗಳು ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ತಲೆಯ ಸಮತೋಲನ ತಪ್ಪಿತು. ಮುಂದಕ್ಕೆ ಹಿಂದಕ್ಕೆ ಆಂದೋಲನ ಮೊದಲಾಯಿತು. ನಿದ್ದೆ ಹೋಗಲಾಡಿಸಲು 15–20 ನಿಮಿಷ ಗಾಳಿ ಸವಾರಿ ಮಾಡುವುದು ಉತ್ತಮ ಎಂಬ ಸಲಹೆಗೆ ಅವಿರೋಧವಾದ ಒಮ್ಮತ ಸಿಕ್ಕಿತು. ಸರಿ, ಪುಸ್ತಕಗಳನ್ನೆಲ್ಲಾ ಅಲ್ಲಿಯೇ ಬಿಟ್ಟು ಬೆಳಗಿನ ಜಾವ ಸುಮಾರು ಎರಡೂವರೆ ಗಂಟೆಯಲ್ಲಿ ನಾವು ವಾಕಿಂಗ್ ಹೊರಟೆವು. ಗಾಂಧೀಬಜಾರ್ ಸುತ್ತಿಕೊಂಡು ಈಗಿನ ಟಾಗೂರ್ ಸರ್ಕಲ್ ಹಾದು ನಿಲಯಕ್ಕೆ ವಾಪಸು ಬಂದು ನಮ್ಮ ಓದನ್ನು ಮುಂದುವರಿಸಲು ಪ್ರಯತ್ನಿಸಿದೆವು. ಬಲವಾದ ಚಿತ್ರಾನ್ನದ ಊಟ

ಮತ್ತು ವಾಕಿಂಗ್ ಎರಡೂ ಸೇರಿ ತಡೆಯಲಾರದ ನಿದ್ದೆ ಬಂತು. ನಮಗೆ ಅರಿವಿಲ್ಲದೆಯೇ ನಮ್ಮ ಮುಂದೆ ಇದ್ದ ಶ್ಯಾನುಭೋಗರ ಡೆಸ್ಕ್ ಮೇಲೆ ತಲೆ ಇಟ್ಟು ಗಾಢವಾಗಿ ನಿದ್ದೆ ಮಾಡಿದೆವು. ಸುಮಾರು ಐದು ಗಂಟೆಯ ಹೊತ್ತಿಗೆ ನಮ್ಮಲ್ಲಿ ಒಬ್ಬನಿಗೆ ಮೊದಲು ಎಚ್ಚರವಾಯಿತು. ನಮ್ಮನ್ನೆಲ್ಲ ಎಬ್ಬಿಸಿದನು. ನನಗಂತೂ ತುಂಬಾ ಗಾಬರಿಯಾಯಿತು. ಬೆಳಗಿನ ಜಾವ ಒಂದು ಗಂಟೆಯಿಂದ ಐದು ಗಂಟೆಯವರೆಗೆ ಚಿತ್ರಾನ್ನ ತಯಾರು ಮಾಡಿದ್ದು, ಊಟ, ತೂಕಡಿಕೆ, ವಾಕಿಂಗ್ ಮತ್ತು ನಿದ್ದೆ. ನಾಲ್ಕು ಗಂಟೆ ಅಮೂಲ್ಯವಾಗಿ ವ್ಯರ್ಥವಾಯಿತಲ್ಲ ಎಂಬ ವ್ಯಥೆ. ಉಳಿದ ಕಾಲದಲ್ಲಿ ಆದಷ್ಟು ಓದಿ ಬೆಳಗಿನ 10 ಗಂಟೆಗೆ ಪರೀಕ್ಷೆಗೆ ಹೋದೆವು. ಸಾಧಾರಣವಾದ ತೃಪ್ತಿಕರವಾದ ರೀತಿಯಲ್ಲಿ ಉತ್ತರಿಸಿದೆನು.

## ಶ್ಯಾನುಭೋಗರ ಕಿರಿಕಿರಿ

ನಮ್ಮೂರಿನ ಶಾಸ್ತ್ರಿಗಳಿಗೂ ಮತ್ತು ಶ್ಯಾನುಭೋಗರಿಗೂ ಹೆಚ್ಚಿನ ವೈಮನಸ್ಸಿತ್ತು. ಒಬ್ಬರಿಗೊಬ್ಬರು ಮಾತೇ ಆಡುತ್ತಿರಲಿಲ್ಲ. ಒಂದು ಸಾರಿ ಸಚಿವರು ನಮ್ಮೂರಿಗೆ ಭೇಟಿ ಕೊಟ್ಟಾಗ ತಮ್ಮ ಮನೆಯ ಹತ್ತಿರಕ್ಕೆ ಸಚಿವರು ಭೇಟಿ ಕೊಡಬೇಕೆಂದು ಶಾಸ್ತ್ರಿಗಳು ತುಂಬಾ ವಿನಯದಿಂದ ಕೇಳಿಕೊಂಡರು. ಸಚಿವರು ಒಪ್ಪಿ ಭೇಟಿ ಕೊಟ್ಟರು. "ಮಹಾಸ್ವಾಮಿ ಇಲ್ಲಿ ಚರಂಡಿ ಹರಿಯುತ್ತಿದೆ. ಇದು ನಮ್ಮ ಅಡಿಗೆ ಮನೆಯ ಪಕ್ಕದಲ್ಲಿಯೇ ಹೋಗುತ್ತದೆ. ಅದನ್ನು ಬೇರೆ ಕಡೆ ಹೋಗುವ ಹಾಗೆ ಮಾಡಬೇಕೆಂದು ಊರಿನ ಶ್ಯಾನುಭೋಗರಿಗೆ ಹಲವು ಸಲ ಹೇಳಿದ್ದಾಯಿತು. ಎಲ್ಲವೂ ವ್ಯರ್ಥವಾಯಿತು. ತಾವೇ ನೋಡಿ ಈ ಚರಂಡಿಯ ವಾಸನೆ, ಅದೂ ಅಡಿಗೆ ಮನೆ ಪಕ್ಕದಲ್ಲಿ" ಎಂದರು. ಸಚಿವರಿಗೆ ಶಾಸ್ತ್ರಿಗಳು ಹೇಳಿದ್ದು ಮನದಟ್ಟಾಯಿತು. ಕೋಪದಿಂದ ಶ್ಯಾನುಭೋಗರ ಕಡೆ ನೋಡಿ "ಯಾತಕ್ರೀ ಈ ಚರಂಡಿಯನ್ನು ದೂರದಲ್ಲಿ ಹಾದು ಹೋಗುವ ಹಾಗೆ ಮಾಡಿಲ್ಲ. ಕೆಟ್ಟ ವಾಸನೆ, ಪಕ್ಕದಲ್ಲಿಯೇ ಅಡಿಗೆ ಮನೆ" ಎಂದು ಛೇಡಿಸಿದರು. ಅದಕ್ಕೆ ಶ್ಯಾನುಭೋಗರು "ಸ್ವಲ್ಪ ತಡವಾಯಿತು ಮಹಾಸ್ವಾಮಿ, ಕ್ಷಮಿಸಬೇಕು, ನಾಳೆಯೇ ಇದನ್ನು ಸರಿಪಡಿಸುತ್ತೇನೆ" ಎಂದು ಅತಿ ವಿನಯದಿಂದ ಅಲ್ಲಿ ಸೇರಿದ್ದ ದೊಡ್ಡ ಜನಸಮೂಹದ ಸಮ್ಮುಖದಲ್ಲಿ ಆಶ್ವಾಸನೆ ಕೊಟ್ಟರು. ನಾವೆಲ್ಲಾ ಇದನ್ನು ಕೇಳುತ್ತಿದ್ದೆವು. ಶ್ಯಾನುಭೋಗರಂತೂ ಸಚಿವರು ಬಂದಾಗಿನಿಂದ ಕೊನೆಯ ತನಕ ಅಂಜಲೀ ಬದ್ಧರಾಗಿಯೇ ಇದ್ದರು. ಎಲ್ಲಾ ಆದ ಮೇಲೆ ಸಚಿವರನ್ನು ಗೌರವಾದರಗಳಿಂದ ಬೀಳ್ಕೊಟ್ಟರು. ಸಚಿವರು ತಮ್ಮ ಕಾರಿನಲ್ಲಿ ಹೊರಟರು. ಬಂದಿದ್ದ ಸಿಬ್ಬಂದಿಯೂ ತಮ್ಮ ವಾಹನಗಳಲ್ಲಿ ಸಚಿವರನ್ನು ಹಿಂಬಾಲಿಸಿದರು. ಶ್ಯಾನುಭೋಗರು ಅಲ್ಲಿಯತನಕ ತಮ್ಮ ಎದೆಗೆ ಅಡ್ಡವಾಗಿ ಕಟ್ಟಿದ್ದ ಕೈಗಳಿಗೆ ಬಿಡುಗಡೆಯಾಗಿ ತಮ್ಮ ಸಹಜ ಸ್ಥಿತಿಗೆ ಬಂದವು. ಜನಸ್ತೋಮ ಇನ್ನೂ ಕರಗಿರಲಿಲ್ಲ. ಆಗ ಮೊದಲಾಯಿತು. ಶಾಸ್ತ್ರಿಗಳ ಮೇಲೆ ಶ್ಯಾನುಭೋಗರ ಆಕ್ರೋಶ. "ಏನೋ ........ ಮಗನೇ ನನ್ನ ಮೇಲೆ ಆ ಗೌಡನಿಗೆ ದೂರು ಹೇಳ್ತಿಯೇನೋ. ಈ ಊರಿಗೆ ಯಾರೋ ಗೌಡ (ಮುಖ್ಯಸ್ಥ) ನಾನೋ, ಆ ಗೌಡ ಬಂದ ಅರ್ಧ ಗಂಟೆ ಇದ್ದು ಹೋದ. ಈಗ ನಿನ್ನ ಅಡಿಗೆ ಮನೆ ಪಕ್ಕದಲ್ಲಿ ಹರಿಯುತ್ತಿರುವ ಚರಂಡಿಯನ್ನು ನಿನ್ನ ಅಡಿಗೆ ಮನೆ ಒಳಗೇ ಹರಿಯುವಂತೆ ಮಾಡ್ತೀನಿ ಹೋಗು. ಮತ್ತೆ ಆ ಗೌಡನಿಗೆ ದೂರು ಹೇಳು"

ಅಂತ ವಾಚಾಮಗೋಚರವಾಗಿ ಬೈದರು. ತಕ್ಷಣ ಮೊದಲಾಯಿತು ಇಬ್ಬರ ಸಂವಾದ. ಅವಾಚ್ಯ ಶಬ್ದಗಳ ಸುರಿಮಳೆ. ಇಬ್ಬರ ಶಬ್ದ ಭಂಡಾರವೂ ಅವಾಚ್ಯ ಶಬ್ದಗಳಿಗೆ ಫಲವತ್ತಾಗಿತ್ತು ಅಂತ ಗೊತ್ತಾಯಿತು. ಇವು ಅಲ್ಲಿದ್ದ ಹಳ್ಳಿಯುವರನ್ನು ನಾಚಿಸುವಂತಿದ್ದವು. ಕೈ ಕೈ ಮಿಲಾಯಿಸುವುದನ್ನು ಹಳ್ಳಿಯವರು ತಪ್ಪಿಸಿದರು. ಸುಸಂಸ್ಕೃತರು ಅನಿಸಿಕೊಂಡವರು ಇಂತಹ ಅಯೋಗ್ಯ ಪದಗಳನ್ನು ಲೀಲಾಜಾಲವಾಗಿ ಹೇಳಿದ್ದು ನನಗೆ ಆಶ್ಚರ್ಯವಾಯಿತು, ಮನಸ್ಸಿಗೆ ನೋವಾಯಿತು.

## ಎಚ್ಚೆನ್ ಕಾಡಿದ ಟೈಫಾಯಿಡ್

ಒಂದು ಸಲ ನನಗೆ ಜ್ವರ ಬಂತು. ಒಂದೆರಡು ದಿನವಾದರೂ ನಿಲ್ಲಲಿಲ್ಲ. ಡಾಕ್ಟರ್ ಬಂದು ಪರೀಕ್ಷೆ ಮಾಡಿ ಟೈಫಾಯಿಡ್ ಇರಬಹುದು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿದರೆ ಒಳ್ಳೆಯದೆಂದು ಹೇಳಿದರು. ಆ ಕಾಲದಲ್ಲಿ ಟೈಫಾಯಿಡ್ ಜ್ವರದ ಬಗ್ಗೆ ಬಹಳ ಜಾಗರೂಕತೆಯಿಂದ ಇರಬೇಕಾಗಿತ್ತು. ಒಂದು ಜಟಕಾಗಾಡಿಯಲ್ಲಿ ನಾನು ಮತ್ತು ರಾಮಕೃಷ್ಣ ವಿದ್ಯಾರ್ಥಿ ನಿಲಯದ ಋತ್ಮಾನಂದರು ಹೋದೆವು. ಆಸ್ಪತ್ರೆಗೆ ನನ್ನನ್ನು ಸೇರಿಸಿದರು. ಯಾವ ಕಾಯಿಲೆ ಅಂತ ಇಲ್ಲಿಗೆ ಬಂದಿದ್ದೀರಿ ಅಂತ ಡಾಕ್ಟರು ಬಂದರು. ಟೈಫಾಯಿಡ್ ಇರಬಹುದು ಅಂದೆ. ಟೆಂಪರೇಚರ್ ನೋಡಿಕೊಂಡು ಹೋದರು. ಪಕ್ಕದ ಮಂಚದಲ್ಲಿ ಮಲಗಿದ್ದ ರೋಗಿ ಅಯ್ಯೋ ಅಮ್ಮ, ಅಪ್ಪ ಅಂತ ನರಳುತ್ತಿದ್ದವನು ನನ್ನನ್ನು ನೋಡಿ ನಿನಗೇನಾಗಿದೆಯಪ್ಪಾ ಅಂತ ಕೇಳಿದ. ನಾನು ಟೈಫಾಯಿಡ್ ಇರಬಹುದು ಅಂದೆ. ಅದಕ್ಕೆ ಅವನು ಅಯ್ಯೋ ಟೈಫಾಯಿಡ್ ಜ್ವರವೇ, ನೆನ್ನೆ ತಾನೇ ನೀನು ಮಲಗಿರುವ ಮಂಚೆ ಮೇಲೆ ಒಬ್ಬ ರೋಗಿ ಟೈಫಾಯಿಡ್ ಜ್ವರದಿಂದ ಸತ್ತುಹೋದ ಅಂದ. ಅದನ್ನು ಕೇಳಿ ನನಗಂತೂ ವಿಪರೀತ ಭಯವಾಯಿತು. ನನಗೇನೇನೋ ಯೋಚನೆಗಳು, ಮೊದಲನೆಯದಾಗಿ ನೆನ್ನೆ ತಾನೇ ಸತ್ತು ಹೋದವನ ಮಂಚದ ಮೇಲೆಯೇ ಮಲಗಿದೀನಿ. ಎರಡನೆಯದಾಗಿ ನನಗೂ ಅದೇ ಟೈಫಾಯಿಡ್ ಜ್ವರವೇ. ರಾತ್ರಿ ಅರ್ಧಂಬರ್ಧ ನಿದ್ದೆ ಮಾಡಿದೆ. ಬೆಳಗ್ಗೆ ಡಾಕ್ಟರ್ ಬಂದು ಟೆಂಪರೇಚರ್ ನೋಡಿ ಏನೂ ಹೇಳದೇ ಹೋದರು. ನನಗೆ ಗಾಬರಿ ಹೆಚ್ಚಾಯಿತು. ಮಾರನೆಯ ದಿನ ಮತ್ತೆ ಟೆಂಪರೇಚರ್ ಪರೀಕ್ಷೆ ಮಾಡಿ ಯಾರ್ರೀ ನಿಮಗೆ ಟೈಫಾಯಿಡ್ ಅಂತ ಹೇಳಿದ್ದು. ನಿಮಗೆ ಜ್ವರವೂ ಇಲ್ಲ ಟೈಫಾಯಿಡ್ ಮೊದಲೇ ಇಲ್ಲ. ಎದ್ದು ಮನೆಗೆ ಹೋಗಿ ಅಂದರು. ಬಹುಶ: ಪಕ್ಕದ ಹಾಸಿಗೆಯ ರೋಗಿ ಹೇಳಿದ ಮಾತಿನಿಂದ ಉಂಟಾದ ಭಯವೇ ನನಗೆ ಔಷಧಿಯಾಗಿ ಇದ್ದ ಜ್ವರ ಓಡಿಹೋಗಿರಬೇಕು ಅಂದುಕೊಂಡು ಆಸ್ಪತ್ರೆಯಿಂದ ಬಂದೆ. ■

---

## ವಾತಾವರಣ

**ರಾಜಕೀಯದಂತೆ**
**ವಾತಾವರಣವೂ**
**ಹದಗೆಟ್ಟಿದೆ**
**ಏಕೆಂದರೆ ಮುಂಗಾರು**
**ಕೈ ಕೊಟ್ಟಿದೆ.**

# ಸೋಮು ಎನ್ನುವ ನದಿ

● ಬೇಲೂರು ರಾಮಮೂರ್ತಿ

ಎಲ್ಲಿಗೋ ಹೊರಟವನು ಇನ್ನೆಲ್ಲಿಗೋ ಹೋಗಿ ಸೇರೋದು ಸೋಮುಗೆ ಅಂಟಿಕೊಂಡು ಬಂದಿರುವ ಗುಣ. ಇದನ್ನು ಸೋಮಿ ಸಹಿಸಿಕೊಂಡು ಬಂದಿದ್ದರೂ ಕೆಲವೊಮ್ಮೆ ಎಡವಟ್ಟುಗಳು ನಡೆದು ಅವಳು ಕೋಪ ಮಾಡಿಕೊಳ್ಳುವ ಹಾಗಾಗುತ್ತೆ. ಆಗ ಸೋಮು "ನದಿ ಎಲ್ಲೆಲ್ಲಿ ಹರಿದರೂ ಕಡೆಗೆ ಅದು ಸೇರೋದು ಸಮುದ್ರನೇ ಅಲ್ವೇನೇ" ಅಂದು ಅವಳ ತೊಡೆ ಮೇಲೆ ತಲೆ ಇಟ್ಟು ಮಲಗಿಬಿಡ್ತಾನೆ. ಅಲ್ಲಿಗೆ ಸೋಮಿ ಕರಗಿಬಿಡ್ತಾಳೆ.

ಅವತ್ತು ಸೋಮು ಮಾವ ಬರುವ ದಿನ. ಒಂದು ವಾರದ ಹಿಂದೇನೇ ಅವರು ಫೋನ್ ಮಾಡಿ "ಅಳಿಯಂದಿರೇ ನಾನು ಮುಂದಿನ ಸೋಮವಾರ ನಿಮ್ಮ ಮನೆಗೆ ಬೆಳಗ್ಗೆ ಹನ್ನೊಂದು ಗಂಟೆಗೆ ಸರಿಯಾಗಿ ಬರ್ತೀನಿ. ಇಬ್ಬರೂ ಕೂತು ತಿಂಡಿ ತಿನ್ನೋಣ. ಹಾಗೇ ನಿಮ್ಮತ್ರ ಒಂದು ವಿಶೇಷ ವಿಷಯ ಚರ್ಚೆ ಮಾಡೋದು ಇದೆ" ಅಂತ ಹೇಳಿದ್ರು. ಅವತ್ತು ಸೋಮು ಬೇಗ ಎದ್ದು ಸ್ನಾನ ಮಾಡಿ ಶುಭ್ರವಾದ ಬಟ್ಟೆ ಹಾಕಿಕೊಂಡು " ಸೋಮಿ ತಿಂಡಿ ರೆಡಿ ಮಾಡು ಮಾವ ಬಂದ ಮೇಲೆ ಒಟ್ಟಿಗೇ ತಿಂಡಿ ತಿನ್ನೋಣ" ಅಂದು ಪೇಪರ್ ಹಿಡಿದು ಕೂತ. ಆಗ ಸೋಮಿ " ಅಪ್ಪ ಬರೋ ಹೊತ್ತಿಗೆ ಒಂದ್ಕೆಲಸ ಮಾಡಿ, ಅಂಗಡಿಗೆ ಹೋಗಿ ಹೆಸರು ಬೇಳೆ ತಗೊಂಡು ಬನ್ನಿ ಅಪ್ಪನಿಗೆ ಹೆಸರು ಬೇಳೆ ಪಾಯಸ ಅಂದ್ರೆ ತುಂಬಾ ಇಷ್ಟ. ಊಟಕ್ಕೆ ಅದನ್ನು ಮಾಡ್ತೀನಿ" ಅಂದಳು. ಸೋಮು ಅಂಗಡಿಗೆ ಹೊರಟ.

ಏನಾಶ್ಚರ್ಯ, ಸೋಮು ಅಂಗಡಿ ಹುಡುಕಿಕೊಂಡು ಹೊರಟರೆ ಅಂಗಡಿಯೇ ಅವನನ್ನು ಹುಡುಕಿಕೊಂಡು ಬಂತು. ಅಂದ್ರೆ ಸೋಮು ಯಾವಾಗಲೂ ಪ್ರಾವಿಷನ್ ತಗೊಳೋ ಅಂಗಡಿ ಮಾಲೀಕ ಸುಬ್ಬಯ್ಯ ದಾರೀಲಿ ಸಿಕ್ಕಿದ. ಸೋಮು, "ಇದೇನು ಸುಬ್ಬಯ್ಯ ಇನ್ನೂ ಅಂಗಡಿ ತೆಗೆದಿಲ್ವಾ, ನಂಗೆ ಅರ್ಜಂಟಾಗಿ ಅರ್ಧ ಕೆ.ಜಿ. ಹೆಸರು ಬೇಳೆ ಬೇಕಲ್ಲ" ಅಂದ. ಅದಕ್ಕೆ ಸುಬ್ಬಯ್ಯ "ಅದಕ್ಕೇನು ಬನ್ನಿ ಕೊಡೋಣ. ಒಂದೇ ಒಂದು ನಿಮಿಷ, ತಾಲ್ಲೂಕು ಆಫೀಸಿಗೆ ಹೋಗಿ ಬಂದುಬಿಡ್ತೀನಿ. ನೀವೂ ಬನ್ನಿ, ಹೀಗೆ ಹೋಗಿ ಹಾಗೆ ಬಂದುಬಿಡೋಣ" ಅಂದು ಸೋಮುನ ಕರೆದ. ಸೋಮು ಖುಷಿಯಿಂದ ಸುಬ್ಬಯ್ಯನ ಬೈಕ್ ಹತ್ತಿದ.

"ಇಲ್ಲಿ ಕೂತಿರಿ ಒಂದು ನಿಮಿಷ ಬಂದೆ" ಅಂದು ಒಳಗೆ ಹೋದ ಸುಬ್ಬಯ್ಯ ಅರ್ಧ ಗಂಟೆ ಆದರೂ ಬರಲಿಲ್ಲ. ಹೋಗ್ಲಿ ಬೇರೆ ಅಂಗಡೀಲೇ ಹೆಸರು ಬೇಳೆ ತಗೊಂಡು ಹೋಗೋಣ ಅಂತ ಸೋಮು ಎದ್ದಾಗ ಸುಬ್ಬಯ್ಯ ಬಂದು "ಇನ್ನೊಂದು ನಿಮಿಷ, ಅವರು ಒಂದು ಕಪ್ ಕಾಫಿ ಕೊಡಿಸಿ ಅಂದಿದಾರೆ ನೀವೂ ಬನ್ನಿ, ಕಾಫಿ ಕುಡ್ಕೊಂಡು ಬಂದು ಹೊರಟುಬಿಡೋಣ" ಅಂದ. ಸೋಮು ಅವರ ಜೊತೆ ಹೊರಟ. ಸುಬ್ಬಯ್ಯ "ಹೇಗಾದರೂ ಆಗಲಿ ಇವರನ್ನು ಪರಿಚಯ ಮಾಡಿಕೊಂಡಿರಿ ಯಾವಾಗಲಾದರೂ ಕೆಲಸಕ್ಕೆ ಬೇಕಾಗುತ್ತೆ " ಅಂದು ತಾಲ್ಲೂಕು ಆಫೀಸಿನ ಪರಮೇಶನನ್ನು ಪರಿಚಯ ಮಾಡಿಸಿದ. ಪರಮೇಶ ಸೋಮು ಜನ್ಮ ಜಾಲಾಡುವಂತೆ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಎಸೆಯುತ್ತಾ ಬಂದ.

ಮತ್ತೆ ಮೂವರೂ ತಾಲ್ಲೂಕು ಆಫೀಸಿಗೆ ಬಂದರು. "ಇನ್ನೊಂದೇ ನಿಮಿಷ ಬಂದೆ" ಅಂದು ಸುಬ್ಬಯ್ಯ ಪರಮೇಶನ ಹಿಂದೆ ಹೋದ. ಅಷ್ಟರಲ್ಲಿ " ಹಲೋ ನೀವು ಸೋಮು ಅಲ್ವಾ" ಅಂದ ಒಂದು ಸುಂದರ ಧ್ವನಿ ಬಂತು. ಅತ್ತ ಕಡೆ ನೋಡಿದರೆ ಪರಿಮಳ. ಈ ಹಿಂದೆ ಸೋಮು ಆಫೀಸಿನಲ್ಲೇ ಕೆಲಸ ಮಾಡುತ್ತಿದ್ದ ಪರಿಮಳ. ಸೋಮು ಮುಖ ಊರಗಲ ಆಯಿತು. ಅವಳಿಗೆ ಮುಂಚೆ ತಾನೇ ಕೈನೀಡಿ ಅವಳ ಕೈ ಹಿಸುಕಿ "ಇದೇನ್ರೀ ಪರಿಮಳ ಇಲ್ಲಿ, ಏನ್ಸಮಾಚಾರ, ಎಷ್ಟು ದಿವಸ ಆಯ್ತು ನಿಮ್ಮನ್ನು ನೋಡಿ, ಏನ್ ಕಥೆ, ಹೇಗಿದೀರ, ಎಷ್ಟು ಜನ ಯಜಮಾನರು, ಸಾರಿ ಯಜಮಾನರು ಹೇಗಿದಾರೆ ಎಷ್ಟು ಜನ ಮಕ್ಕಳು" ಅಂತ ಒಂದೇ ಉಸುರಿಗೆ ಮಾತಾಡಿದ. ಪರಿಮಳ ಅವನ ಕೈ ಬಿಡಿಸಿಕೊಂಡು ಸೋಮು ಪಕ್ಕ ಕೂತು ತೊಡೆ ತಟ್ಟಿ "ಏನ್ಸಾರ್ ನೀವು ಒಂದು ಚೂರೂ ಬದಲಾಗಿಲ್ಲ ಹಾಗೇ ಇದೀರ"ಅಂದಳು. "ಇಲ್ಲಿ ನಾವು ಮಾತಾಡ್ತಾ ಕೂತರೆ ಇವರಿಗೆ ತೊಂದರೆ ಆಗುತ್ತೆ ಬನ್ನಿ" ಅಂತ ಸೋಮುನೇ ಅವಳನ್ನು ಆಚೆ ಕರ್ಕೊಂಡು ಬಂದ. ಕಾಫಿ ಕುಡಿಯೋಣ್ವಾ ಅಂದು ಅವನೇ ಪರಿಮಳಳನ್ನು ಹೋಟೆಲಿಗೆ ಕರೆದುಕೊಂಡು ಹೋಗಿ ಎಸಿ ರೂಮಿನಲ್ಲಿ ಅವಳ ಪಕ್ಕ ಕೂತು "ಇನ್ನೇನ್ಸಮಾಚಾರ" ಅಂದ. "ಸರ್ ಈ ಹೋಟೆಲಿನಲ್ಲಿ ದೋಸೆ ತುಂಬಾ ಚನ್ನಾಗಿರುತ್ತೆ ತಗೊಳೋಣ್ವಾ" ಅಂತ ಕೇಳಿದಳು. ಸೋಮಿ ತಲೆಯಾಡಿಸಿ ಅವಳ ಭುಜಕ್ಕೆ ಡಿಕ್ಕಿ ಕೊಟ್ಟ.

ಸೋಮು "ಪರಿಮಳಾ ನೀವು ಏನೇ ಹೇಳಿ ನೀವು ಅವತ್ತು ಹೇಗಿದ್ರೋ ಇವತ್ತೂ ಹಾಗೇ ಇದೀರ. ನಿಮ್ಮ ಜೊತೆ ಇದ್ರೆ ಸಮಯ ಹೋಗೋದೇ ತಿಳಿಯೋಲ್ಲ. ಅದ್ಯಾವ್ದೋ ಸೆಂಟು ಬೇರೆ ಹಾಕ್ಕೊಂಡಿದೀರ. ಅದರಿಂದ ನಿಮ್ಮ ಹತ್ರಾನೇ ಇರೋಣ ಅನಿಸ್ತಿದೆ" ಅಂದು ಇನ್ನೂ ಸ್ವಲ್ಪ ಪಕ್ಕ ಸರಿದ. ಇಬ್ಬರೂ ಏನೇನೋ ಹರಟಿದರು. ನಂತರ "ಅದೇನು ನೀವು ತಾಲ್ಲೂಕು ಆಫೀಸಿಗೆ ಬಂದಿದ್ದು ಅಂತ ಕೇಳಿದ. ಒಂದು ಸರ್ಟಿಫಿಕೇಟು ಬೇಕಾಗಿತ್ತು. ಅವರು ಮಧ್ಯಾಹ್ನ ಎರಡು ಗಂಟೆಗೆ ಬನ್ನಿ ಅಂದರು. ನಾನು ಸ್ವಲ್ಪ ಬೇಗನೇ ಬಂದೆ. ನೀವು ಸಿಕ್ಕಿದ್ದು ನನ್ನ ಅದೃಷ್ಟ. ಹೋಗೋಣ್ವಾ ಸಾರ್, ಈಗ ನನ್ನ ಕೆಲಸ ಆಗಿರುತ್ತೆ" ಅಂದವಳು ಸೋಮುನ "ನೀವೇನ್ಸಾರ್ ತಾಲ್ಲೂಕು ಆಫೀಸಿಗೆ ಬಂದಿದೀರ" ಅಂತ ಕೇಳಿದಳು. ಸೋಮು ಸರ್ವೇ ಸಾಧಾರಣವಾಗಿ " ಅರ್ಧ ಕೆಜಿ ಹೆಸರು ಬೇಳೆ ಬೇಕಾಗಿತ್ತು ಅದಕ್ಕೆ ಬಂದೆ" ಅಂದ. ಅವನ ಮಾತು ಕೇಳಿ ಪರಿಮಳ ಸ್ವಲ್ಪ ಜೋರಾಗೇ ನಕ್ಕಿದ್ದಕ್ಕೆ ಹೋಟೆಲಿನವರೆಲ್ಲಾ ಇವರಿಬ್ಬರ ಕಡೆನೇ ನೋಡಿದರು. ನಂತರ ತನ್ನ ತಪ್ಪು ಸರಿಪಡಿಸಿಕೊಂಡ ಸೋಮು ಪರಮೇಶನ ವಿಚಾರ ತಿಳಿಸಿದ.

ರಸ್ತೆಯಲ್ಲಿ ನಡೆಯುವಾಗಲೂ ಪರಿಮಳಂಗೆ ಡಿಕ್ಕಿ ಹೊಡ್ಕೊಂಡೇ ಬಂದ ಸೋಮು. ತಾಲ್ಲೂಕು ಆಫೀಸಿಗೆ ಬಂದು ವಿಚಾರಿಸುವ ಹೊತ್ತಿಗೆ ಪರಿಮಳ ಕೆಲಸ ಆಗಿತ್ತು. ಸರ್ಟಿಫೀಕೇಟ್ ತಗೊಂಡು ಪರಿಮಳ "ಸಾರ್ ನಾನು ಬರ್ಲಾ, ಅಂದ ಹಾಗೆ ನಿಮ್ಮ ಮನೆಗೆ ಹೆಸರುಬೇಳೆ ಪಾಯಸ ಕುಡಿಯೋಕೆ ನಾನೂ ಬರಬಹುದಾ" ಅಂತ ಕೇಳಿದಳು. ಸೋಮು "ನಿಮಗೆ ಹೇಗೆ ಗೊತ್ರೀ" ಅಂದ. "ಇನ್ನೇನ್ಸಾರ್ ಅರ್ಧ ಕೆಜಿ ಹೆಸರು ಬೇಳೆ ತಗೊಂಡು ಏನ್ ಮಾಡ್ತೀರ. ಕೋಸಂಬರಿ ಮಾಡಬೇಕು ಇಲ್ಲಾ ಪಾಯಸ ಮಾಡಬೇಕು" ಅಂದು ಭುಜ ಕುಣಿಸಿ ನಕ್ಕಳು. ಏನಾದರಾಗಲಿ ಅಂತ ಸೋಮು ಅವಳ ಕೆನ್ನೆ ಚಿವುಟಿ ಬಲು ಜಾಣೆ ಅಂದ. "ನಾನು ಬರ್ಲಾ ಸಾರ್" ಅಂದು ಪರಿಮಳ ಹೊರಟ ಮೇಲೆ ಈ ಪರಮೇಶನ್ನ ಇನ್ನೂ ಎಷ್ಟು ಹೊತ್ತು ಕಾಯೋದಪ್ಪಾ ಅಂತ ತಾಲ್ಲೂಕು ಆಫೀಸಿಗೆ ಒಳಗೆಲ್ಲಾ

ಕಣ್ಣು ಆಡಿಸಿದಾಗ ಅಲ್ಲಿದ್ದ ಆಫೀಸರು "ಯಾರಿಗೆ ಹುಡುಕ್ತಾ ಇದೀರ" ಅಂತ ಕೇಳಿದರು. "ಇಲ್ಲಿ ಪರಮೇಶ ಅಂತ A ಒಬ್ಬರು ಬಂದಿದ್ರು" ಅಂತ ಸೋಮು ಅಂದಾಗ ಅವರು " ಆಗಲೇ ಹೋದರಲ್ಲಾ" ಅಂದರು. ಸೋಮು ಸತ್ನೋ ಬದುಕಿದ್ನೋ ಅಂತ ಅಲ್ಲಿಂದ ಓಡಿ ಬಂದ.

ಪರಮೇಶ ಅಂಗಡಿ ತೆಗೆದುಕೊಂಡು ಕೂತಿದ್ದ. " ಎಲ್ಲಿ ಸ್ವಾಮಿ ನಿಮ್ಮನ್ನು ಹುಡುಕೋದು, ಆಫೀಸಿನಲ್ಲಿ ಇಲ್ಲಿ ಕೂತಿದ್ರಲ್ಲ ಅವರು ಎಲ್ಲಿ ಹೋದ್ರು ಅಂತ ಕೇಳಿದರೆ ಯಾವುದೋ ಹೆಂಗಸಿನ ಜೊತೆ ಹೋದರು ಅಂದರು ಯಾರು ಸಾರ್ ಅವರು" ಅಂತ ಕೇಳಿದ. ಸೋಮು ಗಡಿಯಾರ ನೋಡಿಕೊಂಡಾಗ ಮೂರು ಗಂಟೆಯಾಗಿತ್ತು. ತಲೆ ಚಚ್ಕೊಂಡು "ಅದೆಲ್ಲಾ ಇರ್ಲಿ ಈಗ ಅರ್ಧ ಕೆಜಿ ಹೆಸರು ಬೇಳೆ ಕೊಡಿ ಬೇಗ ಮನೆಗೆ ಹೋಗಬೇಕು" ಅಂದ. ಪರಮೇಶ "ನಾನು ಆಗಲೇ ನಿಮ್ಮನೆಗೆ ಹೆಸರು ಬೇಳೆ ಕೊಟ್ಟು ಬಂದೆ, ಸೋಮಿಯವರು ನಮ್ಮ ಯಜಮಾನರು ಎಲ್ಲಿ ಅಂತ ಕೇಳಿದ್ದಕ್ಕೆ ಯಾವುದೋ ಹೆಂಗಸಿನ ಹಿಂದೆ ಅಲ್ಲಲ್ಲಾ ಹೆಂಗಸಿನ ಜೊತೆ ಹೋದ್ರು ಅಂತ ಹೇಳಿ ಬಂದೆ" ಅಂದ.

ಸೋಮು ಮತ್ತೆ ತಲೆ ಚಚ್ಕೊಂಡು ಮನೆಗೆ ಬಂದಾಗ ದೊಡ್ಡ ಲೋಟದಲ್ಲಿ ಹೆಸರು ಬೇಳೆ ಪಾಯಸ ಸುರಿಯುತ್ತಾ ಸೋಮಿ ಅಪ್ಪ "ಇನ್ನೊಂದಿಷ್ಟು ದ್ರಾಕ್ಷಿ ಗೋಡಂಬಿ ಹಾಕಿದ್ರೆ ಇನ್ನಷ್ಟು ರುಚಿಯಿರೋದು" ಅಂದು ಬಾಗಿಲಿನ ಬಳಿ ಸದ್ದು ಗಮನಿಸಿ "ಓಹೋ ಅಳಿಯಂದಿರು ಬಂದ್ರು" ಅಂದ್ರು. ಸೋಮಿ ಸಿಟ್ಟಿನ ಕಣ್ಣುಗಳಿಂದ ಸೋಮುನ ನೋಡಿ "ಎಲ್ರೀ ಹಾಳಾಗಿ ಹೋಗಿದ್ರಿ. ಪರಮೇಶ ಹೇಳಿದ ಯಾವುದೋ ಹೆಂಗಸಿನ ಹಿಂದೆ ಹೋದ್ರು ಅಂತ ಯಾರ್ರೀ ಅದು" ಅಂತ ಗುಡುಗಿದಳು. ಸೋಮು ಪೆಚ್ಚು ಮೋರೆ ಹಾಕಿ, ಪರಿಮಳ ಜೊತೆ ದೋಸೆ ಬಾರಿಸಿದ್ರೂ ಪೆಚ್ಚು ಧ್ವನಿಯಿಂದ "ಬೆಳಗಿಂದ ತಿಂಡಿನೂ ತಿಂದಿಲ್ಲ, ಒಂದು ಕಪ್ ಕಾಫಿ ಕುಡಿದದ್ದು ಅಷ್ಟೆ. ನನಗೂ ಊಟ ಹಾಕಿ ಹೆಸರು ಬೇಳೆ ಪಾಯಸ ಕೊಡು ಎಲ್ಲಾ ಆಮೇಲೆ ಹೇಳ್ತೀನಿ" ಅಂದು ತಟ್ಟೆ ಹಾಕ್ಕೊಂಡು ಊಟಕ್ಕೆ ಕೂತ.

ಸೋಮು ಖುಷಿಯಿಂದ ಊಟ ಪ್ರಾರಂಭಿಸಿದ. ಮಾವ ಪಾಯಸ ಕುಡಿದು ಮುಗಿಸಿ "ಅಳಿಯಂದಿರೇ ನೀವು ನಿಧಾನವಾಗಿ ಊಟ ಮಾಡಿ ನಾನು ಸ್ವಲ್ಪ ಮಲಗಿರ್ತೀನಿ ಎದ್ದ ಮೇಲೆ ಮಾತಾಡೋಣ" ಅಂದರು.

ಸೋಮಿಗೆ ಅಯ್ಯೋ ಅನಿಸಿತು. ಸೋಮು ಎನ್ನುವ ನದಿ ಎಲ್ಲೆಲ್ಲೋ ಅಲೆದರೂ ಅದು ಸೋಮಿ ಎನ್ನುವ ಸಮುದ್ರಕ್ಕೆ ಬಂದು ಬಿತ್ತಲ್ಲಾ ಅಂತ ನೆಮ್ಮದಿಯಿಂದ ಊಟ ಮಾಡುತ್ತಿದ್ದ ಸೋಮುಗೆ ಗಾಳಿ ಬೀಸಿ " ನಿಧಾನವಾಗಿ ಊಟ ಮಾಡಿ, ಆಮೇಲೆ ಬಿಸಿಬಿಸಿ ಪಾಯಸ ಕುಡಿಯುವಿರಂತೆ" ಅಂದಳು. ಪರಿಮಳಳನ್ನು ನೆನೆಸಿಕೊಂಡು ಸೋಮು ಊಟ ಚನ್ನಾಗಿ ಬಾರಿಸಿದ. ■

# ಮನೆ-ಹೆಣ್ಣು

ನೀವು ಏನೇ ಹೇಳಿ
ಮನೆಯೆಂದರೆ
ಒಂದು ಹೆಣ್ಣು
ಇರಲೇಬೇಕು

ಇಲ್ಲದಿದ್ದರೆ ಗಂಡು
ಅಡಿಗೆ - ತಿಂಡಿ ಮಾಡಿ
ಯಾರಿಗೆ
ಬಡಿಸಬೇಕು?